ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

# ಕನ್ನಡ ಭಾರತಿ

KB 12 YEARS 2013

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ನೊಂದವರ ನೈಜ ಕನ್ನಡಿ

ಸಂಪುಟ : 13 ಸಂಚಿಕೆ : 47

1-8-2025 ಶುಕ್ರವಾರ

₹1 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 13 ISSUE : 47

## ದುರಸ್ತಿಪಡಿಸುವಂತೆ ಆಗ್ರಹಿಸಿ ಆಗಸ್ಟ್ 1 ರಂದು ಬೃಹತ್ ಪ್ರತಿಭಟನೆ

**ಹೊನ್ನಾಳಿ :** ಹೊನ್ನಾಳಿಯಿಂದ ಶಿವಮೊಗ್ಗಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಬರುವ ಗೋವಿನಕೋವಿ, ಚಿ. ಕಡದಕಟ್ಟೆ, ಚೀಲೂರು ನಡುವಿನ ರಾಜ್ಯ ಹೆದ್ದಾರಿ ಸಂಪೂರ್ಣ ಹಾಳಾಗಿದ್ದು, ಅದನ್ನು ದುರಸ್ತಿಪಡಿಸುವಂತೆ ಆಗ್ರಹಿಸಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ನೇತೃತ್ವದಲ್ಲಿ ಆಗಸ್ಟ್ 1 ರಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಅರಕೆರೆ ನಾಗರಾಜ್ ಹಾಗೂ ಚೀಲೂರು ಗ್ರಾಮದ ಮುಖಂಡ ಗಿರೀಶ್ ಹೇಳಿದರು.

ಗುರುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕಳೆದ ನಾಲ್ಕೈದು ತಿಂಗಳಿನಿಂದ ಈ ಭಾಗದ ರಸ್ತೆಗಳು ಯಮಸ್ವರೂಪಿಯಾಗಿದ್ದು ರಸ್ತೆಯುದ್ದಕ್ಕೂ ಆಳುದ್ದದ ಗುಂಡಿಗಳು ಬಿದ್ದಿವೆ. ದ್ವಿಚಕ್ರ ವಾಹನಗಳು ಸೇರಿದಂತೆ ಲಾರಿ, ಬಸ್ಸುಗಳು ಓಡಾಡುವುದೇ ದುಸ್ತರವಾಗಿದೆ ಇದೇ ರೀತಿ ಹೊನ್ನಾಳಿ ತಾಲೂಕು ಹಾಗೂ ನ್ಯಾಮತಿ ತಾಲೂಕಿನ ಬಹುತೇಕ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಇವುಗಳ ದುರಸ್ತಿಗೆ ಆಗ್ರಹಿಸಿ ಚೀಲೂರು ಗ್ರಾಮದಲ್ಲಿ ಆಗಸ್ಟ್ 1 ರಂದು ಬೆಳಿಗ್ಗೆ 10 ಗಂಟೆಗೆ ಬೃಹತ್ ಪ್ರತಿಭಟನೆಯನ್ನು ಆರಂಭಿಸಲಾಗುವುದು ಮಾಜಿ ಸಚಿವರು ಸೇರಿದಂತೆ ನಮ್ಮ ಪಕ್ಷದ ಸಾವಿರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ಮನ್ ಕಿ ಬಾತ್ ವೀಕ್ಷಣೆ, ಸರಳ ಆಪ್ ನಲ್ಲಿ ಅಪ್‌ಲೋಡ್ ಮಾಡಿದೆ : ಜುಲೈ 27 ರಂದು ಮೋದಿಯವರು 124 ನೇ ಮನ್ ಕಿ ಬಾತ್ ನಲ್ಲಿ ಮಾತನಾಡಿದ ನೇರ ಪ್ರಸಾರ ಕಾರ್ಯಕ್ರಮವನ್ನು ನಮ್ಮ ಅವಳಿ ತಾಲೂಕಿನ 245 ಬೂತ್ ಗಳಲ್ಲಿಯೂ ನಮ್ಮ ಕಾರ್ಯಕರ್ತರು ವೀಕ್ಷಣೆ ಮಾಡಿದ್ದು, ಇದು ಸರಳ ಆಪ್ ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂದು ಹೇಳಿದರು. 48 ಗಂಟೆಯೊಳಗೆ ಇದನ್ನು ಅಪ್‌ಲೋಡ್ ಮಾಡಲಾಗಿದ್ದು, ಇದೊಂದು ದಾಖಲೆಯಾಗಿದೆ. ಅದೇ ರೀತಿಯಲ್ಲಿ ಮುಂದೆ ನಡೆಯುವ ಎಲ್ಲಾ ಮನ್ ಕಿ ಬಾತ್ ನ ಪ್ರಸಾರವನ್ನು ವೀಕ್ಷಿಸುವ ಮೂಲಕ ನಮ್ಮ ಕಾರ್ಯಕರ್ತರು ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

## ಸುಮನಾಗೆ ಪಿಎಚ್‌ಡಿ ಪದವಿ

**ದಾವಣಗೆರೆ:** ನಗರದ ಬಿಐಇಟಿ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್



ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ವೈ.ಬಿ.ಸುಮನ ಇವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯವು ಪಿಎಚ್‌ಡಿ ಪದವಿ ಪ್ರದಾನ ಮಾಡಿ ಗೌರವಿಸಿದೆ.

ಸುಮನ ಬಿಐಇಟಿ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಡಾ.ಸುರೇಶ ಮಾರ್ಗದರ್ಶನದಲ್ಲಿ ?ಸ್ಟಡಿ ಆಫ್ ಎಮಿಷನ್ ಕ್ಯಾನ್ ಕ್ಯಾರೆಕ್ಟರಿಸ್ಟಿಕ್ಸ್ ಆಫ್ ಎ ಡೀಸೆಲ್ ಇಂಜಿನ್ ಫೀಲ್ಡ್ ವಿತ್ ವೇಸ್ಟ್ ಕುಕ್ಕಿಂಗ್ ಆಯಿಲ್ ಮಿಥೇಲ್ ಇಷ್ಟರ್, ಡೀಸೆಲ್ ಮತ್ತು ಎಥೆನಾಲ್ ಟ್ರೆಂಡ್ಸ್ ಎಂಬ ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ.

ಸುಮನ ನಗರದ ವೈ.ಬಿ.ರಾಮನಾಥ್ ಮತ್ತು ಪುಷ್ಪಾವತಿ ದಂಪತಿ ಪುತ್ರಿಯಾಗಿದ್ದಾರೆ.

# ಕರ್ನಾಟಕ ಕ್ವಾಂಟಮ್ ಮಿಷನ್ ಘೋಷಿಸಿದ ಸಿಎಂ ಸಿದ್ದರಾಮಯ್ಯ; ಸಾವಿರ ಕೋಟಿ ರೂ. ಮೀಸಲು

**ಬೆಂಗಳೂರು:** ರಾಜ್ಯದಲ್ಲಿ 20 ಬಿಲಿಯನ್ ಡಾಲರ್ ಕ್ವಾಂಟಮ್ ಆರ್ಥಿಕತೆಯನ್ನು ನಿರ್ಮಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ 1,000 ಕೋಟಿ ರೂ. ನಿಧಿಯನ್ನು ಮೀಸಲಿಸಿ ಕರ್ನಾಟಕ ಕ್ವಾಂಟಮ್ ಮಿಷನ್(ಕೆಕ್ಯೂಎಂ) ಅನ್ನು ಘೋಷಿಸಿದ್ದಾರೆ. ಇದು ಕರ್ನಾಟಕದ ಕ್ವಾಂಟಮ್ ವಿಷನ್ 2035 ರ ಭಾಗವಾಗಿರುತ್ತದೆ.

ಇಂದು ಬೆಂಗಳೂರಿನಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಚಾರ ಸೊಸೈಟಿ(ಕೆಎಸ್‌ಟಿಇಪಿಎಸ್), ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಐಐಎಸ್‌ಸಿ ಕ್ವಾಂಟಮ್ ಟೆಕ್ನಾಲಜಿ ಇನಿಶಿಯೇಟಿವ್(ಐಕ್ಯೂಟಿಐ) ಸಹಯೋಗದೊಂದಿಗೆ ಆಯೋಜಿಸಲಾಗಿದ್ದ 'ಕ್ವಾಂಟಮ್ ಇಂಡಿಯಾ ಬೆಂಗಳೂರು' ಶೃಂಗಸಭೆಯ ಮೊದಲ ಆವೃತ್ತಿಯನ್ನು ಉದ್ಘಾಟಿಸಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

"2025 ಅನ್ನು ಅಂತರರಾಷ್ಟ್ರೀಯ ಕ್ವಾಂಟಮ್ ವರ್ಷವಾಗಿ ಜಗತ್ತು ಆಚರಿಸುತ್ತಿರುವಾಗ, ಕರ್ನಾಟಕ ಕ್ವಾಂಟಮ್ ವಿಷನ್ 2035 ಅನ್ನು ಘೋಷಿಸಲು ನನಗೆ ಹೆಮ್ಮೆಯಾಗುತ್ತಿದೆ. 2035 ರ ವೇಳೆಗೆ, ನಾವು 10,000 ಉನ್ನತ ಕೌಶಲ್ಯದ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ಕರ್ನಾಟಕವನ್ನು ಏಷ್ಯಾದ ಕ್ವಾಂಟಮ್ ರಾಜಧಾನಿಯಾಗಿ ಸ್ಥಾಪಿಸುವ ಗುರಿ ಹೊಂದಿದ್ದೇವೆ" ಎಂದು ಹೇಳಿದರು.

ದೇಶದಲ್ಲಿ ಮೊಟ್ಟಮೊದಲ ಕ್ವಾಂಟಮ್ ಕಂಪ್ಯೂಟಿಂಗ್ ಅನ್ನು ಅಭಿವೃದ್ಧಿ ಪಡಿಸಿರುವ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ ಸಮ್ಮೇಳನವನ್ನು ಆಯೋಜಿಸಿರುವ ರಾಜ್ಯ ಕರ್ನಾಟಕ. ಈ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗುವ ನಿಟ್ಟಿನಲ್ಲಿ ನಾವು ಬದ್ಧರಿದ್ದೇವೆ.

ಕರ್ನಾಟಕವು ವಿಜ್ಞಾನ, ತಂತ್ರಜ್ಞಾನ ಹಾಗೂ ಆವಿಷ್ಕಾರದ ತವರು. ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಉದ್ಯಮಗಳಿಗೆ ನಮ್ಮ ಸರ್ಕಾರ ಪೂರ್ಣ ಸಹಕಾರ ಹಾಗೂ ಬೆಂಬಲ ನೀಡಲಿದೆ ಎಂದರು.




ಕರ್ನಾಟಕ ಕ್ವಾಂಟಮ್ ಮಿಷನ್, ಸಂಶೋಧನೆ ಮತ್ತು ಅಭಿವೃದ್ಧಿ, ಕೌಶಲ್ಯ, ಮೂಲಸೌಕರ್ಯ ಮತ್ತು ನವೋದ್ಯಮಗಳನ್ನು ಉತ್ತೇಜಿಸುತ್ತದೆ ಎಂದು ಸಿಎಂ ತಿಳಿಸಿದರು.

"ಕ್ವಾಂಟಮ್ ತಂತ್ರಜ್ಞಾನ ಕಾರ್ಯಪಡೆಯು ನೀತಿ ನಿರೂಪಣೆ, ಮಾರ್ಗದರ್ಶನ ಮಾಡಿದರೆ, ಕ್ವಾಂಟಮ್ ಪಾರ್ಕ್‌ಗಳು, ಉತ್ಪಾದನಾ ವಲಯಗಳು ಮತ್ತು ಕಿ-ಸಿಟಿ ನಾವೀನ್ಯತೆಯನ್ನು ಪೋಷಿಸುತ್ತವೆ" ಎಂದು ಸಿದ್ದರಾಮಯ್ಯ ಹೇಳಿದರು.

ಮಾಹಿತಿ ತಂತ್ರಜ್ಞಾನ ಬೆಂಗಳೂರನ್ನು ಜಾಗತಿಕ ನಾಯಕನನ್ನಾಗಿ ಮಾಡಿದಂತೆ ಕರ್ನಾಟಕದ ಸಮಗ್ರ ಕ್ವಾಂಟಮ್ ಹಬ್ ಅಥವಾ ಕಿ-ಸಿಟಿ ಭಾರತವನ್ನು ಜಾಗತಿಕ ನಾಯಕನನ್ನಾಗಿ ಮಾಡುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕರ್ನಾಟಕದ ಕ್ವಾಂಟಮ್ ತಂತ್ರವು ಐದು ಪ್ರಮುಖ ಸ್ತಂಭಗಳ ಮೇಲೆ ನಿರ್ಮಿಸಲಾಗಿದೆ. ಪ್ರತಿಭಾ ಅಭಿವೃದ್ಧಿ, ಸಂಶೋಧನೆ ಮತ್ತು ಅಭಿವೃದ್ಧಿ, ಮೂಲಸೌಕರ್ಯ ಸೃಷ್ಟಿ, ಉದ್ಯಮ ಬೆಂಬಲ ಮತ್ತು ಜಾಗತಿಕ ಪಾಲುದಾರಿಕೆ ಎಂದು ಮುಖ್ಯಮಂತ್ರಿಗಳು ವಿವರಿಸಿದರು

ಪ್ರತಿಭಾ ಅಭಿವೃದ್ಧಿಯನ್ನು ಸಾಧಿಸಲು, ಕರ್ನಾಟಕವು 20 ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಕ್ವಾಂಟಮ್ ಕೌಶಲ್ಯ ಕಾರ್ಯಕ್ರಮಗಳನ್ನು ಪರಿಚಯಿಸುತ್ತದೆ ಮತ್ತು ಪ್ರತಿ ವರ್ಷ 150 ಪಿಎಚ್‌ಡಿ ಫೆಲೋಶಿಪ್‌ಗಳನ್ನು ಬೆಂಬಲಿಸುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

1000-ಕ್ವಿಟ್ ಪ್ರೊಸೆಸರ್‌ಗಳು ಸೇರಿದಂತೆ ಅತ್ಯಾಧುನಿಕ ಕ್ವಾಂಟಮ್ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಆರೋಗ್ಯ ರಕ್ಷಣೆ, ರಕ್ಷಣೆ ಮತ್ತು ಸೈಬರ್ ಭದ್ರತೆಯಲ್ಲಿ ನೈಜ-ಪ್ರಪಂಚದ ಅನ್ವಯಿಕೆಗಳನ್ನು ಪೈಲಟ್ ಮಾಡುವ ಗುರಿಯನ್ನು ರಾಜ್ಯ ಹೊಂದಿದೆ ಎಂದು ಅವರು ಹೇಳಿದರು.

ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ, ಕರ್ನಾಟಕವು ಭಾರತದ ಮೊದಲ ಕ್ವಾಂಟಮ್ ಹಾರ್ಡ್‌ವೇರ್ ಪಾರ್ಕ್, ನಾಲ್ಕು ಇನ್ನೋವೇಶನ್ ಝೋನ್‌ಗಳು ಮತ್ತು ಕ್ವಾಂಟಮ್ ಘಟಕಗಳ ದೇಶೀಯ ಉತ್ಪಾದನೆಯನ್ನು ಹೆಚ್ಚಿಸಲು ಮೀಸಲಾದ ಫ್ಯಾಬ್ ಲೈನ್ ಅನ್ನು ಸ್ಥಾಪಿಸಲಿದೆ ಎಂದು ಸಿಎಂ ತಿಳಿಸಿದರು.

# ಜಗಳೂರಿನಲ್ಲಿ ಗೊಬ್ಬರಕ್ಕಾಗಿ ರೈತರ ಆಕ್ರೋಶ

## ರಸ್ತೆ ತಡೆದು ಪ್ರತಿಭಟನೆ, ಸರ್ಕಾರ-ಅಧಿಕಾರಿಗಳ ವಿರುದ್ಧ ಘೋಷಣೆ

**ಜಗಳೂರು:** ತಾಲ್ಲೂಕಿನಲ್ಲಿ ಮುಂಗಾರು ಮಳೆ ಬಿರುಸಾಗಿ ಸುರಿಯುತ್ತಿದ್ದರೂ, ಮೆಕ್ಕೆಜೋಳ ಫಸಲಿಗೆ ಅಗತ್ಯವಾದ ಯೂರಿಯಾ ಗೊಬ್ಬರ ಸಿಗದೆ ರೈತರು ಹೈರಾಣಾಗಿದ್ದಾರೆ. ಕಳೆದ ಒಂದು ವಾರದಿಂದ ಅಂಗಡಿಗಳಿಗೆ ಅಲೆದಾಡಿದರೂ ಗೊಬ್ಬರ ಸಿಗದ ಕಾರಣ, ನೂರಾರು ರೈತರು ಇಂದು ಜಗಳೂರಿನ ಅಂಬೇಡ್ಕರ್ ವೃತ್ತದಲ್ಲಿ ದಾವಣಗೆರೆ ಮತ್ತು ಚಿತ್ರದುರ್ಗ ರಸ್ತೆಗಳನ್ನು ಬಂದ್ ಮಾಡಿ, ಸರ್ಕಾರ ಮತ್ತು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ಹೊರಹಾಕಿದರು.

ನಿನ್ನೆ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ ಗೊಬ್ಬರಕ್ಕಾಗಿ ಆಗ್ರಹಿಸಿದ್ದ ರೈತರು, ಇಂದು ರೈತ ಸಂಘದ ಹುಚ್ಚವನಹಳ್ಳಿ ಮಂಜುನಾಥ್ ಬಣ ಮತ್ತು ವಾಸುದೇವ ಮೇಟಿ ಬಣದ ನೇತೃತ್ವದಲ್ಲಿ ಅಕ್ಷರಶಃ ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ದೊಡ್ಡ ರೈತರು ಹೆಚ್ಚಿನ ಬೆಲೆಗೆ ಗೊಬ್ಬರ ಖರೀದಿಸುತ್ತಿದ್ದಾರೆ, ಆದರೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಮ್ಮ ಬೆಳೆಗಳನ್ನು ಉಳಿಸಿಕೊಳ್ಳಲು ಯೂರಿಯಾ ಗೊಬ್ಬರ ಸಿಗುತ್ತಿಲ್ಲ. ಮಾರಾಟಗಾರರು ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ. ಅಧಿಕಾರಿಗಳು



ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ರೈತ ಮುಖಂಡರು ದೂರಿದರು.

ಒಂದು ವಾರದಿಂದಲೂ ಸಣ್ಣ ಮತ್ತು ಅತಿ ಸಣ್ಣ ರೈತರು ಅಂಗಡಿಗಳ ಮುಂದೆ ಸಾಲುಗಟ್ಟಿ ನಿಂತಿದ್ದರೂ ಗೊಬ್ಬರ ಸಿಗದಿರುವುದು ಅವರ ಆತಂಕಕ್ಕೆ ಕಾರಣವಾಗಿದೆ. ಉತ್ತಮ ಮಳೆಯಾಗುತ್ತಿದ್ದು, ಮೆಕ್ಕೆಜೋಳ ಬೆಳೆಗೆ ಯೂರಿಯಾ ಗೊಬ್ಬರ ನೀಡುವುದು ಅತಿ ಅವಶ್ಯಕವಾಗಿದೆ ಎಂದು ರೈತರು ತಿಳಿಸಿದರು.

ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್, ಕೃಷಿ ಇಲಾಖೆಯ ಉಪನಿರ್ದೇಶಕರು ಹಾಗೂ ಜಂಟಿ ಕೃಷಿ ನಿರ್ದೇಶಕರು, "ನಾಳೆ ಜಗಳೂರು ತಾಲೂಕಿಗೆ 160 ಟನ್ ಯೂರಿಯಾ ಗೊಬ್ಬರ ಬರಲಿದ್ದು, ಗುರುವಾರ ಎಪಿಎಂಸಿ ಆವರಣದಲ್ಲಿ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು" ಎಂದು ಭರವಸೆ ನೀಡಿದರು. ಆದರೆ, ಅಧಿಕಾರಿಗಳ ಸಮಜಾಯಿಷಿಗೆ ಒಪ್ಪದ ರೈತರು, "ಒಂದು ವಾರದಿಂದಲೂ ಅಧಿಕಾರಿಗಳು ನೆಪ ಹೇಳುತ್ತಿದ್ದಾರೆ. ನಮಗೆ ನಾಳೆಯಿಂದಲೇ ಗೊಬ್ಬರ ವಿತರಿಸಬೇಕು" ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಯಾಗಿ ಅಧಿಕಾರಿಗಳು, 'ತಾಲ್ಲೂಕಿಗೆ ಹಂತ ಹಂತವಾಗಿ ಯೂರಿಯಾ ಗೊಬ್ಬರ ಪೂರೈಸಲಾಗುತ್ತಿದೆ. ಆದರೆ, ರೈತರು ಅಗತ್ಯಕ್ಕಿಂತಲೂ ಹೆಚ್ಚುವರಿಯಾಗಿ ರಸಗೊಬ್ಬರ ಬಳಸುತ್ತಿದ್ದಾರೆ. ಯೂರಿಯಾ ಗೊಬ್ಬರವನ್ನು ಮಿತವಾಗಿ ಬಳಸಬೇಕು' ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಕುಮಾರ್ ಭರಮಸಮುದ್ರ, ತಿಪ್ಪೇಸ್ವಾಮಿ, ಮಲ್ಲೇಶ್, ಚಿರಂಜೀವಿ ಚಿಕ್ಕಮಲ್ಲನಹೊಳೆ, ರಾಜು ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು, ಮುಖಂಡರು, ರೈತರು ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು.

## ಫುಟ್‌ಪಾತ್ ಮೇಲಿನ ವಸ್ತು ತೆರವಿಗೆ ನಿರ್ಧಾಕ್ಷಿಣ್ಯ ಕ್ರಮ ವಹಿಸಿ

**ಚಿಕ್ಕಮಗಳೂರು :** ನಗರಸಭೆಯಿಂದ 15 ದಿನಗಳ ಮುನ್ನವೇ ಫುಟ್‌ಪಾತ್ ಮೇಲಿನ ವಸ್ತುಗಳನ್ನು ತೆರವುಗೊಳಿಸುವಂತೆ ಸೂಚನೆ ನೀಡಿದ್ದರೂ ಉಲ್ಲಂಘಿಸಿರುವ ವರ್ತಕರ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ವಿಧಾನ ಪರಿಷತ್ ಸದಸ್ಯ ಸೂಚನೆ ನೀಡಿದರು.

ಅವರು ಇಂದು ನಗರಸಭೆಯಿಂದ ಏರ್ಪಡಿಸಲಾಗಿದ್ದ ನಗರದ ಮಲ್ಲಂದೂರು ರಸ್ತೆಯಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ನಗರಸಭೆಯಿಂದ ಪರವಾನಗಿ ಪಡೆಯದೆ ಅನಧಿಕೃತವಾಗಿ ತರಕಾರಿ ಸೇರಿದಂತೆ ಹೂವು, ಹಣ್ಣು ಇನ್ನಿತರೆ ಅಂಗಡಿಗಳನ್ನು ನಡೆಸುತ್ತಿರುವ ವರ್ತಕರು ಫುಟ್‌ಪಾತ್ ಮೇಲೆ ವಸ್ತುಗಳನ್ನು ಇಡಬಾರದು ಎಂದು ಹೇಳಿದರು.

ಪರವಾನಗಿ ಪಡೆಯದೆ ಎಷ್ಟು ವರ್ಷಗಳಾಗಿವೆ ಅಲ್ಲಿಂದ ಇಲ್ಲಿಯವರೆಗೆ ವರ್ತಕರಿಗೆ ದಂಡ ಸಹಿತ ಶುಲ್ಕ ವಿಧಿಸಿ ಪರವಾನಗಿ ನೀಡಬೇಕು ಹಾಗೂ ಖಾಲಿ ನಿವೇಶನಗಳಲ್ಲಿ ಗಿಡಘಂಟಿಗಳು ಬೆಳೆದಿದ್ದರೆ ಸಂಬಂಧಪಟ್ಟ ಮಾಲಿಕರಿಗೆ



ಸೂಚನೆ ನೀಡಿ ಸ್ವಚ್ಚತೆ ಮಾಡಿಕೊಳ್ಳಬೇಕೆಂದು ತಾಕೀತು ಮಾಡಿ ಎಂದು ಸಲಹೆ ನೀಡಿದರು.

ಕಸವನ್ನು ನಿಗದಿತ ಸ್ಥಳದಲ್ಲಿ ಹಾಕದೆ ಎಲ್ಲೆಂದರಲ್ಲಿ ಹಾಕಿ ನಗರದ ಸೌಂದರ್ಯಕ್ಕೆ ಧಕ್ಕೆ ತರಲಾಗುತ್ತಿದೆ. ಈ ಬಗ್ಗೆ ಪೊಲೀಸರು ಮತ್ತು ನಗರಸಭೆ ಸಿಬ್ಬಂದಿ, ಅಧಿಕಾರಿಗಳು ಕ್ರಮವಹಿಸಬೇಕೆಂದು ಸೂಚಿಸಿದರು.

ಲಾಡ್ಜ್‌ಗಳ ನಿರ್ಮಾಣಕ್ಕೆ ನಗರಸಭೆಯಿಂದ ಪರವಾನಗಿ ನೀಡುವಾಗ ನಿಬಂಧನೆಗಳನ್ನು ವಿಧಿಸಿದ್ದು, ಕಟ್ಟಡ ಪೂರ್ಣಗೊಂಡ ಬಳಿಕ ಪಾರ್ಕಿಂಗ್‌ಗೆ ಮೀಸಲಿಟ್ಟಿದ್ದ ಜಾಗದಲ್ಲಿ ಪೆಟ್ಟಿಗೆ ಅಂಗಡಿಗೆ ಅನುಮತಿ ನೀಡಿ ವ್ಯಾಪಾರ ಮಾಡುತ್ತಿದ್ದಾರೆಂದು ದೂರಿದರು.

ಸಧ್ಯದಲ್ಲೇ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆರ್‌ಟಿಓ ಪೊಲೀಸರು ಮತ್ತು ಪರಿಸರ ಇಲಾಖೆಯ ಮುಖ್ಯಸ್ಥರನ್ನೊಳಗೊಂಡ ಸಭೆ ನಡೆಸಿ ಸೂಕ್ತ ಕ್ರಮ ವಹಿಸುತ್ತೇವೆ ಎಂದ ಅವರು, ಹಾಲಿ ಇರುವ ರಸ್ತೆಯನ್ನು ಸ್ವಚ್ಚವಾಗಿಡುವ ಮೂಲಕ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿದರು. ಪೌರಕಾರ್ಮಿಕರ ಹುದ್ದೆ ಭರ್ತಿಯಾಗದ ಹೊರತು ಸಮಸ್ಯೆ ಇತ್ಯರ್ಥವಾಗುವುದಿಲ್ಲ, ನಗರದಲ್ಲಿ ಅಂಗಡಿಗಳು ಹೆಚ್ಚಾದಂತೆ ಕಸ ವಿಲೇವಾರಿ ಕಷ್ಟವಾಗುತ್ತಿದೆ. ಹಾಲಿ 203 ಪೌರ ಕಾರ್ಮಿಕರ ಹುದ್ದೆಗೆ ಕೇವಲ 175 ಜನ ಮಾತ್ರ ಸೇವೆ ಸಲ್ಲಿಸುತ್ತಿದ್ದಾರೆಂದು ಹೇಳಿದರು.

ಈ ಬಾರಿಯ ಮುಂಗಾರು ಅಧಿವೇಶನದಲ್ಲಿ ವೈದ್ಯರು, ದಾದಿಯರು, ಪೌರ ಕಾರ್ಮಿಕರು, ಶಿಕ್ಷಕರನ್ನು ಭರ್ತಿಮಾಡುವಂತೆ ಆದ್ಯತೆ ನೀಡಬೇಕೆಂದು ಆಗ್ರಹಿಸುವುದಾಗಿ ಭರವಸೆ ನೀಡಿದರು.

ನಗರಸಭಾಧ್ಯಕ್ಷೆ ಶೀಲಾ ದಿನೇಶ್ ಮಾತನಾಡಿ, ಸಾರ್ವಜನಿಕರ ಸಂಚಾರಕ್ಕೆ ರಸ್ತೆಬದಿ ಫುಟ್‌ಪಾತ್ ಮೇಲೆ ವಸ್ತುಗಳನ್ನಿಟ್ಟು ವ್ಯಾಪಾರ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿದೆ ಎಂದು ಬಂದ ದೂರಿನ ಹಿನ್ನೆಲೆಯಲ್ಲಿ ಇಂದು ಫುಟ್‌ಪಾತ್ ಮೇಲಿನ ವಸ್ತುಗಳನ್ನು ತೆರವುಗೊಳಿಸುವ ಮೂಲಕ ವರ್ತಕರಿಗೆ ಕಡಕ್ ಸೂಚನೆ ನೀಡಲಾಗಿದೆ ಎಂದರು.

## ಒಂದು ಚೀಲ ಯೂರಿಯಾಗೊಬ್ಬರಕ್ಕೆ ಒಂದು ಕಿಮೀ ರೈತರ ಸಾಲು



**ಜಗಳೂರು:** ಪಟ್ಟಣದ ಎಪಿಎಂಸಿ ಆವರಣದಲ್ಲಿ ಗುರುವಾರ 60 ಟನ್ ಯೂರಿಯಾ ಗೊಬ್ಬರ ಬಂದ ಹಿನ್ನೆಲೆ ಪಡೆಯಲು ಒಂದು ಕಿಮೀ ರೈತರು ಸರತಿ ಸಾಲಿನಲ್ಲಿ ನಿಂತು ಆಧಾರ್ ಕಾರ್ಡ್ ತೋರಿಸಿ ನಂತರ ಪಿಓಎಸ್ (ಹೆಬ್ಬೆಟ್ಟು ಸ್ಕ್ಯಾನ್) ಪಡೆದು ಪೊಲೀಸ್ ಭದ್ರತೆಯಲ್ಲಿ ಒಬ್ಬರಿಗೆ ಒಂದು ಪ್ಯಾಕೇಟ್ ವಿತರಿಸಲಾಯಿತು.

ತಾಲೂಕಿನಲ್ಲಿ ಯೂರಿಯಾ ಗೊಬ್ಬರ ಹಾಹಾಕಾರ ಸೃಷ್ಟಿಯಾಗಿದ್ದು, ರೈತರು ಬೆಳೆಗಳಿಗೆ ಅಗತ್ಯ ಯೂರಿಯಾ ಬಳಕೆಗೆ ಸೂಕ್ತ ಸಮಯವಾದ್ದರಿಂದ ರೈತರು ತಾಮುಂದು ನಾಮುಂದು ಎಂದು ಧಾವಿಸಿ ಬಂದ ಕಾರಣ ಪೊಲೀಸರು ಸರತಿ ಸಾಲಿನಲ್ಲಿ ನಿಲ್ಲಿಸಿ ಪ್ರತಿಯೊಬ್ಬರಿಗೂ ಒಂದು ಪ್ಯಾಕೇಟ್ನಂತೆ ಯೂರಿಯಾ ವಿತರಣೆ ಮಾಡಲಾಯಿತು.

ಇನ್ಸ್‌ಪೆಕ್ಟರ್ ಸಿದ್ದರಾಮಯ್ಯ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಸಿಬ್ಬಂದಿ 60 ಟನ್ ಗೊಬ್ಬರ ವಿತರಿಸಲು ಕ್ರಮ ಕೈಗೊಂಡಿದ್ದರಿಂದ ಒಬ್ಬರಿಗೆ ತಲಾ ಒಂದರಂತೆ ಗೊಬ್ಬರ ವಿತರಿಸಲು ಸಾಧ್ಯವಾಯಿತು.

ಕಳೆದ ಮಂಗಳವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿದ ರೈತರನ್ನು ಸಮಾಧಾನ ಮಾಡಿದ್ದ ಕೃಷಿ ಇಲಾಖೆ ಜೆಡಿ ಕೆ.ಜಿಯಾವುಲ್ಲಾ 'ಗುರುವಾರ ಗೊಬ್ಬರ ಎಪಿಎಂಸಿ ಆವರಣದಲ್ಲಿ ವಿತರಿಸಲಾಗುವುದು ಎಂದು ಭರವಸೆ ನೀಡಿದಂತೆ ಎಪಿಎಂಸಿ ಆವರಣದಲ್ಲಿ 60 ಟನ್ ಮತ್ತು ನಾನಾ ವಿಎಸ್‌ಎಸ್‌ಎನ್, ಎಫ್ಪಿಓಗಳ ಮುಖೇನ ಗುರುವಾರ ಒಟ್ಟು 220 ಟನ್ ವಿತರಿಸಲಾಗಿದೆ ಎಂದು ಕೃಷಿ ಇಲಾಖೆ ಎಡಿಎ ಎಚ್.ಶ್ವೇತಾ ತಿಳಿಸಿದರು.

## ಮಾರಾಟ ಮೇಳ ಉದ್ಘಾಟನಾ ಸಮಾರಂಭ

**ದಾವಣಗೆರೆ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 1 ರಂದು ಬೆಳಿಗ್ಗೆ 11.30ಕ್ಕೆ ನಗರದ ಶ್ರೀಮದ್ ಅಭಿನವ ರೇಣುಕಾ ಮಂದಿರದಲ್ಲಿ ರಾಜ್ಯ ಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಪ್ರದರ್ಶನ ಹಾಗೂ ಮಾರಾಟ ಮೇಳದ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಗಣಿ ಮತ್ತು ಭೂವಿಜ್ಞಾನ ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು.


ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮದ ಸಚಿವರಾದ ಶರಣಬಸಪ್ಪ ದರ್ಶನಾಪೂರ ಇವರು ಮಳಿಗೆ ಉದ್ಘಾಟಿಸುವರು. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾದ ಬಸನಗೌಡ ತುರುವಿಹಾಳ ಪ್ರಾತ್ಯಕ್ಷತೆ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಹೊನ್ನಾಳಿ ಶಾಸಕ ಶಾಂತನಗೌಡ ಡಿ.ಜಿ, ಹರಿಹರ ಶಾಸಕ ಬಿ.ಪಿ. ಹರೀಶ್, ಮಾಯಕೊಂಡ ಶಾಸಕ ಕೆ.ಎಸ್ .ಬಸವಂತಪ್ಪ ಮತ್ತಿತರರು ಭಾಗವಹಿಸುವರು.

# ದೇಗುಲ ಕಟ್ಟುವ ಒಗ್ಗಟ್ಟಿನಂತೆ ಸುಸಜ್ಜಿತ ಶಾಲೆಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ಅಗತ್ಯ: ಜಿ. ಬಿ. ವಿನಯ್ ಕುಮಾರ್ ಪ್ರತಿಪಾದನೆ

**ದಾವಣಗೆರೆ:** ದೇವಸ್ಥಾನ ಕಟ್ಟಲು ತೋರುವ ಒಗ್ಗಟ್ಟು ಸುಸಜ್ಜಿತ ಶಾಲೆ ನಿರ್ಮಾಣ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡಿದರೆ ರಾಜ್ಯದಲ್ಲಿ ಮಾದರಿ ಶಾಲೆಯನ್ನಾಗಿಸಲು ಸಾಧ್ಯ ಎಂದು ಇನ್ ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕರೂ ಆದ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಅಭಿಮತ ವ್ಯಕ್ತಪಡಿಸಿದರು.

ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಗಡಿಮಾಕುಂಟೆ ಗ್ರಾಮದಲ್ಲಿ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆದ ಶ್ರೀ ಬಸವೇಶ್ವರಸ್ವಾಮಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.



ರಾಜ್ಯ ಪ್ರತಿಯೊಂದು ಗ್ರಾಮಗಳಲ್ಲಿಯೂ ದೇವಸ್ಥಾನ ಕಟ್ಟಲು ವಿಶೇಷ ಆಸಕ್ತಿ, ಒಗ್ಗಟ್ಟು, ಶಕ್ತಿ, ಶ್ರಮ ವಹಿಸುತ್ತಾರೆ. ಜಾತಿ ಬೇಧ ಮರೆತು ಎಲ್ಲರೂ ಒಂದಾಗಿ ದೇವಸ್ಥಾನ ಕಟ್ಟಬೇಕು ಎಂಬ ಅಪೇಕ್ಷೆ ಒಳ್ಳೆಯದು. ದೇವಸ್ಥಾನ ಕಟ್ಟಿದ ಮೇಲೆ ಮುಂದಿನ ದಿನಗಳಲ್ಲಿಯೂ ಗ್ರಾಮದ ಜನರಲ್ಲಿ ಅದೇ ಉತ್ಸಾಹ, ಪ್ರೀತಿ, ಒಗ್ಗಟ್ಟು, ಶಕ್ತಿ ಇರಬೇಕು. ಅದೇ ರೀತಿಯಲ್ಲಿ ದೇಗುಲನ ನಿರ್ಮಾಣಕ್ಕೆ ತೋರುವ ಒಗ್ಗಟ್ಟು, ಪರಿಶ್ರಮ, ಆಸಕ್ತಿ ಸುಸಜ್ಜಿತ ಶಾಲೆ ಹಾಗೂ ಸರ್ಕಾರಿ ಶಾಲೆಗಳ ಗುಣಮಟ್ಟದತ್ತ ಯೋಚಿಸಬೇಕಾದ ಅಗತ್ಯತೆ ಇದೆ ಎಂದು ಪ್ರತಿಪಾದಿಸಿದರು.

ಸರ್ಕಾರಿ ಶಾಲೆಗಳಲ್ಲಿ ಓದಿ ಬರುವ ವಿದ್ಯಾರ್ಥಿಗಳಿಗೆ ಐಎಎಸ್, ಐಪಿಎಸ್ ಕಷ್ಟವಾಗುತ್ತಿದೆ. ಇದಕ್ಕೆ ಕಾರಣ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ಸಿಗದಿರುವುದು ಹಾಗೂ ಅಸಮಾನತೆ ಇರುವುದೇ ಕಾರಣವಾಗಿದೆ. ಹಾಗಾಗಿ, ದೇವಸ್ಥಾನ ಕಟ್ಟುವಷ್ಟೇ ಆಸಕ್ತಿ ಉತ್ಸಾಹ ಶಾಲೆಗಳ ಅಭಿವೃದ್ಧಿಗೂ ಬೇಕು. ನಮ್ಮ ಸಂಸ್ಥೆಯಲ್ಲಿ ಓದಿದ ಬಡ ಮತ್ತು ಶ್ರೀಮಂತ ಮಕ್ಕಳು ಐಎಎಸ್, ಐಪಿಎಸ್ ಅಧಿಕಾರಿಗಳಾಗಿದ್ದಾರೆ. ಸರ್ಕಾರಿ ಶಾಲೆಗಳ ಮಕ್ಕಳಿಗೆ ನಗರ ಪ್ರದೇಶದ ಮಕ್ಕಳಂತೆ ಶಿಕ್ಷಣ ಸಿಕ್ಕರೆ ಸಾಧನೆ ಕಷ್ಟವಾಗದು. ದೇವಸ್ಥಾನ ನಿರ್ಮಾಣದಂತೆ ಶಾಲೆಗಳ ನಿರ್ಮಾಣವೂ ಆಗಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಯೋಚಿಸಬೇಕಿದೆ. ಆದ್ರೆ, ಗಟ್ಟಿ ಮನಸ್ಸು ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಧರ್ಮ ಮತ್ತು ಸಂಸ್ಕೃತಿ ಉಳಿಯಬೇಕು. ಜೊತೆಗೆ ಶಿಕ್ಷಣಕ್ಕೂ ಹೆಚ್ಚಿನ ಮಹತ್ವ ನೀಡಬೇಕಿದೆ. ಶಿಕ್ಷಣದ ಮೂಲಕ ಧರ್ಮ ಮತ್ತು ಸಂಸ್ಕೃತಿ ಅರಿವು ಮಕ್ಕಳಲ್ಲಿ ಮೂಡಿಸಬೇಕಾದ ಅಗತ್ಯತೆ ಇದೆ. ಧರ್ಮದಂತೆ ನಡೆದರೆ ಸಂಸ್ಕೃತಿ ಬೆಳೆಸಿಕೊಂಡರೆ ಸಹಬಾಳ್ವೆ ಸಾಧ್ಯವಾಗುತ್ತದೆ. ಈ ಗ್ರಾಮದಲ್ಲಿನ ಮಕ್ಕಳು ಐಎಎಸ್, ಐಪಿಎಸ್ ಆಗುವಂತೆ ಭಗವಂತ ಶಕ್ತಿ ನೀಡಲಿ ಎಂದು ಹಾರೈಸಿದರು.

ಕೊಟ್ಟೂರು ಚಾನುಕೋಟಿ ಮಠದ ಷ.ಬ್ರ. ಶ್ರೀ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಜಗಳೂರು ಶಾಸಕ ಬಿ. ದೇವೇಂದ್ರಪ್ಪ ರವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಕೇಂದ್ರದ ಮಾಜಿ ಸಚಿವ ಹಾಗೂ ಮಾಜಿ ಸಂಸದ ಡಾ. ಜಿ. ಎಂ. ಸಿದ್ದೇಶ್ವರ, ಮಾಜಿ ಶಾಸಕರಾದ ಎಸ್. ವಿ. ರಾಮಚಂದ್ರಪ್ಪ, ಹೆಚ್. ಪಿ. ರಾಜೇಶ್, ಕೆ. ತಿಪ್ಪೇಸ್ವಾಮಿ. ಹೊಸಪೇಟೆ ಅಜ್ಜಯ್ಯ ನಾಡಗೇರ, ಹೆಚ್. ನಾಗರಾಜ, ಬಿಸ್ತುವಳ್ಳಿ ಬಾಬಣ್ಣ, ಗ್ರಾ. ಸದಸ್ಯರಾದ ಬೋರಮ್ಮ, ಜೆ. ಎಂ. ತಿಪ್ಪೇಸ್ವಾಮಿ, ಕೆ. ಪಿ. ಪಾಲಯ್ಯ, ಎಸ್.ಕೆ. ಮಂಜುನಾಥ, ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಪಲ್ಲಗಟ್ಟೆ ಮಹೇಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಸೊಕ್ಕೆ ನಾಗರಾಜ್ ಹಲವರು ಮುಖಂಡರು ಉಪಸ್ಥಿತರಿದ್ದರು.

## ಇಂದಿನ ರಾಶಿ ಭವಿಷ್ಯ

### ಮೇಷ ರಾಶಿ

ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇಂದು ಹಣದ ಪ್ರಯೋಜನವನ್ನು ಪಡೆಯುವ ಸಾಧ್ಯತೆ ಇದೆ ಆದರೆ ನಿಮ್ಮ ಕೋಪದ ಸ್ವಭಾವದಿಂದ ಇಂದು ಹಣವನ್ನು ಗಳಿಸುವಲ್ಲಿ ಸಾಧ್ಯವಾಗದಿರಬಹುದು. ಸಾಮಾಜಿಕ ಚಟುವಟಿಕೆಗಳು ಆನಂದಮಯವಾಗಿದ್ದರೂ ನೀವು ಇತರೊಂದಿಗೆ ನಿಮ್ಮ ರಹಸ್ಯಗಳನ್ನು ಹಂಚಿಕೊಳ್ಳಬಾರದು. ಪ್ರೀತಿ ಯಾವಾಗಲೂ ಭಾವಪೂರ್ಣವಾಗಿದೆ, ಮತ್ತು ನೀವು ಇಂದು ಇದನ್ನು ಅನುಭವಿಸುತ್ತೀರಿ.

### ವೃಷಭ ರಾಶಿ

ಪ್ರೀತಿ, ಭರವಸೆ, ನಂಬಿಕೆ, ಸಹಾನುಭೂತಿ, ಆಶಾವಾದ ಮತ್ತು ನಿಷ್ಠೆಗಳಂಥ ಧನಾತ್ಮಕ ಭಾವನೆಗಳನ್ನು ಗ್ರಹಿಸಲು ಮನಸ್ಸನ್ನು ಪ್ರೋತ್ಸಾಹಿಸಿ. ಒಮ್ಮೆ ಈ ಭಾವನೆಗಳು ಸಂಪೂರ್ಣವಾಗಿ ಹತೋಟಿಗೆ ತೆಗೆದುಕೊಂಡ ನಂತರ ಮನಸ್ಸು ತಾನಾಗಿಯೇ ಪ್ರತಿ ಪರಿಸ್ಥಿತಿಗೂ ಧನಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ. ಇಂದು ನೀವು ಭೂಮಿ, ವಸತಿ, ಅಥವಾ ಸಾಂಸ್ಕೃತಿಕ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗಮನ ನೀಡಬೇಕು.

### ಮಿಥುನ ರಾಶಿ

ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ಮತ್ತು ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು ಹಾಗೂ ಇದು ನಿಮ್ಮನ್ನು ಪ್ರಭಾವಿ ವ್ಯಕ್ತಿಗಳ ಜೊತೆ ನಿಕಟ ಸಂಪರ್ಕ ಹೊಂದುವಂತೆ ಮಾಡಬಹುದು. ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ – ನಿಮ್ಮ ಪ್ರೀತಿಪಾತ್ರರು ನಿಮಗೆ ಅಪಾರ ಸಂತೋಷ ತರುತ್ತಾರೆ.

### ಕರ್ಕ ರಾಶಿ

ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ಊಹೆಗಳು ಲಾಭ ತರುತ್ತವೆ. ನೀವು ಸ್ನೇಹಿತರ ಮೂಲಕ ಪ್ರಮುಖ ಸಂಪರ್ಕಗಳನ್ನು ಹೊಂದುತ್ತೀರಿ. ಇಂದಿನ ದಿನ ಪ್ರೀತಿಯ ಬಣ್ಣಗಳಲ್ಲಿ ಮುಳುಗಿರುತ್ತದೆ ಆದರೆ ರಾತ್ರಿಯ ಸಮಯದಲ್ಲಿ ಯಾವುದೊ ಹಳೆಯ ವಿಷ್ಯದ ಬಗ್ಗೆ ನೀವು ಜಗಳವಾಡಬಹುದು. ಬಿಡುವಿಲ್ಲದ ಬೀದಿಗಳಲ್ಲಿ, ನಿಮ್ಮ ಪ್ರಿಯತಮೆಯೇ ಅತ್ಯುತ್ತಮವಾಗಿರುವುದರಿಂದ ನೀವು ಅದೃಷ್ಟಶಾಲಿಗಳು ಎಂದು ನಿಮಗೆ ಅರಿವಾಗುತ್ತದೆ.

### ಸಿಂಹ ರಾಶಿ

ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ಇದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು. ಮನೆಯ ಕೆಲಸ ನಿಮ್ಮನ್ನು ಯಾವಾಗಲೂ ವ್ಯಸ್ತವಾಗಿರಿಸುತ್ತದೆ. ಇಂದು ಪ್ರಣಯದ ಭಾವನೆಗಳಿಗೆ ಪ್ರತಿಕ್ರಿಯೆ ದೊರಕುತ್ತದೆ. ಹೊಸ ಉದ್ಯಮಗಳು ಆಕರ್ಷಕವಾಗಿರುತ್ತವೆ ಮತ್ತು ಒಳ್ಳೆಯ ಆದಾಯದ ಭರವಸೆ ಕಾಣಿಸುತ್ತದೆ.

### ಕನ್ಯಾ ರಾಶಿ

ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ಸಂಬಂಧಿಗಳೆದ್ದಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನದಿಂದ ನಿಮಗೆ ಸುಖ ಮತ್ತು ವಿಶ್ರಾಂತಿಯನ್ನು ತರುತ್ತದೆ ಪ್ರೀತಿಯ ಇಂದ್ರಜಾಲ ಇಂದು ನಿಮ್ಮನ್ನು ಕಟ್ಟಿಹಾಕಲಿದೆ. ಕೇವಲ ಈ ಆನಂದವನ್ನು ಆಸ್ವಾದಿಸಿ. ನೀವು ನಿಮ್ಮ ಆಲೋಚನೆಗಳನ್ನು ಚೆನ್ನಾಗಿ ಪ್ರಸ್ತುತಪಡಿಸಿದಲ್ಲಿ ಮತ್ತು ಕೆಲಸದಲ್ಲಿ ನಿಮ್ಮ ಬದ್ಧತೆಯನ್ನು ಪ್ರದರ್ಶಿಸಿದಲ್ಲಿ ನಿಮಗೆ ಲಾಭವಾಗುವ ಸಾಧ್ಯತೆಗಳಿವೆ.

### ತುಲಾ ರಾಶಿ

ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ – ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು.ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು. ಅರ್ಹರಿಗೆ ವೈವಾಹಿಕ ಮೈತ್ರಿಗಳು. ಕನಸಿನ ಚಿಂತೆಗಳನ್ನು ಬಿಟ್ಟು ನಿಮ್ಮ ಪ್ರೀತಿಪಾತ್ರ ಸಂಗಾತಿಯ ಜೊತೆಯಿರಿ. ನಿಮ್ಮ ಪ್ರೇಮ ಸಂಗಾತಿ ನಿಜಕ್ಕೂ ಇಂದು ಅದ್ಭುತವಾದದ್ದನ್ನು ಏನೋ ತರುತ್ತಾರೆ.

### ವೃಶ್ಚಿಕ ರಾಶಿ

ನಿಮ್ಮಲ್ಲಿ ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆಯಿರುವುದರಿಂದ ನಿಮ್ಮ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ಆಲ್ಕೋಹಾಲ್ ಸಿಗರೇಟ್ ಮುಂತಾದವುಗಳಿಗೆ ಹಣವನ್ನು ಖರ್ಚು ಮಾಡಬಾರದು, ಎಂದು ನಿಮಗೆ ನನ್ನ ಸಲಹೆ ನೀಡಲಾಗಿದೆ, ಅದನ್ನು ಮಾಡುವುದು ನಿಮ್ಮ ಆರೋಗ್ಯವನ್ನು ಹದಗೆಡಿಸುತ್ತದೆ ಮತ್ತು ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸಹ ಹದಗೆಡಿಸುತ್ತದೆ.

### ಧನು ರಾಶಿ

ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ನೀವು ಪ್ರೀತಿಸುವವರಿಂದ ಉಡುಗೊರೆಗಳನ್ನು ಪಡೆಯಲು ಹಾಗೂ ನೀಡಲು ಪವಿತ್ರವಾದ ದಿನ.

### ಮಕರ ರಾಶಿ

ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನ ಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

### ಕುಂಭ ರಾಶಿ

ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು ಮತ್ತು ಹಣವನ್ನು ಉಳಿಸಬೇಕು. ಭಾವನಾತ್ಮಕ ಅಪಾಯ ನಿಮ್ಮ ಪರವಾಗಿರುತ್ತದೆ. ಕೆಲವರಿಗೆ ಹೊಸ ಪ್ರಣಯ ನಿಮ್ಮ ಚೈತನ್ಯವನ್ನು ಪ್ರೇರೇಪಿಸಬಹುದು ಹಾಗೂ ನಿಮ್ಮನ್ನು ಹರ್ಷಚಿತ್ತರಾಗಿರಿಸಬಹುದು.

### ಮೀನ ರಾಶಿ

ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ. ಕಣ್ಣುಗಳು ಎಂದಿಗೂ ಸುಳ್ಳು ಹೇಳುವುದಿಲ್ಲ, ಮತ್ತು ನಿಮ್ಮ ಸಂಗಾತಿಯ ಕಣ್ಣುಗಳು ಇಂದು ನಿಮಗೆ ಏನೋ ವಿಶೇಷವಾದದ್ದನ್ನು ಹೇಳುತ್ತವೆ.

## ಭವಿಷ್ಯ ರೂಪಿಸುವ ಶಕ್ತಿಯಾಗಿ ವಾಣಿಜ್ಯ ಶಿಕ್ಷಣ ಡಾ. ವೆಂಕಟೇಶ್ ಬಾಬು



**ದಾವಣಗೆರೆ** : ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಶನ್, ದಾವಣಗೆರೆಯಲ್ಲಿ "Commerce for a Better Future" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ದಾವಣಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಡಾ. ಎಸ್ ವೆಂಕಟೇಶ್ ಬಾಬು ಭಾಗವಹಿಸಿದರು.

ಅವರು ಮಾತನಾಡುತ್ತಾ, "ಇಂದಿನ ವಾಣಿಜ್ಯ ಶಿಕ್ಷಣವು ಕೇವಲ ಲೆಕ್ಕವೊಂದರೊಳಗೆ ಸೀಮಿತವಲ್ಲ, ಅದು ಉದ್ಯೋಗ, ಉದ್ಯಮ ಮತ್ತು ಆರ್ಥಿಕ ಸ್ಥೈರ್ಯವನ್ನು ರೂಪಿಸುವ ಶಕ್ತಿ ಹೊಂದಿದೆ. ಪಠ್ಯಾಂಶದ ಜತೆಗೆ ನೈಪುಣ್ಯಾಭಿವೃದ್ಧಿ, ಡಿಜಿಟಲ್ ಹಣಕಾಸು, ಸ್ಟಾರ್ಟಪ್ ಕಲ್ಪನೆಗಳು, ಮತ್ತು ಅಖಿಲ ಅಂಶಗಳನ್ನು ಯುವಕರು ಅರ್ಥಮಾಡಿಕೊಳ್ಳಬೇಕು" ಎಂದು ವಿವರಿಸಿದರು.

"ಆಧುನಿಕ ಕಾರ್ಪೊರೇಟ್ ಲೋಕದಲ್ಲಿ ಸ್ಪರ್ಧಾತ್ಮಕತೆಯ ನಡುವೆಯೂ ಮೌಲ್ಯಾಧಾರಿತ ಶಿಕ್ಷಣ ಹಾಗೂ ಸುದೀರ್ಘ ದೃಷ್ಟಿಕೋನವೇ ಯಶಸ್ಸಿಗೆ ಹಾದಿ ನೀಡುತ್ತದೆ. ವಿದ್ಯಾರ್ಥಿಗಳು ತಾವು ಆಯ್ದ ಕ್ಷೇತ್ರದಲ್ಲಿ ಮುಂದಾಗಬೇಕಾದರೆ ಸೃಜನಶೀಲತೆ, ಸಂವಹನ ಕೌಶಲ್ಯ ಹಾಗೂ ತಂತ್ರಜ್ಞಾನ ಜ್ಞಾನ ಅತಿ ಅಗತ್ಯ" ಎಂದು ತಿಳಿಸಿದರು.

ವಿದ್ಯಾರ್ಥಿಗಳು ವಾಣಿಜ್ಯ ಶಾಸ್ತ್ರದ ಸುದೀರ್ಘ ಅಧ್ಯಯನದಿಂದ ಕಾರ್ಪೊರೇಟ್ ಜಗತ್ತಿನಲ್ಲಿ ಉದ್ಯಮ ಪಡೆದು ಸ್ವತಂತ್ರ ವಾಗಿ ಬಾಳಬಹುದು ಎಂದು ಹೇಳಿದರು. ಉದ್ಯೋಗ ಪಡೆಯುವುದು ಅಷ್ಟೇ ಅಲ್ಲದೆ ಉದ್ಯಮಗಳನ್ನು ಆರಂಭಿಸಿ ನಾಲ್ಕಾರು ಜನರಿಗೆ ಉದ್ಯೋಗವನ್ನು ನೀಡುವಂತಾಗಬೇಕು ಎಂದು ಪ್ರೇರಪಿಸಿದರು.

## ರಾಜ್ಯ ಪ್ರಶಸ್ತಿ ಪಡೆದ ಛಾಯಾಗ್ರಹಾಕರಾದ ಮನು, ದೇವೇಂದ್ರಪ್ಪ,ರಾಜಶೇಖರ್

**ಬೆಂಗಳೂರು** ; ಸದಾಶಿವನಗರದ ಹೈಡ್ ಪಾರ್ಕ್ ಹೋಟೆಲ್ ನಲ್ಲಿ ನಡೆದ ಕನ್ನಡ ಚಿತ್ರರಂಗದ ಹೆಸರಾಂತ ಪ್ರತಿಷ್ಠಿತ ಸಿನಿಮಾ ಪತ್ರಿಕೆ ಚಿತ್ರ ಸಂತೆ ಸುಮಾರು 16 ವರ್ಷಗಳಿಂದ ಕನ್ನಡ ನಾಡಿನ ಹೆಮ್ಮೆಯ ಸಾಧಕರಿಗೆ ಸಾಧನೆ ಗುರುತಿಸಿ ನೀಡುತ್ತಿರುವ ಪ್ರಶಸ್ತಿ ಈ ಬಾರಿ ದಾವಣಗೆರೆ ನಗರದ ದಾವಣಗೆರೆ ಜಿಲ್ಲಾ ಅಖಿಲ ಕರ್ನಾಟಕ ರವಿಚಂದ್ರನ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷರು ಹಾಗೂ ಕರ್ನಾಟಕ ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್

ಸಂಘದ ರಾಜ್ಯಾಧ್ಯಕ್ಷರು ಹಿರಿಯ ಛಾಯಾಗ್ರಾಹಕರು ಸಮಾಜ ಸೇವಕರು, ಹಾಗೂ ಮನು ಫೋಟೋಗ್ರಫಿ ಅಂಡ್ ಇವೆಂಟ್ಸ್ ಮಾಲೀಕರಾದ ಮನು ಎಂ.ದೇವನಗರಿ ಹಾಗೂ ಕೆ.ದೇವೇಂದ್ರಪ್ಪ ಹಿರಿಯ ಛಾಯಾಗ್ರಾಹಕರು, ಕರ್ನಾಟಕ ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಡಿಕೆ ವಿಡಿಯೋಗ್ರಾಫಿ ಮಾಲೀಕರು ಹಾಗೂ ಎಸ್.ರಾಜಶೇಖರಪ್ಪ ಕೊಂಡಜ್ಜಿ ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಹಿರಿಯ ಛಾಯಾಗ್ರಾಹಕರು , ಸಮಾಜ ಸೇವಕರು, ಕರ್ನಾಟಕ ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್ ಸಂಘದ ರಾಜ್ಯ ಕಾರ್ಯಾಧ್ಯಕ್ಷರು ಮನು ಸ್ಟುಡಿಯೋ ಮಾಲೀಕರಾದ ಇವರುಗಳಿಗೆ ಚಿತ್ರ ಸಂತೆ ಸಿನಿಮಾ

ಪತ್ರಿಕೆ ವತಿಯಿಂದ ಕರ್ನಾಟಕ ಅಚೀವರ್ಸ್ ಅವಾರ್ಡ್ 2025 ವರ್ಷದ ಕನ್ನಡಿಗ ಎಂಬ ಪ್ರಶಸ್ತಿ ಹಾಗೂ ಉತ್ತಮ ಛಾಯಾಗ್ರಾಹಕರು ಎಂದು ಹಿರಿಯ ನಟ ನಿರ್ದೇಶಕ ನಿರ್ಮಾಪಕ ಓಂ ಸಾಯಿ ಪ್ರಕಾಶ್ ರವರು ಪ್ರಶಸ್ತಿ ಪ್ರಧಾನ ಮಾಡಿದರು ಈ ಸಂದರ್ಭದಲ್ಲಿ ಚಿತ್ರ ಸಂತೆ ಗಿರೀಶ್ , ಬ್ರಹ್ಮಾಂಡ ಗುರೂಜಿ , ಮಲ್ಲಿಕಾರ್ಜುನ್, ನವ ನಟಿ ಇಷ್ಟ ಮಲ್ನಾಡ್ ಮಾಮ್, ಬಂಡೆ ಮಹಾಕಾಳಿ ಅಮ್ಮನ ದೇವಸ್ಥಾನದ ದೇವಿ ಅಮ್ಮ ನವರು, ನವ ನಟ,ರಾಜ ಪ್ರಭು , ವಿಶ್ವಾಸ್ , ರಾಕೇಶ್ ನಿರೂಪಕಿ ರಂಜಿತಾ ಸೇರಿದಂತೆ ರಾಜ್ಯದ ಸಮಾಜ ಸೇವೆಯಲ್ಲಿ ಗುರುತಿಸಿಕೊಂಡಿರುವಂತಹ 63 ಜನರಿಗೆ ಪ್ರಶಸ್ತಿ ಗೌರಿಸಲಾಯಿತು




## ಪೌಷ್ಟಿಕ ಆಹಾರವನ್ನು ಅಪವ್ಯಯ ಮಾಡುವುದನ್ನು ಬಿಡಬೇಕು: ವಿಶ್ವೇಶ್ವರಯ್ಯ ಬಿಎಂ ಹೆಮ್ಮನಬೇತೂರು

**ಜಗಳೂರು:** ಪೌಷ್ಟಿಕ ಆಹಾರ ಆದ ಹಾಲನ್ನು, ಸಿಹಿ ಉಂಡೆಗಳನ್ನು ನಾಗಪ್ಪನ ಹೆಸರಿನಲ್ಲಿ ಅಪವ್ಯಯ ಮಾಡುವುದನ್ನು ಬಿಡಬೇಕು ಎಂದು ದಾವಣಗೆರೆ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ವಿಶ್ವೇಶ್ವರಯ್ಯ ಬಿಎಂ ಹೆಮ್ಮನ ಬೇತೂರು ಅವರು ಹೇಳಿದರು.

ತಾಲ್ಲೂಕಿನ ಬಿಳಿ ಚೋಡು ಗ್ರಾಮದ ಬಸವ ಕೇಂದ್ರದ ಸಹಯೋಗದಲ್ಲಿ ಕರ್ನಾಟಕ ಪಬ್ಲಿಕ್ಶಾಲೆ ಪ್ರಾಥಮಿಕ ವಿಭಾಗ ಬಿಳಿಚೋಡು ಶಾಲೆಯಲ್ಲಿನಡೆದ ಬಸವ ಪಂಚಮಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು

ಹಾವು ಒಂದು ಸರಿಸೃಪ ಅದು ಮೊಟ್ಟೆಯಿಂದ ಹೊರ ಬರುವ ಜೀವಿ ಮೊಟ್ಟೆಯಿಂದ ಹೊರ ಬರುವ ಯಾವ ಪ್ರಾಣಿಗಳೂ ಸಹ ಹಾಲನ್ನು ಕುಡಿಯುವುದಿಲ್ಲ. ಹಾಲನ್ನು ನಾಗಪ್ಪನ ಹೆಸರಿನಲ್ಲಿ ಅಪವ್ಯಯ ಮಾಡಬಾರದು.ಸರ್ಕಾರವೇ ಮಕ್ಕಳಿಗಾಗಿ ಪೌಷ್ಟಿಕ ಆಹಾರ ನೀಡುತ್ತಿದೆ.ಇಂತಹ ಎಲ್ಲಾ ಯೋಜನೆಗಳನ್ನು ಸದ್ಬಳಿಕೆ ಮಾಡಿಕೊಂಡು ಮಕ್ಕಳು ಶಿಕ್ಷಣವಂತರಾಗಬೇಕೆಂದು ಎಂದು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು

ಜಾನಪದ ಕಲಾತಂಡದ ತಾಲೂಕು ಅಧ್ಯಕ್ಷರಾದ ಬಿಳಿಚೋಡು ಪರಮೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ ಕಲ್ಲಿನ ವಿಗ್ರಹಗಳಿಗೆ ಹಾಲುಹಾಕಿಅಲ್ಲಿಇಟ್ಟಿರುವ ಆಹಾರ ಪದಾರ್ಥಗಳು ಕಲುಷಿತ ಆಗುವುದನ್ನು ನೋಡಿ ಮನಸ್ಸಿಗೆ ಬಹಳ ಬೇಸರವಾಯಿತು. ಈ ವಿಚಾರವನ್ನು ಮಕ್ಕಳಿಗ ' ಬಿತ್ತಿದರೆ ಒಳ್ಳೆಯದು ಎಂದು ತಿಳಿದು ಈ ಶಾಲೆಯಲ್ಲಿ ಆಯೋಜನೆ ಮಾಡಿದ್ದೇವೆ ಎಂದರು.



ಶಾಲೆಯ ಮುಖ್ಯ ಶಿಕ್ಷಕರಾದ ಪ್ರಶಾಂತಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಹಬ್ಬಗಳು ಮನುಷ್ಯನಿಗೆ ಉತ್ಸಾಹ ತುಂಬಬೇಕು. ಹಬ್ಬಗಳ ಸಂದರ್ಭದಲ್ಲಿ ಜಾನಪದ ಕ್ರೀಡೆಗಳು ನಮಗೆ ಉಲ್ಲಾಸ ಉಂಟು ಮಾಡಿದರೆ, ಮೂಢನಂಬಿಕೆಯ ಆಚರಣೆಗಳು ನಮ್ಮನ್ನುಅಜ್ಞಾನಕ್ಕೆಕ 'ೊಂಡೊಯ್ಯುತ್ತವೆ ಎಂದರು

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶಿಕ್ಷಕಿ ರೂಪ ಮಾತನಾಡಿ ಮೂಢನಂಬಿಕೆಗಳಿಂದಾಗಿ ಪೌಷ್ಟಿಕ ಆಹಾರ ಅಪವ್ಯಯ ಆಗುತ್ತದೆ.ಮಕ್ಕಳಿಗೆ ತಿಳಿಸಿದರೆ ಬದಲಾವಣೆ ಸಾಧ್ಯ.ಹಾಗಾಗಿ ಇಲ್ಲಿ ಈ ಕಾರ್ಯಕ್ರಮ ಮಾಡುತ್ತಿದ್ದೇವೆ ಎಂದರು.

ಸಮಾರಂಭದಲ್ಲಿ ಬಸವಕೇಂದ್ರದ ಅಧ್ಯಕ್ಷರಾದ ನಿವೃತ್ತ ಶಿಕ್ಷಕ ಶರಣ ಷಣ್ಮುಖಪ್ಪ, ಮಾನವ ಬಂಧುತ್ವ ವೇದಿಕೆಯ ಶರಣ ಹನುಮಂತಪ್ಪಕರೂರು,ಶಿಕ್ಷಕರಾದ ಶರಣ ನಾಗೇಂದ್ರಪ್ಪಪಿ ಸೇರಿದಂತೆ ಬಸವ ಕೇಂದ್ರದ ಸದಸ್ಯರು, ಶಾಲಾ ಶಿಕ್ಷರುಗಳು, ಮುಖಂಡರು ಭಾಗವಹಿಸಿದ್ದರು

30 ಜೆ.ಜಿ.ಎಲ್.1)ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದ ಬಸವ ಕೇಂದ್ರದ ಸಹಯೋಗದಲ್ಲಿ ಕರ್ನಾಟಕ ಪಬ್ಲಿಕ್ಶಾಲೆ ಪ್ರಾಥಮಿಕ ವಿಭಾಗಬಿಳಿಚೋಡು ಶಾಲೆಯಲ್ಲಿ ನಡೆದ ಬಸವಪಂಚಮಿ ಕಾರ್ಯಕ್ರಮದದಲ್ಲಿ ಮಕ್ಕಳಿಗೆ ಹಾಲು ನೀಡುವುದರ ಮೂಲಕ ಚಾಲನೆ ನೀಡಲಾಯಿತು.

## ಸಮರ್ಪಕ ಗೊಬ್ಬರ ಪೂರೈಕೆಗೆ ಆಗ್ರಹ

**ಚನ್ನಗಿರಿ:** ರೈತರಿಗೆ ಅವಶ್ಯವಾಗಿ ಬೇಕಾಗಿರುವ ಯೂರಿಯಾ ಗೊಬ್ಬರವನ =ಮರ್ಪಕವಾಗಿ ಪೂರೈಕೆ ಮಾಡುವಲ್ಲಿ ಅಧಿಕಾರಿಗಳು ವಿಫಲರಾಗಿರುವುದನ್ನು ಖಂಡಿಸಿ ಬುಧವಾರ ಹಸಿರು ಸೇನೆ ಹಾಗೂ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರ ಕೃಷಿ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿತು.

ಪ್ರತಿಭಟನಕಾರರು ರಾಜ್ಯ ಸರ್ಕಾದ ಹಾಗೂ ಕೃಷಿ ಸಚಿವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪಟ್ಟಣದ ಪ್ರವಾಸಿ ಮಂದಿರದಿಂದ ಕೃಷಿ ಇಲಾಖೆಗೆ ತೆರಳಿ ಸಹಾಯಕ ಕೃಷಿ ನಿರ್ದೇಶಕ ಅರುಣ್ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಸಂಘದ ತಾಲೂಕಾಧ್ಯಕ್ಷ ಎಸ್.ಆರ್. ರವಿಕುಮಾರ್ ಮಾತನಾಡಿ, ಪ್ರತಿವರ್ಷ ಸರಿಯಾದ ಸಮಯಕ್ಕೆ ಮಳೆ ಬಾರದೆ ರೈತರು ಕಷ್ಟ ಅನುಭವಿಸುತ್ತಿದ್ದರು.

ಈ ಸಾಲಿನಲ್ಲಿ ಪ್ರಾರಂಭದಲ್ಲಿ ಉತ್ತಮ ಮಳೆಯಾಗಿದ್ದರಿಂದ ಕೃಷಿ ಚುಟುವಟಿಕೆಗಳನ್ನು ಬೇಗ ಆರಂಭಿಸಿ ಬೀಜ ಬಿತ್ತನೆ ಮಾಡಿದ್ದಾರೆ. ಆದರೆ ಬೆಳೆಗೆ ಬೇಕಾದ ಗೊಬ್ಬರ ಸಿಗದೆ ಕೃಷಿಕರು ಗೊಬ್ಬರದ ಅಂಗಡಿಗಳ ಮುಂದೆ ಸರತಿಯಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಧಿಕಾರಿಗಳು ಗೊಬ್ಬರ ಇಂದು ಬರುತ್ತದೆ, ನಾಳೆ ಕೊಡುತ್ತೇವೆ ಎನ್ನುವ ಹಾರಿಕೆ ಉತ್ತರವನ್ನು ಹೇಳಿ ರೈತರಿಗೆ ಮೋಸ ಮಾಡುತ್ತಿದ್ದಾರೆ ಎಂದರು.

ತಾಲೂಕಿನಲ್ಲಿ 29 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳದ ಬಿತ್ತನೆ ಕಾರ್ಯ ಮುಗಿದಿದೆ.

ಆದರೆ ಸಮರ್ಪಕವಾಗಿ ಗೊಬ್ಬರ ಸಿಗದೆ ಅಲೆದಾಡುತ್ತಿದ್ದಾರೆ. ಕೆಲ ಅಂಗಡಿಗಳಲ್ಲಿ ಗೊಬ್ಬರವನ್ನು ಅಧಿಕ ಬೆಲೆಗೆ ಮಾರಾಟ ಮಾಡಿದರೂ ಅಂತಹ ಅಂಗಡಿಗಳಿಗೆ ಅಧಿಕಾರಿಗಳು ಭೇಟಿ ನೀಡದೆ ನಿರ್ಲಕ್ಷ್ಯ ತೋರಿದ್ದಾರೆ ಎಂದು ಹೇಳಿದರು. ಸಹಾಯಕ ಕೃಷಿ ನಿರ್ದೇಶಕ ಅರುಣ್ ಮಾತನಾಡಿ, ತಾಲೂಕಿನಲ್ಲಿ ಇದುವರೆಗೆ 4816 ಮೆಟ್ರಿಕ್ ಟನ್ ಯೂರಿಯಾ ಗೊಬ್ಬರವನ್ನು ವಿತರಣೆ ಮಾಡಲಾಗಿದೆ. ಮತ್ತೆ 300 ಮೆಟ್ರಿಕ್ ಟನ್ ಗೊಬ್ಬರ ಬಂದಿದೆ, ಎಲ್ಲ ಗೊಬ್ಬರದ ಅಂಗಡಿಗಳಲ್ಲಿ ವಿತರಣೆ ಮಾಡಲಾಗುತ್ತದೆ. ಹೆಚ್ಚಿನ ಬೆಲೆಗೆ ಗೊಬ್ಬರ ಮಾರಾಟ ಮಾಡಿದವರ ವಿರುದ್ಧ ದೂರು ದಾಖಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು. ಪ್ರತಿಭಟನೆಯಲ್ಲಿ ರೈತ ಮುಖಂಡ ಪಿ. ಪ್ರಭಾಕರ್, ಡಿ.ಆರ್. ಹನುಮಂತಪ್ಪ, ಜಿ.ಎನ್. ಆಂಜನೇಯ, ಕೋಗಲೂರು ಕುಮಾರ್, ಪಿರ್ಯಾನಾಯ್ಕ, ಉಮೇಶ್, ಮೂಡ್ಲಗಿರಿಯಪ್ಪ, ಹೇಮಬಾಯಿ, ಜ್ಯೋತಿಬಾಯಿ, ಮಂಜಪ್ಪ, ತಿಮ್ಮಣ್ಣ, ಮೂರ್ತಿ, ನಲ್ಲೂರು ಬಸಪ್ಪ ಇದ್ದರು.

## ಹಿಂದುತ್ವ ಉಳಿಯಲು ಸಂಘಟನೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ

**ಚನ್ನಗಿರಿ** : ದೇಶದ ಸ್ವಾತಂತ್ರ್ಯೋತ್ಸಕ್ಕಾಗಿ ಮತ್ತು ಬ್ರಿಟಿಷರನ್ನು ಹೊಡೆದೋಡಿಸಲು ಗಣೇಶನ ಹಬ್ಬವನ್ನು ಬೀದಿ ಬೀದಿಯಲ್ಲಿ ಇಡುವ ಮೂಲಕ ಸಂಘಟನೆಯನ್ನು ಮಾಡಿದ್ದರೆ ಇಂದು ಗೋಮಾತೆಯನ್ನು ಕಾಪಾಡಲು ಮತ್ತು ಹಿಂದುತ್ವ ಉಳಿಯಲು ಸಂಘಟನೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ರಾಷ್ಟ್ರ ರಕ್ಷಣಾ ಪಡೆಯ ಸಂಸ್ಥಾಪಕ ಅಧ್ಯಕ್ಷ ಪುನೀತ್ ಕೆರೆಹಳ್ಳಿ ಹೇಳಿದರು.



ಸೋಮವಾರ ಸಂಜೆ ಪಟ್ಟಣದ ಊರಬಾಗಿಲ ಅಂಜನೇಯ ದೇಗುಲದ ಬಳಿ ವಿಶ್ವಹಿಂದೂಪರಿಷತ್, ಭಜರಂಗದಳದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿರಾಟ್ ಹಿಂದೂ ಗಣೇಶೋತ್ಸವ ಪ್ರತಿಷ್ಟಾನ ಕಾರ್ಯಕ್ರಮದ ಧ್ವಜ ಪೂಜಾ ಕಾರ್ಯಕ್ರಮವನ್ನು ಧ್ವಜವನ್ನು ನೆಡುವ ಮೂಲಕ ಮತ್ತು ಗೋಮಾತೆಯನ್ನು ಪೂಜಿಸುವ ಮೂಲಕ ಉದ್ಘಾಟಿಸಿ ಮಾತನಾಡಿ ಸಂಘ ಪರಿವಾರಕ್ಕೆ 100 ವರ್ಷಗಳು ಮತ್ತು ವಿರಾಶ್ ಹಿಂದೂ ಮಹಾ ಗಣೇಶನಿಗೆ 25 ವರ್ಷಗಳು ಹಿಂದೂಗಳು ಗಣೇಶನ ಉತ್ಸವವನ್ನು ಸಂಭ್ರಮ ಸಡಗರದಿಂದ ಆಚರಣೆ ಮಾಡುವ ಮೂಲಕ ವಿರಾಶ್ ಪ್ರದರ್ಶನ ಮಾಡಬೇಕು ಎಂದರು. ನಮ್ಮ ದೇಶ ನಮ್ಮ ಸಂರಕ್ಷಣೆಗೆ ಹಿಂದೂಗಳು ಸಂಘಟಿತರಾಗಬೇಕು. ಒಂದು ವೇಳೆ ಸಂಘಟನೆಯಿಂದ ವಿಮುಕ್ತರಾದರೆ ಮುಂದಿನ ದಿನಗಳಲ್ಲಿ ಸಂಕಷ್ಟವನ್ನು ಎದುರಿಸುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ರಾಜ್ಯ ರಾಜ್ಯಗಳ ನಡುವೆ ಸಂಘರ್ಷ, ಕಾವೇರಿ ನೀರಿಗಾಗಿ,ಬಾಷೆಗಳಿಗಾಗಿ ಸಂಘರ್ಷ ಮಾಡುತ್ತಿರುವವರು ಎಲ್ಲಾ ಹಿಂದೂಗಳೇ ಆದರೆ ಬಾಷೆಗಾಗಿ ನಾಡು ನುಡಿಗಾಗಿ ಮುಸಲ್ಮಾನ ಮುಸಲ್ಮಾನರು ಕಿತ್ತಾಡಿಕೊಂಡಿದ್ದಾರೆಯೇ ಎಂದು ಪ್ರಶ್ನಿಸಿದರು. ಸಾಕಷ್ಟು ಇತಿಹಾಸವನ್ನು ಹೊಂದಿರುವ ಹಿಂದೂಗಳು ಕಿತ್ತಾಡಿಕೊಳ್ಳುತ್ತಿರುವುದು ಯಾಕೆ, ಒಂದು ವೇಳೆ ಪರಿವಾರವೇ ಉದಯಿಸದೇ ಇದ್ದರೆ ಹಿಂದೂಗಳ ಉಳಿವಿಗಾಗಿ ಸಾಕಷ್ಟು ಜನ ಬಲಿದಾನ ಮಾಡದೇ ಇದ್ದರೆ ಇಂದು ಯಾವ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು ಎಂದು ಚಿಂತನೆ ನಡೆಸಬೇಕಿದೆ ಎಂದರು. ಸಿದ್ದರಾಮಯ್ಯನವರ ಹಿಂದೂಗಳನ್ನು ವಿರೋಧಿಸುವುದನ್ನು ಮೊದಲು ಬಿಡಿ ಗೋವುಗಳ ರಕ್ಷಣೆಗೆ ಪ್ರತಿಯೊಬ್ಬ ಹಿಂದೂಗಳು ಪಣತೊಟ್ಟಿ ನಿಲ್ಲುತ್ತೇವೆ ಎಂದರು. ಪೋಲಿಸ್ ಇಲಾಖೆಯು ಗಣೇಶನ ಉತ್ಸವಕ್ಕೆ ಮತು ಹಿಂದೂಗಳ ಧಾರ್ಮಿಕ ಆಚರಣೆಗಳ ಹಬ್ಬಗಳಿಗೆ ಸಾಕಷ್ಟು ಕಾನೂನುಗಳನ್ನು ಹೇಳುತ್ತಾರೆ. ಆದರೆ ಮುಸಲ್ಮಾನರ ಹಬ್ಬಗಳಿಗೆ ಯಾವ ಕಾನೂನುಗಳನ್ನು ಹೇಳುವುದಿಲ್ಲ ಎಂದರು. ವಿರಾಟ್ ಹಿಂದೂ ಗಣೇಶೋತ್ಸವ ಸಮಿತಿಯ ಗೌರವಾಧ್ಯಕ್ಷ ಚಿಕ್ಕಣ್ಣ ಮಾತನಾಡಿ ಇಂದಿನ ದಿನಗಳಲ್ಲಿ ಗೋವುಗಳ ವಧೆ ಎಗ್ಗಿಲ್ಲದೇ ನಡೆಯುತ್ತಿದೆ. ಗೋವುಗಳ ಸಂರಕ್ಷಣೆಗೆ ಎಲ್ಲರೂ ಸನ್ನದ್ದರಾಗಬೇಕು. ಚನ್ನಗಿರಿ ತಾಲೂಕಿನಲ್ಲಿಓ ಸಹ ಗೋ ಶಾಲೆಯನ್ನು ತೆರೆಯಬೇಕು ಎಂದರು. ಈ ಸಂದರ್ಭದಲ್ಲಿ ವಿಶ್ವ ಹಿಂದೂಪರಿಷತ್‌ನ ಜಿಲ್ಲಾ ಸಂಚಾಲಕ ಮಂಜುನಾಥ್, ವಿಶ್ವಹಿಂದೂ ಪರಿಷತ್‌ನ ತಾಲೂಕು ಅಧ್ಯಕ್ಷ ಗೌಡ್ರ ಜಯ್ಯಣ್ಣ, ವಿರಾಟ್ ಹಿಂದೂ ಗಣೇಶೋತ್ಸವ ಸಮಿತಿಯ ಗೌರವಾಧ್ಯಕ್ಷ ಚಿಕ್ಕಣ್ಣ, ಅಧ್ಯಕ್ಷ ಮಂಜುನಾಥ್‌ರಾವ್ ಕಾಳೆ ಮತ್ತು ಪದಾಧಿಕಾರಿಗಳು ಹಾಜರಿದ್ದರು.

## ನಿವೃತ್ತರಾದ ಸಿ.ಎಸ್.ಕಲ್ಲೇಶಪ್ಪ ಚಿಕ್ಕನಲ್ಲೂರು ಅವರಿಗೆ ಸನ್ಮಾನ

**ಚಿಕ್ಕಮಗಳೂರು:** ಜಿಲ್ಲೆಯ ಕಡೂರು ತಾಲೂಕು ಶ್ರೀ ಮಾರುತಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಸಿ.ಎಸ್.ಕಲ್ಲೇಶಪ್ಪ ಚಿಕ್ಕನಲ್ಲೂರು ಅವರನ್ನು ಗ್ರಾಮಸ್ಥರು ಮತ್ತು ಕುಟುಂಬಸ್ಥರು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಮುಖ್ಯ ಶಿಕ್ಷಕ ಸಿ.ಎಸ್.ಕಲ್ಲೇಶಪ್ಪ, ಶಾಲೆಯಲ್ಲಿ ಸೇವೆ ಸಲ್ಲಿಸಿರುವುದು ಸಂತೋಷ ತಂದಿದೆ. ಹಳೆ ವಿದ್ಯಾರ್ಥಿಗಳು ಗೌರವ ಸಮರ್ಪಣೆ ಮಾಡುತ್ತಿರುವುದು ಖುಷಿ ತಂದಿದೆ ಎಂದ ಅವರು, ತಮ್ಮ ವಿದ್ಯಾರ್ಥಿ ಗಳು ಇಂದು ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದು ತಮ್ಮ ವೃತ್ತಿ ಜೀವನ ಸಂತೋಷವನ್ನು ತಂದಿದೆ ಎಂದರು.



ಈ ಸಂದರ್ಭದಲ್ಲಿ ಕಡೂರು ಪುರಸಭೆ ಮಾಜಿ ಅಧ್ಯಕ್ಷ ಜಯಣ್ಣ, ಚಿಕ್ಕನಲ್ಲೂರು ಕಾಂಗ್ರೆಸ್ ಮುಖಂಡ ಸಿ.ಎನ್.ಕ್ಷೇತ್ರಪಾಲ್, ನಿವೃತ್ತ ದೈಹಿಕ ಶಿಕ್ಷಕ ಬಿ.ರಾಜಪ್ಪ, ಸಿ.ಎನ್. ಕಲ್ಲೇಶಪ್ಪ ಅವರ ಮಗ ಚಿಕ್ಕನಲ್ಲೂರು ಸಂತೋಷ್, ಮಗಳು ಅಂಜಲಿ, ಮೇಘ ಸೇರಿದಂತೆ ಕುಟುಂಬಸ್ಥರು, ಹಳೆ ವಿದ್ಯಾರ್ಥಿ ಸಂಘದ ಸದಸ್ಯರು, ಶಾಲಾ ವಿದ್ಯಾರ್ಥಿಗಳು, ನಿವೃತ್ತ ಶಿಕ್ಷಕರು, ಗ್ರಾಮಸ್ಥರು ಇದ್ದರು.

## ನಿಧನ ಸುದ್ಧಿಗಳು

### ಎಚ್.ಎಂ. ಚಂದ್ರಶೇಖರಯ್ಯ ನಿಧನ

**ಸಾತ್ವಿಹಳ್ಳಿ:** ಹೋಬಳಿಯ ಹನುಮನಹಳ್ಳಿ ಗ್ರಾಮದ ಎಚ್.ಎಂ. ಚಂದ್ರಶೇಖರಯ್ಯ (65) ಬುಧವಾರ ನಿಧನರಾದರು. ಮೃತರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗುರುವಾರ ಮೃತರ ಜಮೀನಿನಲ್ಲಿ ನಡೆಯದಿದೆ.

### ಗೌರಮ್ಮ ನಿಧನ

**ಹರಿಹರ** : ವಿದ್ಯಾನಗರ 'ಸಿ' ಬ್ಲಾಕ್, 16ನೇ ಕ್ರಾಸ್ ವಾಸಿ ಹಾಗೂ ವಕೀಲರಾದ ಮಳಲಹಳ್ಳಿ ಗ್ರಾಮದ ಟಿ. ಶ್ರೀನಿವಾಸ್ ಅವರ ತಾಯಿ ಶ್ರೀಮತಿ ಗೌರಮ್ಮ ಕೋಂ ರಂಗಪ್ಪ (65 ) ದಿನಾಂಕ: 30.07.2025 ಬುಧವಾರ ಮಧ್ಯಾಹ್ನ 1.30 ಕ್ಕೆ ನಿಧನರಾದರು. ಸಹೋದರರು, ಸಹೋದರಿಯರು, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.7.2025ರ ಗುರುವಾರ ಮಧ್ಯಾಹ್ನ 12.30ಕ್ಕೆ ಮಳಲಹಳ್ಳಿ ಗ್ರಾಮದಲ್ಲಿ ನೆರವೇರಿದೆ.

### ಜಿ.ಆರ್. ಕೊಟ್ರೇಶಪ್ಪ ನಿಧನ

**ದಾವಣಗೆರೆ:** ತಾಲೂಕಿನ ಬಾಡ ಗ್ರಾಮದ ನಿವಾಸಿ ಗೋಪನಾಳ್ ಜಿ.ಆರ್. ಕೊಟ್ರೇಶಪ್ಪ (73) ಬುಧವಾರ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗುರುವಾರ ಬಾಡ ಗ್ರಾಮದಲ್ಲಿ ನಡೆದಿದೆ.

### ಶಾಂತಮ್ಮ ಸೋಮಶೇಖರಪ್ಪ ನಿಧನ

**ಸಾಸ್ವಹಳ್ಳಿ:** ಹೊನ್ನಾಳಿ ತಾಲೂಕಿನ ರಾಂಪುರ ಗ್ರಾಮದ ಶಾಂತಮ್ಮ ಸೋಮಶೇಖರಪ್ಪ (65) ಬುಧವಾರ ನಿಧನರಾದರು. ಮೃತರಿಗೆ ಪತಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಗ್ರಾಮದ ಹಿಂದು ರುದ್ರಭೂಮಿಯಲ್ಲಿ ನಡೆಯಿತು.

### ಸಣ್ಣಪ್ಪಯ್ಯ ನಿಧನ

**ಮೊಳಕಾಲ್ಮೂರು:** ತಾಲೂಕಿನ ಓದ್ಯೋಬಯ್ಯನಹಟ್ಟಿ ಗ್ರಾಪಂ ಮಾಜಿ ಸದಸ್ಯ ಶತಾಯುಷಿ ಸಣ್ಣಪ್ಪಯ್ಯ (101) ಬುಧವಾರ ನಿಧನರಾದರು. ಮೃತರಿಗೆ ಮೂವರು ಪುತ್ರರು, ಐವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ತೋಟದಲ್ಲಿ ನೆರವೇರಿತು.

# ಇವು ಭಾರತೀಯರಿಗೆ ಬಜೆಟ್ ಸ್ನೇಹಿ ಇಂಟರ್‌ನ್ಯಾಷನಲ್ ಟ್ರಿಪ್


ಭಾರತದ ಪ್ರಸಿದ್ಧ ಪ್ರವಾಸಿ ಆಕರ್ಷಣೆಗಳನ್ನು ಕಣ್ತುಂಬಿಕೊಂಡ ಬಳಿಕ ಹೊರದೇಶಗಳಲ್ಲಿರುವ ಸ್ಥಳಗಳನ್ನು ಪರಿಶೀಲಿಸಬೇಕು ಎಂದು ಮನಸ್ಸು ಹಾತೊರೆಯುವುದು ಸಾಮಾನ್ಯ. ಆದರೆ ವಿದೇಶ ಪ್ರವಾಸ ಎಂದಾಕ್ಷಣ ಬಹಳ ದುಬಾರಿ ಎಂದು ಹಿಂದೇಟು ಹಾಕುವುದುಂಟು. ಇದಕ್ಕಾಗಿ ಪಾಸ್‌ಪೋರ್ಟ್, ವೀಸಾಗಳನ್ನು ಹೊಂದಿರಬೇಕು. ನಿಜ, ಆದರೆ ಭಾರತೀಯರಿಗೆ ಕೆಲವು ದೇಶಗಳು ವೀಸಾ– ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಹೆಚ್ಚುವರಿ ವೀಸಾ ವೆಚ್ಚವಿಲ್ಲದೆ ಸುಲಭವಾಗಿ ಈ ದೇಶಗಳಿಗೆ ಪ್ರವಾಸ ಯೋಜಿಸಬಹುದು.

ಭಾರತೀಯರು ವೀಸಾ ಮುಕ್ತವಾಗಿ ವಿದೇಶ ಪ್ರವಾಸ ಮಾಡಬೇಕು ಎಂದು ಬಯಸಿದರೆ ನೀವು ವಿಯೆಟ್ನಾಂಗೆ ಪ್ರವಾಸ ಯೋಜಿಸಬಹುದು ನೋಡಿ. ಈ ದೇಶವು ತನ್ನ ನೈಸರ್ಗಿಕ ತೋಟಗಳು, ಐತಿಹಾಸಿಕ ಸ್ಥಳಗಳು, ಮ್ಯೂಸಿಯಂ, ರುಚಿಕರವಾದ ವಿಯೆಟ್ನಾಂ ಆಹಾರಗಳಿಗೆ ಹೆಸರುವಾಸಿಯಾಗಿದೆ. ರಾಜಧಾನಿ ಹನೋಯ್ ನಲ್ಲಿ ಪುರಾತನ ಆಲಯಗಳಿಗೆ ನೆಲೆಯಾಗಿದೆ. ಅಲ್ಲಿಗೆ ನೀವು ಹೋಗಬಹುದು. ಇದಲ್ಲದೆ, ಮ್ಯೂಸಿಯಂ, ಕೋಟೆ, ಸಮೃದ್ಧವಾಗಿ ಬೆಳೆದ ಕಾಫಿ ತೋಟಗಳು, ಎತ್ತರದಿಂದ ಧುಮ್ಮಿಕ್ಕುವ ಜಲಪಾತಗಳು ಸೇರಿದಂತೆ ಸಾಕಷ್ಟು ಆಕರ್ಷಣೆಗಳನ್ನು ಪರಿಶೀಲಿಸಬಹುದು. ಈ ದೇಶದ ಪ್ರವಾಸ ಮಾಡಲು ಅಕ್ಟೋಬರ್‌ನಿಂದ ಏಪ್ರಿಲ್ ಉತ್ತಮ ಅವಧಿಯಾಗಿದೆ.

ಇಂಡೋನೇಷ್ಯಾ ದೇಶದ ಬಾಲಿ ಭಾರತೀಯರಿಗೆ ಅತ್ಯುತ್ತಮ ವಿದೇಶ ಪ್ರವಾಸಗಳಲ್ಲಿ ಒಂದಾಗಿದೆ. ಜನರು ಹೆಚ್ಚಾಗಿ ಬಾಲಿಗೆ ಹೋಗಲು ಬಯಸುತ್ತಾರೆ. ಬಾಲಿಯಲ್ಲಿ ಶಾಂತವಾದ ಕಡಲತೀರಗಳಿವೆ. ಇದಲ್ಲದೆ, ಯೋಗ್ಯಕರ್ತಾದಲ್ಲಿ ಅತಿದೊಡ್ಡ ಹಿಂದೂ ಆಲಯವಿದೆ. ನೀವು ಇಂಡೋನೇಷ್ಯಾದಲ್ಲಿ ಏಕಾಂತ ಸ್ಥಳವನ್ನು ಹುಡುಕುತ್ತಿದ್ದರೆ ಗಿಲಿ ಟ್ರಾವಂಗನ್‌ಗೆ ಭೇಟಿ ನೀಡಿ. ಇಲ್ಲಿ ನೀವು ಬೆರಗುಗೊಳಿಸುವ ಕಡಲತೀರಗಳು, ಹವಳದ ಬಂಡೆಗಳನ್ನು ನೋಡುತ್ತೀರಿ. ಇನ್ನು ರಾಜಧಾನಿ ಜಕಾರ್ತದಲ್ಲಿ ಅಕ್ವೇರಿಯಂ, ಸಫಾರಿಯಂತಹ ರೋಮಾಂಚಕ ಚಟುವಟಿಕೆಗಳನ್ನು ಆನಂದಿಸಬಹುದು.







ಶ್ರೀಲಂಕಾ ದ್ವೀಪ ರಾಷ್ಟ್ರವು ಬಜೆಟ್ ಸ್ನೇಹಿ ವಿದೇಶ ಪ್ರವಾಸ ಮಾಡುವವರ ನೆಚ್ಚಿನ ದೇಶಗಳಲ್ಲಿ ಒಂದಾಗಿದೆ. ಅದರಲ್ಲೂ ಭಾರತೀಯರಿಗೆ ಬಹಳ ಹತ್ತಿರದಲ್ಲಿದೆ. ತಮಿಳುನಾಡಿನ ಮೂಲಕ ಸುಲಭವಾಗಿ ಶ್ರೀಲಂಕಾಗೆ ತಲುಪಬಹುದು. ಈ ದೇಶವು ಉಸಿರುಗಟ್ಟುವ ಭೂದೃಶ್ಯಗಳಿಗೆ ಹಾಗು ವನ್ಯಜೀವಿ ನಿಧಿಗಳಿಗೆ ಹೆಸರುವಾಸಿಯಾಗಿದೆ. ರಾಜಧಾನಿ ಕೊಲಂಬೊದಲ್ಲಿ ಗಂಗಾರಾಮಾಯ ದೇವಾಲಯ, ವರ್ಣರಂಜಿತ ಮಾರುಕಟ್ಟೆಗಳಿಗೆ ನೆಲೆಯಾಗಿದ್ದರೆ, ಕ್ಯಾಂಡಿಯಲ್ಲಿ ಗೌರವಾನ್ವಿತ ಬೌದ್ಧ ಸ್ಥಳಗಳಿವೆ. ಇನ್ನು, ಸಿಗಿರಿಯಾ ಪ್ರಕೃತಿ ಪ್ರೇಮಿಗಳನ್ನು ಆಕರ್ಷಿಸುತ್ತದೆ.

ಥೈಲ್ಯಾಂಡ್ ಭಾರತೀಯರಿಗೆ ಬಜೆಟ್ ಸ್ನೇಹಿ ದೇಶಗಳಲ್ಲಿ ಒಂದಾಗಿದೆ. ಜನರು ಇಲ್ಲಿ ಹೆಚ್ಚಾಗಿ ಮನರಂಜನೆ ಪಡೆಯಲು ಪ್ರವಾಸ ಯೋಜಿಸುತ್ತಾರೆ. ರುಚಿಕರವಾದ ಥಾಯ್ ಆಹಾರಗಳು, ರಾತ್ರಿಯ ಜೀವನ, ಸ್ಪಟಿಕ ಸ್ಪಷ್ಟವಾದ ಕಡಲತೀರಗಳು ಸಂದರ್ಶಕರನ್ನು ಕೈಬೀಸಿ ಕರೆಯುತ್ತದೆ. ಇಲ್ಲಿ ನೀವು ಪರಿಶೀಲಿಸಲು ಅನೇಕ ಬೌದ್ಧ ಆಲಯಗಳಿವೆ, ಕ್ರಾಬಿ, ಫುಕೆಟ್, ಬ್ಯಾಂಕಾಕ್‌ನಲ್ಲಿ ಸಾಕಷ್ಟು ಪ್ರೇಕ್ಷಣೀಯ ಸ್ಥಳಗಳಿಂದ ತುಂಬಿದೆ.




ಜಾರ್ಜಿಯಾ ದೇಶದ ಪ್ರವಾಸವು ಪರ್ವತ, ಐತಿಹಾಸಿಕ ಕೋಟೆಗಳು, ನಿಸರ್ಗ ಹಾಗು ದ್ರಾಕ್ಷಿ ತೋಟಗಳಿಗೆ ಹೆಸರುವಾಸಿಯಾಗಿದೆ. ಈ ದೇಶದ ಅನನ್ಯ ಸಂಸ್ಕೃತಿಯು ನಿಜಕ್ಕೂ ಅದ್ಭುತವಾಗಿದೆ. ಇಲ್ಲಿ ನೀವು ಅನ್ವೇಷಿಸಲು ಟಿಬಿಲಿಸಿ, ಮೆಸ್ಟಿಯಾ, ಬಟುಮಿ, ಸಿಗ್ನಘಿ ಯಂತಹ ಸುಂದರ ಪಟ್ಟಣಗಳಿವೆ. ಇಲ್ಲಿ ನೀವು ಕಡಲತೀರಗಳು, ನೈಟ್ ಲೈಫ್, ಟ್ರೆಕ್ಕಿಂಗ್ ಸ್ಥಳಗಳು ಸೇರಿದಂತೆ ಅನೇಕ ಚಟುವಟಿಕೆಗಳನ್ನು ಪ್ರಯತ್ನಿಸಬಹುದು.

## ಗುಂಪು ವಿಮೆ ಪಾಲಿಸಿ ಸೇವಾ ನ್ಯೂನ್ಯತೆ : ಸೂಕ್ತ ಪರಿಹಾರ ನೀಡಲು ಆದೇಶ

**ಶಿವಮೊಗ್ಗ:** ವೀಣಾ ಕೋಂ ಸುಂದರೇಶ ಮತ್ತು ಸುಂದರೇಶ್ ಬಿನ್ ಬಿ.ಆರ್. ಮಂಜಯ್ಯ, ಬೇಡನ ಹಿತ್ತಲು, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ ಇವರು ದಿ ನ್ಯೂ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್, ಶಿವಮೊಗ್ಗ, ಮೆಡಿ ಅಸಿಸ್ಟ್ ಟಿಪಿಎ ಪ್ರೈವೇಟ್ ಲಿಮಿಟೆಡ್., ಬೆಂಗಳೂರು ಮತ್ತು ಮಲ್ನಾಡ್ ಅರೆಕಾ ಮಾರ್ಕೆಟಿಂಗ್ ಸೊಸೈಟಿ ಪ್ರೈ. ಲಿ.., ಶಿವಮೊಗ್ಗ ಇವರ ವಿರುದ್ಧ ಸೇವಾ ನ್ಯೂನ್ಯತೆ ಕುರಿತು ಸಲ್ಲಿಸಿದ ದೂರನ್ನು ಆಲಿಸಿದ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ದೂರುದಾರರಿಗೆ ಸೂಕ್ತ ಪರಿಹಾರ ನೀಡುವಂತೆ ಆದೇಶಿಸಿದೆ.

ದೂರುದಾರರು 10 ವರ್ಷಗಳಿಂದ 3ನೇ ಎದುರುದಾರರಲ್ಲಿ ಶೇರುದಾರರಾಗಿದ್ದು, 1 ಮತ್ತು 2ನೇ ಎದುರುದಾರರು 2020–2021 ನೇ ಸಾಲಿಗೆ ರೂ.7500/–ಗಳನ್ನು ಮತ್ತು 2021–22ನೇ ಸಾಲಿಗೆ ರೂ.15,000/–ಗಳ ಪಾಲಿಸಿ ಪ್ರಿಮಿಯಂ ಹಣವನ್ನು 3ನೇ ಎದುರುದಾರರಿಂದ ಪಡೆದು ಗುಂಪು ವಿಮೆ ಪಾಲಿಸಿಗಳನ್ನು ನೀಡಿರುತ್ತಾರೆ.

ದೂರುದಾರರು ದಿ:01.02.2023 ರಂದು ವೈದ್ಯಕೀಯ ಚಿಕಿತ್ಸೆಗಾಗಿ ಶಿವಮೊಗ್ಗ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದು ದಿ:03.02.203ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತಾರೆ. ತದನಂತರ ದೂರುದಾರರು 3ನೇ ಎದುರುದಾರರ ಬಳಿ ವೈದ್ಯಕೀಯ ಚಿಕಿತ್ಸೆಗೆ ಖರ್ಚಾದ ಮೊತ್ತ ರೂ.3,50,000/–ಗಳನ್ನು ಮರುಪಾವತಿಸಿಲು ಕೋರಿ ಎಲ್ಲಾ ದಾಖಲಾತಿಗಳನ್ನು ನೀಡಿರುತ್ತಾರೆ. ಆಗ 3ನೇ ಎದುರುದಾರರು ಆದಷ್ಟು ಬೇಗ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿರುತ್ತಾರೆ. ಕೆಲವು ದಿನಗಳ ನಂತರ ದೂರುದಾರರು 3ನೇ ಎದುರುದಾರರ ಬಳಿ ವಿಚಾರಿಸಿ, ಇನ್ನೂ ವೈದ್ಯಕೀಯ ವೆಚ್ಚ ಪಾವತಿಸಲು ಕ್ರಮ ಕೈಗೊಳ್ಳದಿರುವುದರಿಂದ 1 ರಿಂದ 3ನೇ ಎದುರುದಾರರಿಗೆ ನೋಟಿಸ್ ನೀಡಿರುತ್ತಾರೆ. 2ನೇ ಎದುರುದಾರರು ನೋಟಿಸಿಗೆ ಉತ್ತರಿಸಿ ವೈದ್ಯಕೀಯ ಚಿಕಿತ್ಸೆ ವಿವರವನ್ನು ಮತ್ತು ಮೂಲ ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿರುತ್ತಾರೆ. ಆಗ ದೂರುದಾರರು ಮತ್ತೆ 3ನೇ ಎದುರುದಾರರ ಬಳಿ ಹೋಗಿ ವಿಚಾರಿಸಿದಾಗ, ದಾಖಲಾತಿಗಳನ್ನು ಈಗಾಗಲೇ ಕಳುಹಿಸಲಾಗಿದೆ ಎಂದು ತಿಳಿಸಿರುತ್ತಾರೆ.

# ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆಯ ಮೂಲಕ ಉದ್ಯೋಗ ಸೃಷ್ಟಿಸಬಹುದು: ಎನ್. ಚೆಲುವರಾಯಸ್ವಾಮಿ

ಉದ್ಯೋಗ ಹುಡುಕುತ್ತಿರುವ ಯುವ ರೈತರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆಯನ್ನು ಅಳವಡಿಸಿಕೊಂಡು ತಾವೇ ಖುದ್ದು ಉದ್ಯೋಗ ಸೃಷ್ಟಿಸಬಹುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕೃಷಿ ಸಚಿವರಾದ ಎನ್ ಚೆಲುವರಾಯಸ್ವಾಮಿ ಅವರು ಹೇಳಿದರು.

ಇಂದು (ಜು.23) ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಹಾರ ಸಂಸ್ಕರಣಾ ಸಚಿವಾಲಯ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಪ್ರಧಾನ ಮಂತ್ರಿಗಳು ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಾಕೆ ಯೋಜನೆ" ಅರಿವು ಮೂಡಿಸುವ ಕಾರ್ಯಾಗಾರವನ್ನು ಗಾಣದಿಂದ ಎಣ್ಣೆ ತೆಗೆಯುವ ಮೂಲಕ ವಿನೂತನವಾಗಿ ಚಾಲನೆ ನೀಡಿ ಮಾತನಾಡಿದರು.

ಜಿಲ್ಲೆಯಲ್ಲಿ ಅಲ್ಪ ಪ್ರಮಾಣದಲ್ಲಿ ಬಿಟ್ಟರೆ ಉಳಿದವರೆಲ್ಲರು ಜಮೀನು ಹೊಂದಿದ್ದಾರೆ. ನಿಮ್ಮ ಬಳಿ ಇರುವ ಜಮೀನಿನಲ್ಲಿ 1 ಎಕರೆ ಜಾಗದಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿಯನ್ನು ಪಡೆಯಬಹುದು ಎಂದರು.

ವಿದ್ಯಾಭ್ಯಾಸಕ್ಕೂ ವೃತ್ತಿಗೂ ಸಂಭಂದ ಇಲ್ಲ. ವಿದ್ಯಾಭ್ಯಾಸ ಲೋಕಜ್ಞಾನ. ಸಾಮಾನ್ಯಜ್ಞಾನ. ತಿಳುವಳಿಕೆ ಹಾಗೂ ಸಮಾಜದಲ್ಲಿ ಬದುಕುವ ರೀತಿ ಕಲಿಸುತ್ತದೆ. ಉನ್ನತ ವಿದ್ಯಾಭ್ಯಾಸ ಮಾಡಿರುವ ಕಾರಣಕ್ಕೆ ಉನ್ನತ ಕೆಲಸಗಳನ್ನೇ ಮಾಡಬೇಕು ಎಂಬ ಮಾನೋಭಾವನೆಯಿಂದ ಯುವಕರು ಹೊರ ಬರಬೇಕು. ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆಯಡಿ ನೀವೇನಾದರೂ ಉದ್ದಿಮೆ ಪ್ರಾರಂಭಿಸಿದರೆ ಲಾಭ ಗಳಿಸಬಹುದು ಎಂದರು.

ಸರ್ಕಾರ 6000 ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿದೆ. ಪಿ.ಎಮ್. ಎಫ್.ಎಮ್.ಇ. ಯೋಜನೆಯಡಿ ರೂ 15 ಲಕ್ಷದವರೆಗೂ ಸಹಾಯಧನ ಪಡೆಯಬಹುದು. ಕೇಂದ್ರ ಸರ್ಕಾರ ರೂ 6 ಲಕ್ಷ ಮತ್ತು ರಾಜ್ಯ ಸರ್ಕಾರ 9 ಲಕ್ಷ ರೂಪಾಯಿಗಳನ್ನ ಸಬ್ಸಿಡಿ ರೂಪದಲ್ಲಿ ನೀಡಲಾಗುತ್ತದೆ ಎಂದು ಹೇಳಿದರು.



ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆಯಡಿ ಸಾಲ ಹಾಗೂ ಸಬ್ಸಿಡಿ ನೀಡುವಲ್ಲಿ ಜಿಲ್ಲೆ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದೆ. ವಂಶಪಾರಂಪರ್ಯವಾಗಿ ಮಾಡಿಕೊಂಡು ಬಂದಿರುವ ಕೃಷಿ ಪದ್ಧತಿಯ ಜೊತೆಗೆ ಕನಿಷ್ಠ ಒಂದು ಎಕರೆಯಲ್ಲಾದರು ಕೃಷಿ ವಿಜ್ಞಾನಿಗಳು ಹಾಗೂ ಕೃಷಿ ಅಧಿಕಾರಿ ಸಲಹೆ ಪಡೆದು ಸಮಗ್ರ ಕೃಷಿ ಬೆಳೆದು ನೋಡಿ ಕಡಿಮೆ ವೆಚ್ಚದಲ್ಲಿ ಅಧಿಕ ಇಳುವರಿ ತೆಗೆಯಬಹುದು ಎಂದರು.

ರಾಷ್ಟ್ರದ ಎಲ್ಲಾ ರಾಜ್ಯಗಳಿಗಿಂತಲ್ಲೂ ಕರ್ನಾಟಕ ರಾಜ್ಯ ಕೃಷಿ ಇಲಾಖೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಕೇಂದ್ರ ಕೃಷಿ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ನಮ್ಮ ಸರ್ಕಾರದ ಕೆಲಸವನ್ನು ಶ್ಲಾಘಿಸಿದ್ದಾರೆ. ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡರೆ ಪ್ರತಿ ತಿಂಗಳಿಗೆ ಕನಿಷ್ಠ 50 ಸಾವಿರದಿಂದ 1 ಲಕ್ಷದ ವರೆಗೂ ಆದಾಯ ಗಳಿಸಬಹುದು ಎಂದು ತಿಳಿಸಿದರು.

ಸಮಗ್ರ ಕೃಷಿ ಪದ್ಧತಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡು ಕೃಷಿಯಿಂದ ಉತ್ತಮ ಲಾಭಗಳಿಸಬಹುದು. ಮುಂದಿನ ದಿನಗಳಲ್ಲಿ ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಮಹತ್ವದ ಕುರಿತು ನಿಮಗೆ ಅರ್ಥವಾಗುತ್ತದೆ. ಜಿಲ್ಲೆಯ ಯುವಕರು ಸ್ವಾವಲಂಬಿಗಳಾಗಬೇಕು ಹಾಗೂ ಜಿಲ್ಲೆಯ ಎಲ್ಲಾ ಕುಟುಂಬಗಳು ಆರ್ಥಿಕವಾಗಿ ಸಧೃಡರಾಗಬೇಕು ಎಂಬುದು ನನ್ನ ಅಭಿಲಾಷೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರು ಮಾತನಾಡಿ ನಮಗೆ ಆಹಾರ ಸಂಸ್ಕರಣಾ ಉದ್ದಿಮೆ ಹೊಸದಲ್ಲ ನಮ್ಮ ಪೂರ್ವಜರು ಇದನ್ನು ಮಾಡುತ್ತಿದ್ದರು ಆದರೆ ಕಾಲಾಂತರದಿಂದಾಗಿ ಆಹಾರ ಸಂಸ್ಕರಣೆಯ ಕುರಿತಾಗಿ ನಮ್ಮ ಪೀಳಿಗೆ ಆಸಕ್ತಿ ಕಳೆದುಕೊಂಡಿದೆ ಎಂದು ಹೇಳಿದರು.

ನಮ್ಮ ಪ್ರಾಂತ್ಯದಲ್ಲಿ ಬೆಳೆಯಬಹುದಾದ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಬಳಸಿಕೊಂಡು ಸಂಸ್ಕರಣೆ ಮತ್ತು ಬ್ರಾಂಡಿಂಗ್ ಮಾಡುವುದರ ಮೂಲಕ ಮಾರಾಟ ಮಾಡಿದರೆ ಹೆಚ್ಚಿನ ಮಟ್ಟದಲ್ಲಿ ಲಾಭ ಕಾಣಬಹುದಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ ಆರ್ ನಂದಿನಿ ಅವರು ಮಾತನಾಡಿ ಮಂಡ್ಯ ಕೃಷಿ ಆಧಾರಿತ ಜಿಲ್ಲೆಯಾದರು ಕೃಷಿಯಿಂದ ಜಿಲ್ಲೆಯ ರೈತರು ಗಳಿಸುತ್ತಿರುವ ಆದಾಯ ತೃಪ್ತಿಕರವಾಗಿಲ್ಲ. ಭತ್ತ, ಕಬ್ಬು, ತೆಂಗು ಮೂರು ಜಿಲ್ಲೆಯ ಪ್ರಮುಖ ಬೆಳೆಯಾಗಿದೆ ಎಂದು ಹೇಳಿದರು.

ಕೃಷಿ ಪದ್ಧತಿಯಲ್ಲಿ ವೈವಿಧ್ಯತೆಯನ್ನು ಅಳವಡಿಸಿಕೊಂಡು ಬೆಳೆಗಳನ್ನು ಬೆಳೆದರೆ ಉತ್ತಮ ಆದಾಯ ಗಳಿಸಬಹುದು. ಜಿಲ್ಲೆಯ ಮಣ್ಣಿನ ಗುಣಮಟ್ಟ ಮತ್ತು ಹವಾಮಾನಕ್ಕೆ ಸರಿ ಹೊಂದುವ ಬೆಳೆಗಳನ್ನು ಬೆಳೆಯಿರಿ. ಉದಾಹರಣೆಗೆ ಬೆಣ್ಣೆ ಹಣ್ಣು ಬೆಳೆಯಲು ನಮ್ಮ ಜಿಲ್ಲೆಯ ಹವಾಮಾನ ಸೂಕ್ತವಾಗಿದೆ. ಬೆಣ್ಣೆ ಹಣ್ಣಿಗೆ ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ ಇದನ್ನು ಅರ್ಥ ಮಾಡಿಕೊಂಡು ಬೆಳೆಗಳನ್ನು ಬೆಳೆಯಬೇಕು ಎಂದು ತಿಳಿಸಿದರು.

ನಮ್ಮ ಕೃಷಿ ಪದ್ಧತಿಯಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ತೋಟಗಾರಿಕೆ ಇಲಾಖೆ, ಪಶುಸಂಗೋಪನೆ ಇಲಾಖೆ, ಕೃಷಿ ಇಲಾಖೆಯ ಸಹಾಯದ ಮೂಲಕ ಸಂಸ್ಕರಿಸಿದ ಅಹಾರ ಪದಾರ್ಥಗಳನ್ನು ಮಾರಾಟ ಮಾಡಿದರೆ ತಮ್ಮ ಬೆಳೆಗೆ ಉತ್ತಮ ಬೆಲೆ ಕಾಣಬಹುದು ಎಂದರು.

ನಮ್ಮ ಬೆಳೆಗಳನ್ನು ನಾವೇ ಸಂಸ್ಕರಿಸಿ ಕಚ್ಚಾ ವಸ್ತುವನ್ನು ಸಿದ್ಧವಸ್ತು ಮಾಡಿ ಮಾರಾಟ ಮಾಡಿದರೆ ಮೂರರಿಂದ ನಾಲ್ಕು ಪಟ್ಟು ಹೆಚ್ಚಿನ ಲಾಭಗಳಿಸಬಹುದು. ನಮ್ಮಲ್ಲಿರುವ ಮಾರುಕಟ್ಟೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ದೇಶ ವಿದೇಶಗಳಲ್ಲಿ ನಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಲಾಭ ಗಳಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ,ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ,ಕೆಫೆಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್. ಮೈ ಶುಗರ್ ಸಕ್ಕರೆ ಕಂಪನಿಯ ಅಧ್ಯಕ್ಷ ಸಿ.ಡಿ. ಗಂಗಾಧರ್. ಜಿಲ್ಲಾಧಿಕಾರಿ ಡಾ ಕುಮಾರ. ರಾಜ್ಯ ಕೃಷಿ ಸಮಾಜದ ಅಧ್ಯಕ್ಷ ಮಂಜುನಾಥ್ ಗೌಡ. ರಾಜ್ಯ ರೈತ ಉತ್ಪಾದಕ ಸಂಸ್ಥೆಗಳು ಸಹಕಾರ ನಿಯಮಿತದ ಆಡಳಿತ ಮಂಡಳಿ ನಿರ್ದೇಶಕ ರಾಜೇಶ್. ಬೆಲ್ಲದ ನಾಡು ರೈತ ಉತ್ಪಾದಕ ಕಂಪನಿಗಳು ಒಕ್ಕೂಟದ ಅಧ್ಯಕ್ಷ ಕಾಸರವಾಡಿ ಮಹಾದೇವ್ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

# ಬದಲಾದ ಮನಸ್ಥಿತಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಲಕಿಯರ ಕಾಲೇಜಿಗೆ ಹೆಚ್ಚಿದ ಬೇಡಿಕೆ, ಸರ್ಕಾರದಿಂದ 2 ಶಿಕ್ಷಣ ಸಂಸ್ಥೆಗಳು ಮಂಜೂರು..!

**ಮಂಗಳೂರು:** ಹೆಣ್ಣು ಮಕ್ಕಳೆಂದರೆ ಹೊರೆ ಎಂಬ ಭಾವನೆ ಇದೀಗ ಮರೆಯಾಗುತ್ತಿದ್ದು, ಹೆಣ್ಣು ಮಕ್ಕಳ ಕುರಿತ ಪೋಷಕರ ಮನಸ್ಥಿತಿ ಬದಲಾಗುತ್ತಿದೆ. ಮುಖ್ಯವಾಗಿ ಅಲ್ಪಸಂಖ್ಯಾತ ಸಮುದಾಯದವರಲ್ಲಿ ಸಾಕಷ್ಟು ಬದಲಾವಣೆಗಳು ಕಂಡು ಬರುತ್ತಿದೆ. ಇದ–ಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಲಕಿಯರ ಕಾಲೇಜುಗಳಿಗೆ ಹೆಚ್ಚುತ್ತಿರುವ ಬೇಡಿಕೆಯೇ ಉದಾಹರಣೆಯಾಗಿದೆ.

ಈ ಬೇಡಿಗೆ ಸ್ಪಂದಿಸಿರುವ ರಾಜ್ಯ ಸರ್ಕಾರವು ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಪ್ರತಿನಿಧಿಸುತ್ತಿರುವ ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಎರಡು ಹೊಸ ಶಿಕ್ಷಣ ಸಂಸ್ಥೆಗಳನ್ನು ಮಂಜೂರು ಮಾಡಿದೆ.

ಅಲ್ಪಸಂಖ್ಯಾತರ ಇಲಾಖೆಯು 1ನೇ ತರಗತಿಯಿಂದ ಪದವಿ ಹಂತದವರೆಗೆ ಶಿಕ್ಷಣವನ್ನು ನೀಡುವ ಹೊಸ ಶೈಕ್ಷಣಿಕ ಸಂಕೀರ್ಣಕ್ಕೆ 17 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ.

ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಕೋಣಾಜೆ–ಫಜೀರಿನಲ್ಲಿ ಈ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಹೆಚ್ಚುವರಿಯಾಗಿ, ವಕ್ಫ್ ಇಲಾಖೆಯು ಉಳ್ಳಾಲದಲ್ಲಿ ಬಾಲಕಿಯರ ಪಿಯು ಕಾಲೇಜನ್ನೂ ಕೂಡ ಅಭಿವೃದ್ಧಿಪಡಿಸುತ್ತಿದೆ. ಎರಡೂ ಸಂಸ್ಥೆಗಳು ಕ್ರಮವಾಗಿ ಅಲ್ಪಸಂಖ್ಯಾತ ಮತ್ತು ಅಲ್ಪಸಂಖ್ಯಾತೇತರ

ಬಾಲಕರ ದಾಖಲಾತಿ ಸಂಖ್ಯೆ ಕಡಿಮೆ ಇದ್ದ ಕಾರಣ,



ದೇರಳಕಟ್ಟೆಯ ಕೋ–ಎಜುಕೇಷನ್ ಸರ್ಕಾರಿ ಕಾಲೇಜನ್ನು ಕಳೆದ ವರ್ಷವಷ್ಟೇ ಬಾಲಕಿಯರಿಗೆ ಮಾತ್ರ ಮೀಸಲಾದ ಸಂಸ್ಥೆಯಾಗಿ ಪರಿವರ್ತಿಸಲಾಗಿತ್ತು.

2022–23ರಲ್ಲಿ 91ರ ಪೈಕಿ 41 ಬಾಲಕರು ಮಾತ್ರ ದಾಖಲಾತಿ ಪಡೆದಿದ್ದರು. ಇದರ ಬೆನ್ನಲ್ಲೇ ಶಾಸಕ ಖಾದರ್ ನೇತೃತ್ವದ ಕಾಲೇಜು ಅಭಿವೃದ್ಧಿ ಸಮಿತಿಯ ಪ್ರಸ್ತಾವನೆ ನಂತರ ಕಾಲೇಜನ್ನು ಬಾಲಕಿಯರಿಗೆ ಮೀಸಲಾದ ಶಿಕ್ಷಣ ಸಂಸ್ಥೆಯಾಗಿ ಪರಿವರ್ತಿಸಲಾಯಿತು. ಇದಕ್ಕೆ ಸ್ಥಳೀಯರು ಕೂಡ ಬೆಂಬಲ ವ್ಯಕ್ತಪಡಿಸಿದ್ದಾರೆಂದು ತಿಳಿದುಬಂದಿದೆ. 'ಹಿಜಾಬ್' ವಿವಾದದ ನಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಲಕಿಯರಿಗೆ ಮೀಸಲಾದ ಕಾಲೇಜುಗಳಿಗೆ ಬೇಡಿಕೆ ಹೆಚ್ಚಾಗಿದೆ ಎಂದು ಅಧಿಕಾರಿಗಳು ಮತ್ತು ಶಿಕ್ಷಕರು ಹೇಳಿದ್ದಾರೆ.

ಮಂಗಳೂರಿನ ಸರ್ಕಾರಿ ಮಹಿಳಾ ಕಾಲೇಜು ಪ್ರಾಂಶುಪಾಲರು ಮಾತನಾಡಿ, ಸಾಮಾನ್ಯವಾಗಿ 10 ನೇ ತರಗತಿ ಮತ್ತು ಪಿಯುಸಿ ನಂತರ ಮುಸ್ಲಿಂ ಹುಡುಗಿಯರು ಶಾಲೆ ಬಿಡುವ ಪ್ರಮಾಣ ಹೆಚ್ಚಾಗುತ್ತದೆ. ಬಾಲಕಿಯರಿಗೆ ಮೀಸಲಾತ ಕಾಲೇಜು ಕೊರತೆ ಇದ್ದಾಗ ಈ ಸಂಖ್ಯೆ ಹೆಚ್ಚಾಗಿಯೇ ಇರುತ್ತದೆ. ಕೋ–ಎಜುಕೇಷನ್ ಕಾಲೇಜುಗಳಿಗೆ ಸೇರ್ಪಡೆಗೊಳಿಸಲು ಪೋಷಕರು ಹಿಂಜರಿಯುತ್ತಾರೆಂದು ಹೇಳಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಮುಸ್ಲಿಂ ಸಂಸ್ಥೆಗಳು ಹಲವಾರು ಬಾಲಕಿಯರ ಕಾಲೇಜುಗಳನ್ನು ಸ್ಥಾಪಿಸಿದ್ದು, ಇದರ ಜೊತೆಗೆ ಸರ್ಕಾರಿ ಬಾಲಕಿಯರ ಕಾಲೇಜುಗಳಲ್ಲಿಯೂ ಮುಸ್ಲಿಂ ಬಾಲಕಿಯರ ದಾಖಲಾತಿ ಪ್ರಮಾಣ (ಶೇ. 25–30) ಏರಿಕೆಯಾಗಿರುವುದು ಕಂಡು ಬಂದಿದೆ.

ಇದು ಕೋ–ಎಜುಕೇಷನ್ (ಸಹ ಶಿಕ್ಷಣ) ಸರ್ಕಾರಿ ಕಾಲೇಜುಗಳಲ್ಲಿರುವ ದಾಖಲಾತಿ ಪ್ರಮಾಣಕ್ಕಿಂತಲೂ ಹೆಚ್ಚಿದೆ. ಹೀಗಾಗಿ, ಸರ್ಕಾರ ದಕ್ಷಿಣ ಕನ್ನಡ ಜಿಲ್ಲೆಗೆ ಬಾಲಕಿಯರಿಗಾಗಿ ಪ್ರತ್ಯೇಕ ಶಿಕ್ಷಣ ಸಂಸ್ಥೆಗಳನ್ನು ಮಂಜೂರು ಮಾಡಿದೆ.

ದಕ್ಷಿಣ ಕನ್ನಡದಲ್ಲಿ, ವಿಶೇಷವಾಗಿ ಅಲ್ಪಸಂಖ್ಯಾತರ ಪ್ರಾಬಲ್ಯವುಳ್ಳ ಪ್ರದೇಶಗಳಲ್ಲಿ ವಿದ್ಯಾರ್ಥಿನಿಯರಿಗೆ ಮಾತ್ರ ಮೀಸಲಿರುವ ಕಾಲೇಜುಗಳ ಏರಿಕೆಯಾಗುತ್ತಿದ್ದು, ಈ ಬೆಳವಣಿಗೆಯು ಸಾಮಾಜಿಕ ಬದಲಾವಣೆ, ಸಮುದಾಯ–ಚಾಲಿತ ಆದ್ಯತೆಗಳು ಮತ್ತು ವಿಶೇಷವಾಗಿ ವಿದ್ಯಾರ್ಥಿನಿಯರು ಶಿಕ್ಷಣದಿಂದ ವಂಚಿತರಾಗದಂತೆ ಮಾಡಲು ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಪ್ರತಿಬಿಂಬಿಸುತ್ತಿದೆ.

ರಾಜ್ಯ ಸರ್ಕಾರ 2024–25 ರ ಬಜೆಟ್'ನಲ್ಲಿ ವಕ್ಫ್ ಭೂಮಿಯಲ್ಲಿ 15 ಮಹಿಳಾ ಕಾಲೇಜುಗಳನ್ನು ಸ್ಥಾಪಿಸುವುದಾಗಿ ಘೋಷಿಸಿತ್ತು. 2025–26ಕ್ಕೆ ಇನ್ನೂ 16 ಕಾಲೇಜುಗಳನ್ನು ಸ್ಥಾಪಿಸಲು ನಿರ್ಧರಿಸಿದೆ ಎಂದು ತಿಳಿದುಬಂದಿದೆ.

ಏತನ್ಮಧ್ಯೆ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶಿಕ್ಷಣ ಸಂಸ್ಥೆ ಸ್ಥಾಪಿಸುವ ಸರ್ಕಾರದ ನಿರ್ಧಾರವನ್ನು ಶಾಸಕ ಯು.ಟಿ.ಖಾದರ್ ಅವರು ಸಮರ್ಥಿಸಿಕೊಂಡಿದ್ದಾರೆ.

ಸಮುದಾಯದ ಅಗತ್ಯತೆಗಳು ಮತ್ತು ಶಿಕ್ಷಣದ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವ ಮಹತ್ವವನ್ನು ಶಾಸಕರು ಒತ್ತಿ ಹೇಳಿದ್ದಾರೆ.

ಯಾರಿಗೂ ಅವರ ಹೆಣ್ಣುಮಕ್ಕಳನ್ನು ಸಹ–ಶಿಕ್ಷಣ ಕಾಲೇಜುಗಳಿಗೆ ಕಳುಹಿಸುವಂತೆ ಒತ್ತಾಯಿಸಲು ಸಾಧ್ಯವಿಲ್ಲ. ಬೇಡಿಕೆಗಳಿಗೆ ಅನುಗುಣವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಹೇಳಿದ್ದಾರೆ.

# ನಲವತ್ತು ಸಾವಿರ ಮೌಲ್ಯದ 400 ಮೀಟರ್ ಪೈಪ್ ಕಳವು : ಆರೋಪಿಗಳ ಬಂಧನ



**ಕಡೂರು:** ತಾಲ್ಲೂಕಿನ ಸಿಂಗಟಗೆರೆ ಸಮೀಪದ 9ನೇ ಮೈಲಿಕಲ್ಲು ಸಮೀಪದಲ್ಲಿ ಪೈಪ್‌ಲೈನ್ ಕಾಮಗಾರಿ ಜಾಗದಲ್ಲಿದ್ದ 40ಸಾವಿರ ಮೌಲ್ಯದ 400 ಮೀಟರ್ ಪೈಪ್ ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಸಿಂಗಟಗೆರೆ ಪೊಲೀಸರು ಬಂಧಿಸಿ, ಪೈಪ್‌ಅನ್ನು ವಶಪಡಿಸಿಕೊಂಡಿದ್ದಾರೆ.

ತುಮಕೂರು ನಗರದ ಬೋವಿ ಕಾಲೊನಿಯ ವೆಂಕಟೇಶ್, ಗಿರೀಶ್ ಮತ್ತು ಮಂಜುನಾಥ್ ಬಂಧಿತ ಆರೋಪಿಗಳು. ಜುಲೈ 14ರಂದು ಪೈಪ್ ಕಳವು ಮಾಡಿದ್ದು, ಖಚಿತ ಮಾಹಿತಿ ಮೇರೆಗೆ ಆರೋಪಿಗಳನ್ನು ಸಿಂಗಟಗೆರೆ ಪೊಲೀಸರು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

# ದೇಶಭಕ್ತಿಯ ಪ್ರತೀಕ ಮಹಾರಾಣಾ ಪ್ರತಾಪ್ ಸಿಂಗ್



**ಚಿಕ್ಕಮಗಳೂರು:** ಪರಾಕ್ರಮ–ಆದರ್ಶ ದೇಶಭಕ್ತಿಯ ಪ್ರತೀಕ ಮಹಾರಾಣಾ ಪ್ರತಾಪಸಿಂಗ್ ಎಂದು ಕರ್ನಾಟಕ ರಜಪೂತ ಮಹಾಸಭಾ ನಿರ್ದೇಶಕ ಬೆಂಗಳೂರಿನ ವೀರೇಂದ್ರಸಿಂಗ್ ನುಡಿದರು.

ಜಿಲ್ಲಾ ರಜಪೂತ ಮಂಡಳಿ ನಗರದ ಲಯನ್ಸ್ ಭವನದಲ್ಲಿ ಆಯೋಜಿಸಿದ್ದ ರಾಷ್ಟ್ರವೀರ ಮಹಾರಾಣಾ ಪ್ರತಾಪಸಿಂಗ್‌ಜೀ 486ನೆಯ ಜಯಂತಿ ಹಾಗೂ ಸಂಘದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಾಯುವ್ಯ ಭಾರತದ ರಾಜ್ಯವಾದ ಮೇವಾರವನ್ನು ಆಳುತ್ತಿದ್ದ ಹಿಂದೂ ದೊರೆಯಾದ ಮಹಾರಾಣಾ ಪ್ರತಾಪ್ ಸೂರ್ಯವಂಶದ ಕುಡಿ. ಉದಯಸಿಂಗ್ ಮತ್ತು ರಾಣಿ ಜೀವಂತ ಕನ್ವರ್ ಪುತ್ರನಾಗಿ 1540ರ ಮೇ.9 ರಂದು ಜನಿಸಿದವರು. ಭಾರತದ ಇತಿಹಾಸದಲ್ಲಿ ಧೈರ್ಯಶಾಲಿಯೆಂದು ಹೆಸರಾದವರು. 7 ಅಡಿ ಎತ್ತರ ಮತ್ತು 81 ಕೆ.ಜಿ ತೂಕವುಳ್ಳ ಅಜಾನುಬಾಹು ಸದೃಢ ರಾಜ ಮೊಗಲ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ಧೀಮಂತ ಎಂದು ಬಣ್ಣಿಸಿದರು.

ದಟ್ಟವಾದ ಕಾಡು, ಬೆಟ್ಟ ಗುಡ್ಡಗಳು, ವನ್ಯಜೀವಿ, ಆರು ನದಿಗಳನ್ನೊಳಗೊಂಡ ಮೇವಾರ ಪ್ರದೇಶದಿಂದ ದಕ್ಷಿಣಕ್ಕೆ ವಲಸೆ ಬಂದಿರುವ ರಜಪೂತರಿಗೆ ಮಹಾರಾಣಾ ಆದರ್ಶ ಪುರುಷ. ಅತಿ ಕಡಿಮೆ ಸಂಖ್ಯೆಯಲ್ಲಿರುವ ರಜಪೂತರು ಸ್ವಾಭಿಮಾನಿಗಳು. ಅತಿ ಹಿಂದುಳಿದ ಸೌಲಭ್ಯವಂಚಿತ ಸಮುದಾಯ ಇದಾಗಿದ್ದು, ದೀರ್ಘಕಾಲ ಆಡಳಿತಗಾರರ ನಿರ್ಲಕ್ಷ್ಯಕ್ಕೆ ತುತ್ತಾಗಿದೆ ಎಂದು ವಿಷಾಧಿಸಿದ ವೀರೇಂದ್ರಸಿಂಗ್, ಹಿಂದುಳಿದ ವರ್ಗಗಳ ವ್ಯಾಪ್ತಿಗೆ ಸೇರಲ್ಪಟ್ಟಿರುವ ರಜಪೂತರಿಗೆ ಸೌಕರ್ಯಸೌಲಭ್ಯಗಳು ಗಗನಕುಸುಮವಾಗಿದೆ ಎಂದರು.

ಬಿ.ಸಿ.ಎಂ. ಅಭಿವೃದ್ಧಿಗೆ ಸರ್ಕಾರ ಕೋಟ್ಯಾಂತರ ರೂ. ಪ್ರತಿ ವರ್ಷ ವೆಚ್ಚ ಮಾಡುತ್ತಿದ್ದರೂ ಅದೆಲ್ಲವೂ ಕೇವಲ ಐದು ಜಾತಿಗಳಿಗೆ ಮಾತ್ರ ಸಿಗುತ್ತಿದೆ. ಸಾಲಸೌಲಭ್ಯ, ಶಿಕ್ಷಣಕ್ಕೆ ನೆರವು, ಸಹಾಯಧನ, ಕೌಶಲ್ಯ ಅಭಿವೃದ್ಧಿ ನೆರವು ಸೇರಿದಂತೆ ಬಿಸಿಎಂ ಅಭಿವೃದ್ಧಿ ಮಂಡಳಿಯ ಯೋಜನೆಗಳನ್ನು ಬಳಕೆ ಮಾಡಿಕೊಳ್ಳಬೇಕು ಎಂದ ವೀರೇಂದ್ರಸಿಂಗ್, ನಾವು ಅಂಕಿಅಂಶಗಳೊಂದಿಗೆ ಸಂಘಟಿತರಾಗಿ ನೆರವು ಕೋರದಿದ್ದರೆ ಯಾರೂ ನಮ್ಮ ಬಳಿಗೆ ಬಂದು ಸಹಾಯ ಮಾಡುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕೆಂದರು.

ಜಿ.ಪಂ. ಮಾಜಿ ಅಧ್ಯಕ್ಷೆ ರೇಖಾಹುಲಿಯಪ್ಪಗೌಡ ಮುಖ್ಯ ಅತಿಥಿಗಳಾಗಿ ಮಾತನಾಡಿ, ಭಾರತವನ್ನು ಅನೇಕ ರಾಜವಂಶಸ್ಥರು ಆಳಿದ್ದಾರೆ. ಛಲ, ಪರಾಕ್ರಮ, ವೀರತ್ವದಲ್ಲಿ ರಜಪೂತರದ್ದು ಸಿಂಹಪಾಲು. ಸುಮಾರು 400 ವರ್ಷಗಳ ಕಾಲ ಉತ್ತರದಲ್ಲಿ ಆಳ್ವಿಕೆಮಾಡಿ ವಿದೇಶಿಯರ ದಾಳಿಯನ್ನು ತಡೆದ ಹಿರಿಮೆ ಇವರದು. ಸಾಹಸ, ಉತ್ತಮ ಆಡಳಿತ, ನಂಬಿದ ಪ್ರಜೆಗಳ ರಕ್ಷಣೆಗೆ ಮಹಾರಾಣಾ ಮಾದರಿ. ಅವರ ಜೀನ್ಸ್ ರಜಪೂತರಲ್ಲಿ ಮುಂದುವರೆದಿದೆ. ಹಿರಿಮೆ–ಗರಿಮೆ ಅರಿತು ಬದುಕು ಕಟ್ಟಿಕೊಳ್ಳಲು ಇಂತಹ ಜಯಂತಿ ಕಾರ್ಯಕ್ರಮಗಳು ಯುವಪೀಳಿಗೆಗೆ ಆದರ್ಶ ಎಂದರು.

ಹಿಂದೂ ಜಾಗರಣ ವೇದಿಕೆ ರಾಜ್ಯ ಸಮಿತಿ ಸದಸ್ಯ ಹೊಸಕೋಟೆಯ ನಂದರಾಮಸಿಂಗ್ ಮಾತನಾಡಿ, ಶೌರ್ಯದಿಂದ ಮೊಗಲರ ದಾಳಿಯನ್ನು ಹಿಮ್ಮೆಟ್ಟಿಸಿದ ಮಹಾರಾಣಾ ನಮಗೆಲ್ಲ ಪ್ರೇರಣಾದಾಯಕರು. 27 ವರ್ಷದ ತರುಣ 1557 ರಿಂದ 30 ವರ್ಷ ಸತತ ಯುದ್ಧ ಮಾಡಿದ ವೀರ. ಹಳದಿಘಾಟ್ ಯುದ್ಧದಲ್ಲಿ ಮೊಘಲರ ಲಕ್ಷ ಸೈನಿಕರ ಸೇನೆಯನ್ನು ಕೇವಲ 22,000 ಸೈನಿಕರೊಂದಿಗೆ ಎದುರಿಸಿದ ಧೀಮಂತ. 1598ರಲ್ಲಿ ಪ್ರತಾಪ್ ಪ್ರಾಣತ್ಯಾಗ ಮಾಡಿದಾಗ ಶತ್ರುರಾಜ ಅಕ್ಬರ್ ಕಣ್ಣೀರು ಮಿಡಿದ ಎಂದ ನಂದರಾಮ, ಭಾರತದ ಇತಿಹಾಸದಲ್ಲಿ ಮಹಾರಾಣಾರ ಪರಾಕ್ರಮದ ಉಲ್ಲೇಖ ಕಡಿಮೆ. ಸ್ವಾತಂತ್ರ್ಯದ ನಂತರ ದೇಶವನ್ನು ಆಳಿದ ಸರ್ಕಾರದಲ್ಲಿ 20 ವರ್ಷಕ್ಕಿಂತ ಹೆಚ್ಚು ಕಾಲ ಶಿಕ್ಷಣ ಸಚಿವರಾಗಿದ್ದವರು ನಮ್ಮ ಪರಂಪರೆಯ ಇತಿಹಾಸ ಚರಿತ್ರೆಯ ಬಗ್ಗೆ ಕಾಳಜಿ–ಗೌರವ ಇಲ್ಲದ ಮುಸಲ್ಮಾನ ವ್ಯಕ್ತಿಗಳೆಂಬುದು ವಿಷಾಧನೀಯ ಎಂದರು.

ಜಿಲ್ಲಾ ರಜಪೂತ ಮಂಡಳಿ ಅಧ್ಯಕ್ಷೆ ಹೇಮಾವತಿ ರಾಜುಸಿಂಗ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, 150ಕ್ಕಿಂತ ಕಡಿಮೆ ಕುಟುಂಬಗಳಿರುವ ರಜಪೂತರು, ಮೂರ್‍ನಾಲ್ಕು ದಶಕಗಳಿಂದ ಸಂಘಟಿತರಾಗಿ ಚಿಕ್ಕಪುಟ್ಟ ಸಭೆ ಸಮಾರಂಭಗಳನ್ನು ನಡೆಸಲಾಗುತ್ತಿದೆ. ಸಂಘಕ್ಕೆ ಸ್ವಂತ ನಿವೇಶನ–ಕಟ್ಟಡ ಅಗತ್ಯವಿದ್ದು, ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ವೀರಯೋಧ ಮಳಲೂರಿನ ಸುಬೇದಾರ್ ಮಂಜುನಾಥಸಿಂಗ್‌ರನ್ನು ಇದೇ ಸಂದರ್ಭದಲ್ಲಿ ವಿಶೇಷವಾಗಿ ಸನ್ಮಾನಿಸಲಾಯಿತು. 26 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಕಾಶ್ಮೀರದಲ್ಲಿ ವರ್ಗಾವಣೆ ಆಗಿದೆ. ಮಿಸೈಲ್ ಆಪರೇಟರ್ ಆಗಿದ್ದು, ಈಗಿನ ಆಪರೇಷನ್ ಸಿಂಧೂರ ಜೊತೆಗೆ ಹಿಂದಿನ ಕಾರ್ಗಿಲ್ ಯುದ್ಧ, ವಿಜಯ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡು ಅದೃಷ್ಟವಂತ ತಾವೆಂದ ಮಂಜುನಾಥಸಿಂಗ್, ವಿಶ್ವ3ನೆಯ ಮಹಾಯುದ್ಧದತ್ತ ಮುಖಮಾಡಿದೆ ಎಂದರು.

ಜಿಲ್ಲಾ ವಿಜ್ಞಾನ ಕೇಂದ್ರದ ಅಧ್ಯಕ್ಷ ಸತ್ಯನಾರಾಯಣ ಪರಿಸರ ಸಂರಕ್ಷಣೆ ಕುರಿತಂತೆ ಉಪನ್ಯಾಸ ನೀಡಿದರು. ತಿಪಟೂರಿನ ನಗರಸಭಾ ಸದಸ್ಯ ಲೋಕನಾಥಸಿಂಗ್ ಮಾತನಾಡಿದರು. ಶಾಲಾ–ಕಾಲೇಜು ಮಕ್ಕಳಿಗೆ ಕಾಲೂಸಿಂಗ್ ಪುಸ್ತಕ, ಆಟೋಟ ಸ್ಪರ್ಧಾ ವಿಜೇತರಿಗೆ ಚಂದ್ರಕಲಾ ಹರಿಸಿಂಗ್ ಬಹುಮಾನ ವಿತರಿಸಿದರು.

# ದಲಿತರ ಸಮಸ್ಯೆ ಬಗೆಹರಿಸಲು ಸಂಘಟಿತ ಹೋರಾಟ ಅಗತ್ಯ



**ತರೀಕೆರೆ:** ದಲಿತರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ಮಾಡೋಣ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಜಿಲ್ಲಾ ಸಂಚಾಲಕ ಎಲ್.ಎಸ್. ಶ್ರೀಕಾಂತ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದರು.

ಸಂಘಟನೆಯ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಅವರು ರಾಜ್ಯಾದ್ಯಂತ ಪ್ರವಾಸ ಮಾಡಿ ಸಂಘಟನೆ ಬಲಗೊಳಿಸಲು ಶ್ರಮಿಸುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಮಹಿಳಾ ಒಕ್ಕೂಟ, ವಿದ್ಯಾರ್ಥಿ ಒಕ್ಕೂಟ ಸ್ಥಾಪಿಸಬೇಕು. ಜಿಲ್ಲೆಯಲ್ಲಿ ಪ್ರೊ. ಬಿ. ಕೃಷ್ಣಪ್ಪ ಅವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಎಲ್ಲರೂ ಶ್ರಮಿಸಬೇಕು ಎಂದು ಹೇಳಿದರು.

ಜಿಲ್ಲಾ ಸಂಘಟನಾ ಸಂಚಾಲಕ ಎಚ್.ವಿ. ಬಾಲರಾಜ್ ಮಾತನಾಡಿ, ಪ್ರೊ. ಬಿ. ಕೃಷ್ಣಪ್ಪ ಅವರು ಸ್ಥಾಪಿಸಿದ ಸಂಘಟನೆ ದಲಿತರ ಮೂಲ ಸಂಘಟನೆ. ಅದನ್ನು ಗಟ್ಟಿಗೊಳಿಸೋಣ ಎಂದು ಸಲಹೆ ನೀಡಿದರು. ಜಿಲ್ಲಾ ಸಂಘಟನಾ ಸಂಚಾಲಕ ರಾಮು ಮಾತನಾಡಿ, ಸಂಘಟನೆಯಿಂದ ಮಾತ್ರ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯ ಎಂದರು.

ಮಹಿಳಾ ಘಟಕದ ಜಿಲ್ಲಾ ಸಂಚಾಲಕಿ ಪವಿತ್ರ ಮಾತನಾಡಿ, ದಲಿತರ ಸಮಸ್ಯೆಗಳನ್ನು ಬಗೆಹರಿಸಲು ಮುಖಂಡರು ಹೋರಾಟ ನಡೆಸುತ್ತಿದ್ದಾರೆ. ಆದ್ದರಿಂದ ಸಂಘಟನೆಯ ಬಲ ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ತಾಲೂಕು ಸಂಚಾಲಕ ವೈ.ಎಸ್. ಮಂಜಪ್ಪ, ಮುಖಂಡರಾದ ಲಕ್ಷ್ಮಣ್, ಜಿ.ಟಿ. ರಮೇಶ್, ಡಿ.ಎನ್. ಸುನೀಲ್, ವಿಮಲಾ ಮಾತನಾಡಿದರು. ಕುಮಾರಣ್ಣ, ಕೇಶವ, ಹನುಮಂತಪ್ಪ, ಶಿವಣ್ಣ, ಸುನೀಲ್ ಹಾಗೂ ಇತರರಿದ್ದರು.

# ಶ್ರೀ ಮಳಲಿ ಗಿಡ್ಡಮ್ಮ ಭಕ್ತಿಗೀತೆ ಲೋಕಾರ್ಪಣೆ



**ಚಿಕ್ಕಮಗಳೂರು:** ನಮ್ಮ ಮುಂಜಾನೆಯು ಭಕ್ತಿಗೀತೆಗಳನ್ನು ಕೇಳುವುದರ ಮೂಲಕ ಆರಂಭಗೊಂಡರೆ ದಿನವಿಡೀ ನೆಮ್ಮದಿ ಇರುತ್ತದೆ. ಭಕ್ತಿಗೀತೆಗಳು ನಮ್ಮ ಆಧ್ಯಾತ್ಮಿಕ, ಸಾಂಸ್ಕೃತಿಕ ಸಾತ್ವಿಕತೆಗೆ ಪ್ರೇರಣೆ ನೀಡುತ್ತದೆ ಎಂದು ಕೆಂಪನಹಳ್ಳಿಯ ಶ್ರೀಮಾನ್ ಕೇಬಲ್ ನೆಟ್‌ವರ್ಕ್‌ನ ಶ್ರೀನಿವಾಸ್ ಯಾದವ್ ತಿಳಿಸಿದರು.

ನಗರದ ಕೆಂಪನಹಳ್ಳಿಯ ಕಲ್ಕಟ್ಟೆ ಪುಸ್ತಕದ ಮನೆಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ 'ದೋಣಿಖಣ ಶ್ರೀ ಮಳಲಿ ಗಿಡ್ಡಮ್ಮ' ಭಕ್ತಿಗೀತೆ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಕಲ್ಕಟ್ಟೆ ಗಾನದೀವಿಗೆ ಸರಣಿಯು ಚಿಕ್ಕಮಗಳೂರಿನಲ್ಲಿ ನಿಜಕ್ಕೂ ಸಾಂಸ್ಕೃತಿಕ ಇತಿಹಾಸ ಬರೆಯುತ್ತಿದೆ. ಈವರೆಗೆ ಮೂವತ್ತೈದು ದೇವಸ್ಥಾನಗಳ ಬಗ್ಗೆ ಗೀತೆಗಳು ಹೊರಬಂದು ನಮ್ಮ ಧಾರ್ಮಿಕ ಸಂಸ್ಕತಿಯಲ್ಲಿ ಹೆಮ್ಮೆಯ ಸ್ಥಾನ ಪಡೆದಿವೆ. ನಾಗರಾಜರಾವ್ ಕಲ್ಕಟ್ಟೆಯವರು ಈ ಭಕ್ತಿಗೀತೆಗಳಿಗೆ ಉತ್ತಮ ಸಾಹಿತ್ಯ ಮತ್ತು ರಾಗ ಸಂಯೋಜನೆ ನೀಡಿದ್ದು, ಕೆ.ಎನ್. ನಾಗಭೂಷಣ್ ಅವರ ಹಿನ್ನೆಲೆ ಸಂಗೀತ ಹಾಡುಗಳಿಗೆ ಹೆಚ್ಚು ಹೆಚ್ಚು ಮಾಧುರ್ಯತೆ ತುಂಬುತ್ತಿದೆ. ಸಾಮಾಜಿಕ ಸೇವೆಯನ್ನು ನಾವು ಈ ರೀತಿಯಲ್ಲೂ ಮಾಡಬಹುದು ಎಂದು ಈ ಸರಣಿ ತೋರಿಸಿಕೊಟ್ಟಿದೆ ಎಂದು ಅವರು ತಿಳಿಸಿದರು.

ನಗರದ ವ್ಯವಹಾರೋದ್ಯಮಿ ಸೀತಾರಾಂ ಶೆಟ್ಟಿ ಮಾತನಾಡಿ, ಹೊರ ಊರಿನಿಂದ ಚಿಕ್ಕಮಗಳೂರಿಗೆ ಬಂದು ನೆಲೆ ಕಾಣುತ್ತಿರುವ ನಮ್ಮಂಥವರಿಗೆ ಈ ಕಲ್ಕಟ್ಟೆ ಗಾನದೀವಿಗೆ ಸರಣಿಯು ಧಾರ್ಮಿಕದಾರಿ ದೀಪವಾಗಿದೆ. ಎಲ್ಲಿ ಧಾರ್ಮಿಕತೆ ಪರಿಪೂರ್ಣವಾಗುತ್ತದೋ ಅಲ್ಲೇ ನಿಜವಾದ ವೈಚಾರಿಕತೆ ಸೃಷ್ಟಿಯಾಗುತ್ತದೆ ಎಂದು ತಿಳಿಸಿದರು.

ಸಕಲೇಶಪುರ ಸ್ಪೈಸ್ ಬೋರ್ಡ್‌ನ ನಿವೃತ್ತ ಅಧಿಕಾರಿ ರೊನಾಲ್ಡ್ ಮಾತನಾಡಿ, ರೇಖಾನಾಗರಾಜರಾವ್ ಅವರ ನಿರ್ಮಾಣದಲ್ಲಿ ಲೋಕಾರ್ಪಣೆಗೊಳ್ಳುತ್ತಿರುವ ಈ ಸರಣಿಯಲ್ಲಿ ನಾವು ನಗರದ ಹಲವಾರು ದೇವಸ್ಥಾನಗಳಿಗೆ ಮೊದಲ ಬಾರಿಗೆ ಭೇಟಿ ನೀಡುತ್ತಿರುವುದರಿಂದ ಹೊಸ ಅನುಭವ ಕಾಣುತ್ತಿದ್ದೇವೆ. ಈ ಸರಣಿ ಆರಂಭಗೊಳ್ಳದಿದ್ದರೆ ನಾವು ನಮ್ಮೂರಿನ ಬಗ್ಗೆಯೇ ಈ ವಿಚಾರದಲ್ಲಿ ಅಜ್ಞಾನಿಗಳಾಗಿರುತ್ತಿದ್ದೆವು ಎಂದರು.

ನಿರ್ಮಾಪಕಿ ರೇಖಾನಾಗರಾಜರಾವ್ ಮಾತನಾಡಿ, ಹೆಚ್.ಎನ್.ಮಲ್ಲೇಶರಾವ್ ನೆನಪಿನಲ್ಲಿ ಹೊರತರುತ್ತಿರುವ ಈ ಸರಣಿಗೆ ಧಾರ್ಮಿಕ ವಲಯದಲ್ಲಿ ನೀಡುತ್ತಿರುವ ಪ್ರೋತ್ಸಾಹ ನೋಡಿ ನಿಜಕ್ಕೂ ಸಮಾಧಾನವಾಗುತ್ತಿದೆ ಎಂದರು.

ಇದೇ ವೇಳೆ ಶ್ರೀಮಾನ್ ನೆಟ್‌ವರ್ಕ್‌ನ ಶ್ರೀನಿವಾಸ್‌ಯಾದವ್ ಅವರನ್ನು ಸನ್ಮಾನಿಸಲಾಯಿತು. ತೊಗರಿಹಂಕಲ್‌ನ ಶಿಕ್ಷಕಿ ಸುನೀತಾ, ಶಮಂತ್‌ಗೌಡ ಮೊದಲಾದವರು ಉಪಸ್ಥಿತರಿದ್ದರು. ನಾಗರಾಜರಾವ್‌ಕಲ್ಕಟ್ಟೆ ಸ್ವಾಗತಿಸಿ, ನಿರೂಪಿಸಿದರು. ತಾಲ್ಲೂಕು ಲೇಖಕಿಯರ ಸಂಘದ ಅಧ್ಯಕ್ಷೆ ವೈಷ್ಣವಿ ಎನ್. ರಾವ್ ವಂದಿಸಿದರು.

# ಹಿಂದುತ್ವದ ಬದುಕು ಪ್ರಾಚೀನ ಸಂಸ್ಕೃತಿ, ನಾಗರೀಕತೆಯ ಭಾಗ




**ಚಿಕ್ಕಮಗಳೂರು:** ಪ್ರಪಂಚದಲ್ಲಿ ಹಿಂದುತ್ವವು ಬದುಕಿನ ಒಂದು ಪದ್ಧತಿಯ ರೂಪದಲ್ಲಿ ಪ್ರಾಚೀನ ಸಂಸ್ಕೃತಿ, ಧರ್ಮ ಮತ್ತು ನಾಗರೀಕತೆಯ ಭಾಗವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಾ ಸಂಘದ ದಕ್ಷಿಣ ಕರ್ನಾಟಕ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಹೇಳಿದರು.

ನಗರದ ಮಧುವನ ಬಡಾವಣೆಯ ಆರ್‌ಎಸ್‌ಎಸ್ ಸಮರ್ಪಣಾ ಕಚೇರಿಯಲ್ಲಿ ಸಂಜೆ ಹಮ್ಮಿಕೊಂಡಿದ್ದ 'ಹಿಂದುತ್ವ ಪುಸ್ತಕ ಬಿಡುಗಡೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹಿಂದೂ ಸಂಸ್ಕೃತಿ ಧರ್ಮವನ್ನು ಆಚರಿಸುವ ಪರಂಪರೆ ನಮ್ಮಲ್ಲಿ ರೂಪುಗೊಂಡಿತು. ಸಣ್ಣ ಸಣ್ಣ ಆಚಾರ, ಸಂಸ್ಕಾರಗಳನ್ನು ನೀಡಿದೆ. ಹಿಂದುತನದಲ್ಲಿ ಪರಸ್ತ್ರೀಯರನ್ನು ತಾಯಿಯಂತೆ, ಇತರರ ವಸ್ತುವನ್ನು ಮಣ್ಣಿನಂತೆ, ಎಲ್ಲಾ ಜೀವಸಂಕುಲವನ್ನು ತನ್ನಂತೆಯೇ ನೋಡಬೇಕು. ಈ ಆಚರಣೆಗಳಿಂದ ಜೀವನವನ್ನು ವಿಕಾಸ ಮಾಡಿಕೊಳ್ಳಬೇಕು ಎಂದರು.

ಹಿಂದುತ್ವದ ಪೂಜೆ, ಪುನಸ್ಕಾರಗಳು, ಪದ್ಧತಿಗಳು, ಆಹಾರ ಮತ್ತು ರೀವಾಜುಗಳನ್ನು ಬಂಧಿಸಿಡುವ ಕೆಲವು ಪ್ರಯತ್ನ ನಡೆದಿವೆ. ಹಿಂದುತ್ವವು ಇಷ್ಟಕ್ಕೆ ಸೀಮಿತವಾಗಿಲ್ಲ. ರಿಲೀಜನ್ ಎಂದ–ರೆ ಧರ್ಮವಲ್ಲ. ಧರ್ಮ ಅತ್ಯಂತ ವಿಶಾಲ ಅರ್ಥವುಳ್ಳದ್ದು. ನಮ್ಮ ದೇಶದಲ್ಲಿ ಹಿಂದೂ ರಿಲೀಜನ್ ಎಂಬ ಸಂಗತಿಯಿಲ್ಲ, ಅನೇಕ ರಿಲೀಜನ್‌ಗಳಿವೆ, ಅವೆಲ್ಲವೂ ಹಿಂದು ಸ್ವಭಾದ ರೀಲೀಜನ್‌ಗಳೇ ಎಂದು ತಿಳಿಸಿದರು.

ಹಿಂದುತ್ವ ಒಂದು ಇಸಂ ಅಲ್ಲ, ಹಿಂದುತ್ವ ಎಂಬ ಪದವನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದರೆ ಅದು ಹಿಂದುತನ ಎಂದಾಗುತ್ತದೆ. ಇಸಂ ರೂಢಿಗತ ಅರ್ಥವು ಸೀಮಿತ ಪರಿಕಲ್ಪನೆಯನ್ನು ಹೊಂದಿದೆ. ಆ ಕಲ್ಪನೆಯೊಂದಿಗೆ ನೀವು ನಿಮ್ಮನ್ನು ಹೊಂದಿಸಿಕೊಳ್ಳಬೇಕು. ಹಿಂದುತ್ವದ ಜೊತೆ ಇರುವವರು, ತಮ್ಮ ಸಾಮರ್ಥ್ಯಕ್ಕೆ ಹಿಂದುತ್ವವನ್ನು ಒಪ್ಪುವವರು ವಿಕಾಸಗೊಳಿಸಲಿದೆ ಎಂದರು.

ಹಿಂದುತ್ವ ಎನ್ನುವುದನ್ನು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಬಹಳ ಉತ್ತಮ ಶಬ್ದಗಳಲ್ಲಿ ತಿಳಿಸಿದ್ದಾರೆ. ಏಕರೂಪದ ಸ್ಥಾಯಿಯಾದ ಬದಲಾಯಿಸಲಾಗದ ಹಿಂದು ಧರ್ಮ ಎಂಬುದು ಯಾವುದೂ ಇಲ್ಲ. ಅವರ ಕಾಲದಲ್ಲಿ ಹಿಂದೂಯಿಸಂ ಎಂಬ ಪದವನ್ನೇ ಬಳಸಲಾಗುತ್ತಿತ್ತು. ಆದ–ರೆ, ವಾಸ್ತವದಲ್ಲಿ ಅವರು ಹೇಳ ಲು ಪ್ರಯತ್ನಿಸಿರುವುದು ಹಿಂದುತನ ಎನ್ನುವುದು ಹೊರತು, ಇಸಂ ಅಲ್ಲ ಎಂದು ಹೇಳಿದರು. ಪ್ರಸ್ತುತ ವಿಶ್ವದಲ್ಲಿ ಸಾಮಾಜಿಕ, ಆರ್ಥಿಕ, ಮಾನಸಿಕ ಸಮಸ್ಯೆಗಳ ರೂಪದಲ್ಲಿ ಕಾಡುತ್ತಿರುವ ಅನೇಕ ಅಸ್ತಿತ್ವದ ಬಿಕ್ಕಟ್ಟುಗಳಿವೆ ಪರಿಹಾರವನ್ನು ನೀಡಲು ಸಾಧ್ಯವಿರುವುದು ಹಿಂದುತ್ವಕ್ಕೆ ಮಾತ್ರ. ವರ್ತಮಾನ ಸಂದರ್ಭದಲ್ಲಿ ಹಿಂದುತ್ವದ ದರ್ಶನ, ಸಿದ್ಧಾಂತ, ಪರಂಪರೆ, ಆಚಾರವಿಚಾರಗಳನ್ನು ಅರ್ಥಮಾಡಿಕೊಂಡು ಪದಬಳಕೆಯೊಂದಿಗೆ ಪ್ರಸ್ತುತಪಡಿಸುವುದು ಎಲ್ಲರಿಗೂ ಸವಾಲಿನ ಕೆಲಸವಾಗಿದೆ ಎಂದರು.

ಹಿಂದುತ್ವದ ಮೇಲೆ ಕಾಲ್ಪನಿಕ ಆರೋಪಗಳನ್ನು ಹೊರಿಸುವ ಬದಲು ನಿಜವಾದ ಹಿಂದುತ್ವವನ್ನು ಪಾಲಿಸಬೇಕು. ಹಿಂದುತ್ವದ ಹೆಸರು ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ. ನಡವಳಿಕೆಯನ್ನು ಪುರಸ್ಕರಿಸಬೇಕು. ಜಗತ್ತಿಗೆ ಧರ್ಮ, ಸಮತೋಲನ ಮತ್ತು ಧೈರ್ಯವನ್ನು ನೀಡುವ, ಎಲ್ಲಾ ವಿರೋಧಗಳನ್ನು ಸರಿದೂಗಿಸಿಕೊಂಡು ಪ್ರಗತಿಗೆ ಸಹಾಯ ಮಾಡುವ ಹೊಸ ಜಗತ್ತನ್ನು ರಚಿಸಬೇಕಾದರೆ ಹಿಂದುತ್ವ ಧರ್ಮದಲ್ಲಿ ಸಾಗಬೇಕಿದೆ ಎಂದರು.

ಹಿಂದುತ್ವ ಯಾವುದೇ ಒಂದು ಜಾತಿಯ ಪ್ರಾಬಲ್ಯದ ಬಗ್ಗೆ ಮಾತನಾಡುವುದಿಲ್ಲ. ನಿಜವಾದ ಹಿಂದುತ್ವವವನ್ನು ಅನುಸರಿಸುವ ಮೂಲಕ ವಿಕೃತಿ ಭಾವನೆಗಳನ್ನು ಸಂಪೂರ್ಣ ತೊಲಗಿಸಬೇಕು. ನಮ್ಮ ಮುಂದೆ ಸಂತರ ನಡವಳಿಕೆ ಹಾಗೂ ಜೀವನದ ಉದಾಹರಣೆಗಳಿವೆ. ಸಮಾಜದಲ್ಲಿ ಈ ನಡವಳಿಕೆಯ ಪರಿವರ್ತನೆ ಬದಲಾವಣೆಯನ್ನು ತರುವುದು ಅವಶ್ಯಕವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ವಿಭಾಗ ಸಂಘ ಚಾಲಕ ಮಲ್ಲಿಕಾರ್ಜುನ ಉಪಸ್ಥಿತರಿದ್ದರು. ನಗರ ಪ್ರಚಾರ ಪ್ರಮುಖ್ ವಿಕ್ರಮ್ ನಿರೂಪಿಸಿದರು. ಮಂಥನ ಸದಸ್ಯರಾದ ಪ್ರವೀಣ್ ಸ್ವಾಗತಿಸಿದರು. ಶೃತಿ ವಂದಿಸಿದರು.

# ಸಾಂಸ್ಕೃತಿಕ ರಾಜಕಾರಣದ ವಜ್ರಮುಷ್ಠಿಯಿಂದ ಕಲೆ ಹೊರಬರಲಿ : ಡಾ. ಪುಷ್ಪಾಭಾರತಿ

**ಚಿಕ್ಕಮಗಳೂರು:** ಕಲಾಕ್ಷೇತ್ರದಲ್ಲಿ ಸಾಹಿತ್ಯಕ್ಷೇತ್ರಕ್ಕಿಂತ ಮಿಗಿಲಾಗಿರುವ ಸಾಂಸ್ಕೃತಿಕ ರಾಜಕಾರಣವನ್ನು ಮೀರುವ ಪ್ರಯತ್ನದಲ್ಲಿ ಪ್ರತಿಭೆಗೆ ತಕ್ಕ ಮನ್ನಣೆ ಸಿಗಬೇಕು. ಕಲಾಕ್ಷೇತ್ರ ಸಾಂಸ್ಕೃತಿಕ ರಾಜಕಾರಣದ ವಜ್ರಮುಷ್ಠಿಯಿಂದ ಹೊರಬರಲಿ ಎಂದು ಐಡಿಎಸ್‌ಜಿ ಸರ್ಕಾರಿ ಕಾಲೇಜಿನ ಪ್ರಾಂಶುಪಾಲೆ ಡಾ. ಪುಷ್ಪಾಭಾರತಿ ಆಶಯ ವ್ಯಕ್ತಪಡಿಸಿದರು.

ಪೂರ್ವಿ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಯುರೇಕಾ ಅಕಾಡೆಮಿ ಹಾಗೂ ಲಯನ್ಸ್ ಸಂಸ್ಥೆಯ ಆಶ್ರಯದಲ್ಲಿ ನಗರದ ಎಂಇಎಸ್ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ 'ಜುಬಿಲಿ ಕುಮಾರ್ ಒಂದು ನೆನಪು' ಶೀರ್ಷಿಕೆಯಡಿ ಖ್ಯಾತ ನಟ ಪದ್ಮಶ್ರೀ ರಾಜೇಂದ್ರಕುಮಾರ್ ಅಭಿನಯದ ಹಿಂದಿ ಚಿತ್ರಗೀತೆಗಳ ಗಾಯನ ಪೂರ್ವಿ ಗಾನಯಾನ 109ರ ಸರಣಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಂಸ್ಕೃತಿಕ ರಾಜಕಾರಣದಿಂದ ಕಲಾಕ್ಷೇತ್ರವನ್ನು ಹೊರ ತರಲು ಸರ್ಕಾರವೂ ಸೇರಿದಂತೆ ಕಲಾ ಕ್ಷೇತ್ರದ ದಿಗ್ಗಜರು ಇದನ್ನು ಗಮನಿಸಿ ನೈಜ ಪ್ರತಿಭಾವಂತರಿಗೆ ಹೆಚ್ಚು ಅವಕಾಶ ಸಿಗುವ ದಿಕ್ಕಿನಲ್ಲಿ ಪ್ರಯತ್ನ ನಡೆಸಬೇಕು. ಪ್ರಭಾವಕ್ಕೆ, ಹಣಕ್ಕೆ, ಜಾತಿ, ಧರ್ಮಕ್ಕೆ ವಿಚಾರಕ್ಕೆ ಒಳಗಾಗಿ ನೈಜ ಪ್ರತಿಭೆಗೆ ಅವಕಾಶ ಸಿಗದಂತಾಗಬಾರದು ಎಂದು ಅವರು ಹೇಳಿದರು.

ಸಾಹಿತ್ಯ ಇಲ್ಲದೆ ಸಂಗೀತ, ಸಂಗೀತ ಇಲ್ಲದೆ ಸಾಹಿತ್ಯ ಇರಬಹುದು. ಅವೆರಡಕ್ಕೂ ಅವುಗಳದ್ದೇ ಆದ ಅಸ್ಮಿತೆ, ಅನನ್ಯತೆ ಇದೆ. ಇವೆರಡರ ಸಂಯೋಗ ಹಾಗೂ ಸಂಯೋಜನೆ ಉಂಟುಮಾಡುವ ಪರಿಣಾಮ ಅತ್ಯಂತ ವಿಶಿಷ್ಟ ಹಾಗೂ ಅತ್ಯಂತ ವಿಭಿನ್ನ. ಸಂಗೀತದಲ್ಲಿ ನೂರಾರು ಅಸಂಖ್ಯ ಸ್ವರೂಪ, ವಿಧಗಳಿದ್ದರೂ ತುಂಬಾ ಸರಳ ಹಾಗೂ ನೇರವಾಗಿರುವುದರಿಂದ ಜನಪದ ಸಂಗೀತ ನಮಗೆ ಹೆಚ್ಚು ಪ್ರಿಯವಾಗುತ್ತದೆ. ನೋವಿಗೆ ಸ್ಪಂದಿಸುವ, ಎದೆಯಾಳಕ್ಕೆ ಇಳಿಯುವ, ಜನಸಾಮಾನ್ಯರಿಗೆ ಅರ್ಥವಾಗುವ ಮಾಧ್ಯಮ ಅದು. ಅದೇ ಶಾಸ್ತ್ರೀಯ ಸಂಗೀತದ ಆಳಕ್ಕೆ ಇಳಿಯಲು, ಗ್ರಹಿಸಲು ಎಲ್ಲರಿಗೆ ಆಗದು. ಸಾಧಕ ಭಾವ ಇದ್ದರೆ ಮಾತ್ರ ಅದು ಸಾಧ್ಯ ಎಂದು ಅವರು ವಿಶ್ಲೇಷಿಸಿದರು.

ಸಂಗೀತ ಎಲ್ಲರಿಗೂ ಸಿದ್ಧಿಸುವುದಿಲ್ಲ. ಈ ನಿಟ್ಟಿನಲ್ಲಿ ಸುಧೀರ್ ನೇತೃತ್ವದ ತಂಡದ ಸಾಧನೆ ದೊಡ್ಡದು. ಅವರ ಪ್ರಯತ್ನ ಮುಂದುವರಿಯಲಿ. ಸಂಗೀತದ ಪಾಂಡಿತ್ಯ ನಮಗಿಲ್ಲದಿದ್ದರೂ ಕನಿಷ್ಟಪಕ್ಷ ಕೇಳಿ ಅನುಭವಿಸುವ ಶಕ್ತಿ ನಮ್ಮ ಮನಸ್ಸಿಗೆ, ಹೃದಯಕ್ಕೆ ಇರಬೇಕು ಎಂದರು.

# ಮಾದಕ ವಸ್ತು ವಿರೋಧಿ ಜಾಗೃತಿ ಸಮಿತಿ ರಚನೆ ಕಡ್ಡಾಯ : ಎಸ್ಪಿ ವಿಕ್ರಮ್ ಅಮಟೆ



**ಚಿಕ್ಕಮಗಳೂರು, ಜು.22:** ಶಾಲಾ ಕಾಲೇಜುಗಳಲ್ಲಿ ಮಾದಕವಸ್ತು ವಿರೋಧಿ ಜಾಗೃತಿ ಸಮಿತಿಗಳನ್ನು ಕಡ್ಡಾಯವಾಗಿ ರಚಿಸುವ ಮೂಲಕ ಮಾದಕ ವಸ್ತು ವ್ಯಸನದ ಅರಿವು ಮೂಡಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ್ ಅಮಟೆ ಸೂಚಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪೊಲೀಸ್ ಇಲಾಖೆ, ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಘಟಕ ಮತ್ತಿತರ ಇಲಾಖೆಗಳ ಆಶ್ರಯದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವಸತಿ ಶಾಲೆಗಳು ಹಾಗೂ ಜಿಲ್ಲಾ ವ್ಯಾಪ್ತಿಯ ಎಲ್ಲಾ ವಿದ್ಯಾರ್ಥಿ ನಿಲಯಗಳು ಮತ್ತು ಕ್ರೈಸ್ಟ್ ಅಧೀನದ ವಸತಿ ಶಾಲೆಗಳ ಪ್ರಾಂಶುಪಾಲರು ಮತ್ತು ವಾರ್ಡನ್‌ಗಳಿಗೆ ಮಾದಕ ವಸ್ತು ವ್ಯಸನದ ದುಷ್ಪರಿಣಾಮಗಳು ಮತ್ತು ಪೋಕ್ಸೋ ಕಾಯ್ದೆ ಕುರಿತು ನಗರದ ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಹಿಂದೆ ರ್‍ಯಾಗಿಂಗ್ ವಿರೋಧಿ ಸಮಿತಿಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿತ್ತು. ಈ ಬೆಳವಣಿಗೆ ಬಳಿಕ ರ್‍ಯಾಗಿಂಗ್ ಕಾಯ್ದೆ ರಚಿಸಿದ ಬಳಿಕ ಆ ಪಿಡುಗು ಸಂಪೂರ್ಣ ಕಡಿಮೆಯಾಗಿದೆ. ಅದೇ ರೀತಿ ಗೃಹ ಸಚಿವರ ನಿರ್ದೇಶನದ ಮೇರೆಗೆ ಮಾದಕವಸ್ತು ವಿರೋಧಿ ಜಾಗೃತಿ ಸಮಿತಿ ರಚಿಸಿ, ಆ ಮೂಲಕ ವಿದ್ಯಾರ್ಥಿಗಳಲ್ಲಿ ಮಾದಕ ವಸ್ತು ವ್ಯಸನದ ಬಗ್ಗೆ ಅರಿವು ಮೂಡಿಸಿ ಅವರನ್ನು ಸಂವೇದನಾ ಶೀಲರನ್ನಾಗಿ ಮಾಡಬೇಕು ಎನ್ನುವ ಉದ್ದೇಶ ಹೊಂದಲಾಗಿದೆ. ಈಗಾಗಲೇ ನಮ್ಮ ಪಾಲುದಾರ ಇಲಾಖೆಗಳಿಗೆ ಈ ಬಗ್ಗೆ ನಿರ್ದೇಶನ ನೀಡಲಾಗಿದೆ. ಎಂದು ತಿಳಿಸಿದರು.

ಆ ಸಮಿತಿಯ ಸ್ವರೂಪದ ಬಗ್ಗೆ ಈಗಾಗಲೇ ತಮ್ಮ ಸಂಸ್ಥೆಗಳಿಗೆ ಕಳುಹಿಸಿರುವ ಪತ್ರದಲ್ಲಿ ಮಾಹಿತಿ ನೀಡಲಾಗಿದೆ. ಅಲ್ಲಿನ ಪ್ರಾಚಾರ್ಯರು ಮುಖ್ಯಸ್ಥರಾಗಿರುತ್ತಾರೆ. ಇಬ್ಬರು ಬೋಧಕ ಸಿಬ್ಬಂದಿ ಸದಸ್ಯರಾಗಿರುತ್ತಾರೆ. ಇಬ್ಬರು ಹಿರಿಯ ವಿದ್ಯಾರ್ಥಿಗಳು ಇರುತ್ತಾರೆ. ಆ ಭಾಗದ ಬೀಟ್ ಪೊಲೀಸ್ ಸಿಬ್ಬಂದಿ, ಆ ವಿಭಾಗದ ಕಾನೂನು ಸುವ್ಯವಸ್ಥೆ ವಿಭಾಗದ ಸಬ್ ಇನ್ಸ್‌ಪೆಕ್ಟರ್ ಸಮಿತಿಯಲ್ಲಿರುತ್ತಾರೆ. ಈ ಸಮಿತಿ ಯಾವ ರೀತಿ ಕಾರ್ಯ ನಿರ್ವಹಿಸಬೇಕೆಂಬ ಬಗ್ಗೆ ಅನಂತರದಲ್ಲಿ ಮಾಹಿತಿ ನೀಡಲಾಗುವುದು ಎಂದು ಹೇಳಿದರು.

ಮಕ್ಕಳು ಈ ರೀತಿಯ ವ್ಯಸನಕ್ಕೆ ಒಳಗಾಗದೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂಬ ಹಿನ್ನೆಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಗು–ರಿಯಾಗಿಸಿ ಜಾಗೃತಿ ಮೂಡಿಸಿದಲ್ಲಿ ಮುಂದೆ ವಿದ್ಯಾರ್ಥಿಗಳು ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬಹುದು ಎಂಬ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಹಾಗೆಯೇ ಇಂತಹ ಸಾಮಾಜಿಕ ಪಿಡುಗುಗಳು ಶಿಕ್ಷಣ ಸಂಸ್ಥೆಗಳಿಂದಲೇ ಹುಟ್ಟಿಕೊಳ್ಳುವಂತಾದರೆ ಅದು ಸಮಾಜಕ್ಕೆ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ದುರ್ವ್ಯಸನಗಳಿಗೆ ಒಳಗಾಗಬಾರದು. ಈ ಹಿನ್ನೆಲೆಯಲ್ಲಿ ಕಾರ್ಯ ನಿರ್ವಹಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಶಾಲಾ ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳನ್ನು ಮಾದಕ ವಸ್ತುಗಳು ಮಾತ್ರವಲ್ಲದೆ ಮದ್ಯ ಹಾಗೂ ತಂಬಾಕು ಉತ್ಪನ್ನಗಳಿಂದ ಮುಕ್ತವಾಗಿಸಬೇಕು. ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಅವುಗಳ ಬಳಕೆಗೆ ಆಗಲಿ, ಮಾರಾಟಕ್ಕೆ ಆಗಲಿ ಅವಕಾಶ ನೀಡಬಾರದು. ಅಂಥ ಬೆಳವಣಿಗೆಗೇನಾದರೂ ಕಂಡು ಬಂದರೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಅವರು ಮಾಹಿತಿ ನೀಡಿ–ದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ವಿ.ಹನುಮಂತಪ್ಪ ಮಾತನಾಡಿ, ಮಕ್ಕಳ ಹಕ್ಕುಗಳ ಸಂರಕ್ಷಣೆಗೆ ಸಂಬಂಧಿಸಿದಂತೆ 1992 ರಲ್ಲಿ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಕೈಗೊಂಡ ತೀರ್ಮಾನಕ್ಕೆ ಭಾರತ ಸಹಿ ಹಾಕಿದ್ದು, ಮಕ್ಕಳಿಗೆ ಸಂಬಂಧಿಸಿದ ಕಾಯ್ದೆಗಳನ್ನು ಜಾರಿಗೊಳಿಸುವುದು. 2012ರಲ್ಲಿ ಪೋಕ್ಸೋ ಕಾಯ್ದೆಯನ್ನು ಜಾರಿಗೊಳಿಸಲಾಯಿತು ಎಂದು ತಿಳಿಸಿದರು.

18 ವರ್ಷದೊಳಗಿನ ಹೆಣ್ಣು ಹಾಗೂ ಗಂಡು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದ–ರೆ ಪೋಕ್ಸೋ ಕಾಯ್ದೆಯ ವ್ಯಾಪ್ತಿಗೆ ಬರುತ್ತದೆ. 2019ರಲ್ಲಿ ಕಾಯ್ದೆ ತಿದ್ದುಪಡಿಯಾದ ಬಳಿಕ ಕಠಿಣ ಕಾನೂನು ಜಾರಿಗೆ ಬಂದಿತು. 16 ವರ್ಷದೊಳಗಿನ ಮಕ್ಕಳ ಮೇಲೆ ಅದರಲ್ಲೂ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದಲ್ಲಿ ಅಷ್ಟಕ್ಕೂ ಕೃತ್ಯ ಎಸಗಿದವರು ಸಂಬಂಧಿಕರಾಗಿದ್ದರೆ ಮರಣ ದಂಡನೆ ವಿಧಿಸಲು ಕೂಡ ಈ ಕಾಯ್ದೆಯಲ್ಲಿ ಅವಕಾಶವಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಚ್.ಎಸ್.ಕೀರ್ತನಾ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಸುಜೇಂದ್ರ ಮಾತನಾಡಿದರು. ಬಾಲ ನ್ಯಾಯ ಮಂಡಳಿ ಸದಸ್ಯ ಚಂದ್ರಶೇಖರ್ ಉಪನ್ಯಾಸ ನೀಡಿದರು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಜಯಶೀಲ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಯಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಬಿ.ಮಾಲತಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಿ.ಸಂತೋಷ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಂಜುನಾಥ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಆರ್. ರಮೇಶ್ ಕಾರ್ಯಕ್ರಮದಲ್ಲಿದ್ದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹೆಚ್.ಡಿ.ರೇವಣ್ಣ ವಂದಿಸಿದರು.

## ಕಚೇರಿಯಲ್ಲೇ ಭೀಕರವಾಗಿ ಕೊಲೆಯಾದಡ್ಯಾನ್‌ವಿಲ್ಲೆಕೌನ್ಸಿಲರ್; ಲೀ ವೋಗ್ಲರ್‌ಗೆ ಬೆಂಕಿ ಹಚ್ಚಿದ್ಯಾಕೆ ಶಾಟ್ಸಿ ಹೇಯ್ಸ್?

**ಅಮೆರಿಕದ:** ಡ್ಯಾನ್‌ವಿಲ್ಲೆ ನಗರಕೌನ್ಸಿಲ್ ಸದಸ್ಯ ಲೀ ವೋಗ್ಲರ್ ಅವರನ್ನು ಅವರ 'ಶೋಕೇಸ್ ಮ್ಯಾಗಜೀನ್' ಕಚೇರಿಯಲ್ಲಿ, ಶಾಟ್ಸಿ ಹೇಯ್ಸ್ ಎಂಬಾತ ಗ್ಯಾಸೋಲಿನ್ ಸುರಿದು ಬೆಂಕಿ ಹಚ್ಚಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆ. 12 ವರ್ಷಗಳಿಂದ ನಗರ ಮಂಡಳಿ ಸದಸ್ಯರಾಗಿದ್ದ ಲೀವೋಗ್ಲರ್, ಪ್ರಸ್ತುತ 'ನಾಲ್ಕನೇ ಅವಧಿಯಲ್ಲಿ ಸೇವೆಸಲ್ಲಿ ಸುತ್ತಿದ್ದರು. ಅವರ ಕೊಲ ರಾಜಕೀಯ ಪ್ರೇರಿತವಲ್ಲ ಎಂದು ಸ್ಪಷ್ಟಪಡಿಸಿರುವ ಪೊಲೀಸರು, ವೈಯಕ್ತಿಕದ್ವೇಷದಿಂದ ಆರೋಪಿ ಶಾಟ್ಸಿ ಮೈಕೆಲ್ ಬಕ್ ಹೇಯ್ಸ್‌ಎಂಬಾತಬೆಂಕಿ ಹಚ್ಚಿ ಕೊಲೆಮಾಡಿದ್ದಾನೆ ಎಂದು ತಿಳಿಸಿದ್ದಾರೆ.

ಲೀ ವೋಗ್ಲರ್ ಕೆಲಸ ಮಾಡುತ್ತಿದ್ದ ಶೋಕೇಸ್ ಮ್ಯಾಗಜೀನ್‌ನ 'ಕಚೇರಿಗೆ ಏಕಾಏಕಿ ಬಲವಂತವಾಗಿ ನುಗ್ಗಿದ ಶಾಟ್ಸಿ ಹೇಯ್ಸ್, ನೇರವಾಗಿ ವೋಗ್ಲರ್ ಮೇಲೆ ದಾಳಿ ಮಾಡಿಅವರ ಮೇಲೆ ಗ್ಯಾಸೋಲಿನ್ ಸುರಿದು ಬೆಂಕಿ ಹಚ್ಚಿದ್ದಾನೆ. "ಘಟನೆ ನಡೆದ ಸಂದರ್ಭದಲ್ಲಿ ಕಚೇರಿಯಲ್ಲಿ ಕೇವಲ ಇಬ್ಬರು ಉದ್ಯೋಗಿಗಳು ಮಾತ್ರಇದ್ದು, ಅವರಲ್ಲಿ ಒಬ್ಬ ದೂರವಾಣಿಕರೆ ಮಾಡಿ ಮಾಹಿತಿ ನೀಡಿದ" ಎಂದು ಪತ್ರಿಕೆಯ ಮಾಲೀಕಆಂಡ್ರ್ಯೂ ಬ್ರೂಕ್ಸ್ ಹೇಳಿದ್ದಾರೆ.

## ಡೊನಾಲ್ಡ್‌ಟ್ರಂಪ್ 25% ಸುಂಕಕ್ಕೆ ಭಾರತದ ಫಸ್ಟ್‌ರಿಯಾಕ್ಷನ್, ಅಮೆರಿಕಾದತೆರಿಗೆಯುದ್ಧದ ಬಗ್ಗೆ ದೇಶದ ನಿಲುವೇನು?

**ನವದೆಹಲಿ:** ಭಾರತ ವುರಷ್ಯಾದ ತೈಲವನ್ನು ಖರೀದಿ ಸುತ್ತಿರುವುದರಿಂದ ಭಾರತದಿಂದ ಬರುವ ಸರಕುಗಳ ಮೇಲೆ ಶೇಕಡಾ 25 ರಷ್ಟು ಸುಂಕ ಮತ್ತು ಹೆಚ್ಚುವರಿ ಆಮದು ತೆರಿಗೆಯನ್ನುವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಬುಧವಾರ ಘೋಷಿಸಿದ ಕೆಲವೇ ಗಂಟೆಗಳಲ್ಲಿ, ಭಾರತವು ಬುಧವಾರ ಪ್ರತಿಕ್ರಿಯಿಸಿದೆ.

ಭಾರತ ಸರ್ಕಾರ ತನ್ನ ಹೇಳಿಕೆಯಲ್ಲಿ, 'ಭಾರತಮತ್ತುಅಮೆರಿಕ ಕಳೆದ ಕೆಲವು ತಿಂಗಳುಗಳಿಂದ ನ್ಯಾಯಯುತ, ಸಮತೋಲಿತ ಮತ್ತು ಪರಸ್ಪರ ಪ್ರಯೋಜನಕಾರಿ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಮುಕ್ತಾಯಗೊಳಿಸುವ ಕುರಿತು ಮಾತುಕತೆಗಳಲ್ಲಿ ತೊಡಗಿವೆ. ನಾವು ಆ ಗುರಿಗೆ ಬದ್ಧರಾಗಿದ್ದೇವೆ'ಎಂದು ಅದುಹೇಳಿದೆ.

'ನಮ್ಮರೈತರು, ಉದ್ಯಮಿಗಳು ಮತ್ತು MSME ಗಳ ಕಲ್ಯಾಣವನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಸರ್ಕಾರವುಅತ್ಯಂತಪ್ರಾಮುಖ್ಯತೆಂ ಯನ್ನುನೀಡುತ್ತದೆ'ಎಂದು ತನ್ನ ಆದ್ಯತೆಗಳನ್ನು ಪುನರುಚ್ಚರಿ ಸುತ್ತಾ ಹೇಳಿಕೆ ತಿಳಿಸಿದ್ದು, ಎರಡೂ ರಾಷ್ಟ್ರಗಳು ನ್ಯಾಯಯುತವ್ಯಾಪಾರಒಪ್ಪಂದವನ್ನು ಮುಕ್ತಾಯ ಗೊಳಿಸುವ ಮಾತು ಕತೆಗಳಲ್ಲಿ ಭಾಗಿಯಾಗಿವೆ ಮತ್ತು ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನುಭದ್ರಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆಎಂದು ಭಾರತ ಒತ್ತಿ ಹೇಳಿದೆ.

## ಭಾರತ ವಿರುದ್ಧದ 5ನೇ ಟೆಸ್ಟ್‌ನಿಂದ ನಾಯಕ ಸ್ಟೋಕ್ಸ್‌ಔಟ್, RCB ಪವರ್ ಹಿಟ್ಟರ್‌ಗೆಚಾನ್ಸ್! ಹೇಗಿದೆಗೊತ್ತಾ ಇಂಗ್ಲೆಂಡ್ ಪ್ಲೇಯಿಂಗ್–XI?

ಭಾರತ–ಇಂಗ್ಲೆಂಡ್ ವಿರುದ್ಧದ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–1ರಿಂದ ಮುನ್ನಡೆ ಸಾಧಿಸಿರುವ ಆತಿಥೇಯ ಇಂಗ್ಲೆಂಡ್‌ತಂಡ ಕೊನೆಯ ಪಂದ್ಯಕ್ಕೆ ಮ್ಯಾಚ್‌ಆರಂಭಕ್ಕೆ ಒಂದು ದಿನ ಮೊದಲೇ ಪ್ಲೇಯಿಂಗ್ 11 ಅನ್ನು ಘೋಷಿಸಿದೆ. ತಂಡದಲ್ಲಿ ನಾಯಕ ಬೆನ್ ಸ್ಟೋಕ್ಸ್ ಸೇರಿ 4 ಪ್ರಮುಖ ಬದಲಾವಣೆ ಮಾಡಿಕೊಂಡು ಕಣಕ್ಕಿಳಿಯಲಿದೆ. ಮಾತ್ರವಲ್ಲ, ಆರ್‌ಸಿಬಿ ತಂಡದ ಬಿಗ್ ಹಿಟ್ಟರ್‌ಒಬ್ಬರಿಗೂ ಪ್ಲೇಯಿಂಗ್–11 ನಲ್ಲಿ ಅವಕಾಶ ನೀಡಿದ್ದಾರೆ.

ಗುರುವಾರ (ಜುಲೈ 23) ನಡೆಯಲಿರುವ ಸರಣಿಯಅಂತಿಮ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡವನ್ನು ಓಲಿ ಪೋಪ್ ಮುನ್ನಡೆಸಲಿದ್ದು, ಬೆನ್ ಸ್ಟೋಕ್ಸ್ ಅವರು ತಂಡದಿಂದ ಹೊರ ಗುಳಿಯಲಿದ್ದಾರೆ. ತಂಡದಲ್ಲಿ ಬೆನ್ ಸ್ಟೋಕ್ಸ್ ಸ್ಥಾನವನ್ನು ಆರ್‌ಸಿಬಿ ಆಟಗಾರ ಜಾಕೋಬ್ ಬೆಥೆಲ್ ಆಕ್ರಮಿಸಿಕೊಂಡಿದ್ದಾರೆ. ಅವರು ಕಳೆದ ವರ್ಷ ನ್ಯೂಜಿಲೆಂಡ್‌ನಲ್ಲಿ ನಡೆದ ಪ್ರವಾಸದಲ್ಲಿ ಉತ್ತಮಪ್ರದರ್ಶನ ನೀಡಿ ಪ್ರಭಾವ ಬೀರಿದ್ದರು.

ಕಳೆದ ಪಂದ್ಯದಲ್ಲಿ ಗಮನಾರ್ಹ ಪ್ರದರ್ಶನತೋರಿದ್ದ ಲಿಯಾಮ್ ಡಾಸನ್ ಅವರನ್ನು ತಂಡದಿಂದ 'ಕೈಬಿಡಲಾಗಿದ್ದು, ಜೇಮೀಓವರ್ಟನ್ ಅವರಿಗೆ ಪ್ಲೇಯಿಂಗ್–11 ನಲ್ಲಿ ಅವಕಾಶ ಸಿಕ್ಕಿದ್ದಾರೆ. ಕಾರಣ ಸ್ಟೋಕ್ಸ್ ಅನುಪಸ್ಥಿತಿಯಲ್ಲಿ ಇಂಗ್ಲೆಂಡ್ 4 ವೇಗಿಗಳನ್ನು ಕಣಕ್ಕಿಳಿಸಲಿದೆ. ಸ್ಪಿನ್ ವಿಭಾಗಕ್ಕೆ ಸಂಬಂಧಿಸಿದಂತೆ, ಜೋರೂಟ್ ಮತ್ತು ಬೆಥೆಲ್‌ಇಬ್ಬರೂಕೊಡುಗೆ ನೀಡಲಿದ್ದಾರೆ.

## ರಷ್ಯಾ ಭೂಕಂಪಬೆನ್ನಲ್ಲೇ ಈ ಎರಡೂ ದೇಶಗಳಿಗೂ ಸುನಾಮಿ ಎಚ್ಚರಿಕೆ; ಜನರಲ್ಲಿ ಹೆಚ್ಚಾದ ಆತಂಕ!

**ರಷ್ಯಾದ:** ಪೂರ್ವ ಕರಾವಳಿಯ ಕಮ್ಚಟ್ಕಾ ಪರ್ಯಾಯ ದ್ವೀಪದಲ್ಲಿ ಭೀಕರ ಭೂಕಂಪ ಸಂಭವಿಸಿದೆ. ಸುಮಾರು 8.8 ತೀವ್ರತೆಯ ಪ್ರಬಲ ಭೂಕಂಪವಾಗಿದ್ದು, ಇದುಪೆಸಿಫಿಕ್ ಮಹಾಸಾಗರ ದಾದ್ಯಂತ ಸುನಾಮಿ ಎಚ್ಚರಿಕೆಯನ್ನುಉಂಟುಮಾಡಿದೆ. ಈ ಘಟನೆಯು ಕಮ್ಚಟ್ಕಾದ ಇತಿಹಾಸದಲ್ಲಿ 1952 ರ 9.0 ತೀವ್ರತೆಯ ಭೂಕಂಪದ ನಂತರದ ಅತ್ಯಂತ ಶಕ್ತಿಶಾಲಿ ಭೂಕಂಪವಾಗಿದೆ. ಇದರಿಂದ ಕೇವಲ ರಷ್ಯಾದಲ್ಲಿ ಮಾತ್ರವಲ್ಲದೇ ಇತರೆ ದೇಶಗಳಿಗೂ ಸುನಾಮಿಎಚ್ಚರಿಕೆನೀಡಲಾಗಿದೆ.

ರಷ್ಯಾದ ಈ ಭೂಕಂಪವು ಜಪಾನ್, ಹವಾಯಿ, ಅಲಾಸ್ಕಾ, ನ್ಯೂಜಿಲೆಂಡ್, ಮತ್ತು ಇತರ ಪೆಸಿಫಿಕ್ ದೇಶಗಳ ಕರಾವಳಿಗಳಿಗೆ ಸುನಾಮಿ ಎಚ್ಚರಿಕೆಯನ್ನು ನೀಡಿತು, ಇದರಿಂದ ಈ ಪ್ರದೇಶಗಳಲ್ಲಿ ಆತಂಕದವಾತಾವರಣಸೃಷ್ಟಿಯಾಗಿದೆ.

8.7 ತೀವ್ರತೆಯಲ್ಲಿ ಭೂಕಂಪ

ಯುನೈಟೆಡ್ ಸ್ಟೇಟ್ಸ್‌ಜಿಯಾಲಾಜಿಕಲ್ ಸರ್ವೇ ಪ್ರಕಾರ, ಈ ಭೂಕಂಪವು ಕಮ್ಚಟ್ಕಾದ ಪೆಟ್ರೋಪಾವ್ಲೋವ್ಸ್–ಕಮ್ಚಾಟ್ಸ್ಕಿಯಿಂದ 119 ಕಿ.ಮೀ (74 ಮೈಲಿ) ಪೂರ್ವ–ಆಗ್ನೇಯಕ್ಕೆ, 19.3 ಕಿ.ಮೀ ಆಳದಲ್ಲಿ ಸಂಭವಿಸಿದೆ. ಆರಂಭದಲ್ಲಿ 8.0 ತೀವ್ರತೆಯೆಂದು ಅಂದಾಜಿಸಲಾಗಿದ್ದ ಈ ಭೂಕಂಪವನ್ನು ನಂತರ 8.7ಕ್ಕೆ ನವೀಕರಿಸಲಾಯಿತು. ಕಮ್ಚಟ್ಕಾದಗವರ್ನರ್ ವ್ಲಾಡಿಮಿರ್ ಸೊಲೊಡೊವ್ ಈ ಭೂಕಂಪವನ್ನು "ಕಳೆದ ದಶಕಗಳ ಅತ್ಯಂತ ಶಕ್ತಿಶಾಲಿ ಭೂಕಂಪ" ಎಂದು ವಿವರಿಸಿದ್ದಾರೆ.

## ರೈತರು ಶಿಫಾರಸ್ಸು ಪ್ರಮಾಣದ ರಸಗೊಬ್ಬರ ಬಳಕೆ ಮಾಡಬೇಕು



**ಚನ್ನಗಿರಿ:** ರೈತರು ತಮ್ಮ ಬೆಳೆಗಳಿಗೆ ಅತಿಯಾದ ರಾಸಾಯಾನಿಕ ಗೊಬ್ಬರಗಳನ್ನು ಬಳಕೆ ಮಾಡದೇ ಶಿಫಾರಸ್ಸು ಪ್ರಮಾಣದ ರಸಗೊಬ್ಬರವನ್ನು ಬಳಕೆ ಮಾಡಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಅರುಣ್‌ಕುಮಾರ್ ಹೇಳಿದರು.

ಬುಧವಾರ ಚನ್ನಗಿರಿ ತಾಲೂಕಿನ ಲಕ್ಷ್ಮಿಸಾಗರ ಗ್ರಾಮದಲ್ಲಿ ಕೃಷಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ದ್ರವರೂಪದ ನ್ಯಾನೂ ಯೂರಿಯಾ ಗೊಬ್ಬರ ಬಳಕೆ ಕುರಿತು ಹಮ್ಮಿಕೊಳ್ಳಲಾಗಿದ್ದ ಪ್ರಾತ್ಯಕ್ಷತಾ ಕಾರ್ಯಕ್ರಮದಲ್ಲಿ ರೈತರಿಗೆ ಪ್ರಾತ್ಯಕ್ಷತೆ ತೋರಿಸಿ ಮಾತನಾಡಿ ರೈತರು ಇದುವರೆಗೂ ಹರಳು ರೂಪದ ಯೂರಿಯಾ ಗೊಬ್ಬರ ಬಳಕೆ ಮಾಡುತ್ತಿದ್ದರು. ಆದರೆ ಅದಕ್ಕೆ ಪರ್ಯಾಯವಾಗಿ ದ್ರವರೂಪದ ನ್ಯಾನೂ ಯೂರಿಯಾ ಗೊಬ್ಬರ ಬಳಕೆಗೆ ಬಂದಿದ್ದು ರೈತರು ಹೊಸ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಮಣ್ಣಿನ ಮೇಲಾಗುವ ದುಷ್ಪರಿಣಾಮಗಳನ್ನು ಕಡಿಮೆ ಮಾಡಿ ಎಲೆಗಳ ಮೇಲೆ ಸಿಂಪರಣೆ ಮಾಡುವುದರಿಂದ ಅಧಿಕವಾದ ಗೊಬ್ಬರದ ಪ್ರಯೋಜನ ಮಾಡುವ ಮೂಲಕ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಇದರ ಸಿಂಪರಣೆಯನ್ನು ಡ್ರೋನ್ ಮೂಲಕ ಮಾಡಬೇಕಿದ್ದು ಎಲ್ಲಾ ಗಿಡಗಳಿಗೂ ಈ ಗೊಬ್ಬರ ತಲುಪಲಿದೆ ಎಂದರು.

25 ದಿನದ ಮೆಕ್ಕೇಜೋಳಕ್ಕೆ 500 ಮಿಲಿ ನ್ಯಾನೋ ಯೂರಿಯಾ, 500 ಮಿಲಿ ನ್ಯಾನೋ ಡಿ.ಎ.ಪಿ, 45 ದಿನದ ಮೆಕ್ಕೇಜೋಳಕ್ಕೆ 250 ಮಿಲಿ ಮತ್ತು 250 ನ್ಯಾನೋ ಡಿ.ಎ.ಪಿ. ಪ್ರತಿ ಎಕರೆಯಂತೆ ಸಿಂಪರಣೆ ಮಾಡಬಹುದಾಗಿರುತ್ತದೆ ಎಂದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಆತ್ಮ ಸಿಬ್ಬಂದಿಗಳು, ಪರಿಕರ ಮಾರಾಟ ಸಂಘದ ಅಧ್ಯಕ್ಷರಾದ ತಿಪ್ಪೇಸ್ವಾಮಿ, ಮತ್ತು ರೈತರು ಹಾಜರಿದ್ದರು.

## ಹೊಂಬಾಳೆಗೆ ಮತ್ತೊಂದು ಯಶಸ್ಸು, 'ಮಹಾವತಾರ್' ಗಳಿಸಿದ್ದೆಷ್ಟು?

ಕರ್ನಾಟಕದ ಹೆಮ್ಮೆಯ ಸಿನಿಮಾ ನಿರ್ಮಾಣ ಮತ್ತು ವಿತರಣಾ ಸಂಸ್ಥೆ ಹೊಂಬಾಳೆ ಫಿಲಮ್ಸ್ (Hombale Films) ಪ್ರಸ್ತುತ ಪಡಿಸಿರುವ ಅನಿಮೇಟೆಡ್ ಸಿನಿಮಾ'ಮಹಾವಾತಾರ್: ನರಸಿಂಹ'ಸಿನಿಮಾ ಕಳೆದ 'ಶುಕ್ರವಾರ ಬಿಡುಗಡ 'ಆಗಿದೆ. 'ಸುಫ್ರಂಸೋ'ಸಿನಿಮಾ ಬಿಡುಗಡೆ ಆದದಿನ ದಂದೇಬಿಡುಗಡೆಆದ'ಮಹಾವಾತಾರ್' ಸಿನಿಮಾ ಭರ್ಜರಿ ಕಲೆಕ್ಷನ್‌ಅನ್ನೇ ಮಾಡುತ್ತಿದೆ. 'ಸುಫ್ರಂ ಸೋ'ನಅಬ್ಬರದಲ್ಲಿ'ಮಹಾವಾತಾರ್: ನರಸಿಂಹ' ಗೆಲುವಿನಸುದ್ದಿ ಕಳೆದುಹೋಗಿದೆಅಷ್ಟೆ.

ಮಹಾವತಾರ್: ನರಸಿಂಹ' ಸಿನಿಮಾ ಬಿಡುಗಡೆ ಆದ ಐದು ದಿನದಲ್ಲಿ 30 ಕೋಟಿ ರೂಪಾಯಿ ಗಳಿಕೆ ಮಾಡಿದೆ. ನಿನ್ನೆಗೆ ಸಿನಿಮಾದ ಗಳಿಕೆ 26.43 ಕೋಟಿ ಇತ್ತು. ಇಂದು ಖಾತೆಗೆ ಮೂರು ಕೋಟಿಗೂ ಹೆಚ್ಚುಮೊತ್ತ ಸೇರಿಸಿಕೊಂಡಿದ್ದು ಸಿನಿಮಾದ ಗಳಿಕೆಹೆಚ್ಚಿ 30 ಕೋಟಿದಾಟಿದೆ. ಯಾವುದೇ ಸ್ಟಾರ್‌ಗಳಿಲ್ಲದೆ, ಅಬ್ಬರದ ಪ್ರಚಾರಗಳಿಲ್ಲದೆ ಯೂಸಹ ಈ ಅನಿಮೇಷನ್ ಸಿನಿಮಾ 30 ಕೋಟಿಹಣ ಗಳಿಸಿರುವುದು ಕಡಿಮೆಸಾಧನೆಯಲ್ಲ.

ಅನಿಮೇಷನ್ ಸಿನಿಮಾ ಇದಾಗಿದ್ದು, ಸಿನಿಮಾನಲ್ಲಿ ವಿಷ್ಣುವಿನ ನರಸಿಂಹ ಅವತಾರದ ಕತೆಯನ್ನು ಅನಿಮೇಷನ್ ಮೂಲಕ ಹೇಳಲಾಗಿದೆ. 'ಮಹಾವತಾರ: ನರಸಿಂಹ'ಸಿನಿಮಾವನ್ನು ಅಶ್ವಿಕ್‌ಕುಮಾರ್ ನಿರ್ದೇಶನ ಮಾಡಿದ್ದಾರೆ. ಶಿಲ್ಪಾಧವನ್, ಕುಶಾಲ್ ದೇಸಾಯಿ, ಚೈತನ್ಯ ದೇಸಾಯಿ ನಿರ್ಮಾಣ ಮಾಡಿದ್ದಾರೆ. ಇದೊಂದುಪ್ಯಾನ್ ಇಂಡಿಯಾ ಸಿನಿಮಾ ಆಗಿದ್ದು ಕನ್ನಡ, ಹಿಂದಿ, ತಮಿಳು, ಮಲಯಾಳಂ ಹಾಗೂ ತೆಲುಗು ಭಾಷೆಗಳಿಗೆಡಬ್ ಆಗಿ ಏಕಕಾಲದಲ್ಲಿ ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಬಿಡುಗಡೆ ಆಗಿದೆ.

ಸಿನಿಮಾ ಅನ್ನು ಹೊಂಬಾಳೆ ಫಿಲಮ್ಸ್ ಪ್ರೆಸೆಂಟ್ ಮಾಡಿದ್ದು, ಸಿನಿಮಾದ ವಿತರಣೆಯನ್ನೂ ಹೊಂಬಾಳೆಯೇ ಮಾಡಿದೆ ಎನ್ನಲಾಗುತ್ತಿದೆ. "ಮಹಾವತಾರ್ ನರಸಿಂಹ"ಸಿನಿಮಾಭಗವಾನ್ ವಿಷ್ಣುವಿನ ದಶಾವತಾರಗಳ ಆಧಾರದ ಮೇಲೆ ಬರಲಿರುವ ಸಿನಿಮಾ ಆಗಿರಲಿದೆ. ಮುಂದಿನ ಹತ್ತು ವರ್ಷಗಳಲ್ಲಿ'ಮಹಾವತಾರ್' ಯೂನಿವರ್ಸ್ನ ಏಳು ಸಿನಿಮಾಗಳು ತೆರೆಗೆ ಬರಲಿದೆ. ಸಿನಿಮಾಗಳ 'ಟೈಂಲೈನ್‌ಹೀಗಿದೆ. "ಮಹಾವತಾರ್‌ನರಸಿಂಹ" (2025), "ಮಹಾವತಾರ್ ಪರಶುರಾಮ" (2027), "ಮಹಾವತಾರ್‌ರಘುನಂದನ" (2029), "ಮಹಾವತಾರ್‌ಧ್ವಾಕಾಧೀಶ್" (2031), "ಮಹಾವತಾರ್ ಗೋಕುಲನಂದ" (2033), "ಮಹಾವತಾರ್ ಕಲ್ಕಿ ಭಾಗ 1" (2035), "ಮಹಾವತಾರ್ ಕಲ್ಕಿಭಾಗ 2" (2037) ಮೂಡಿಬರಲಿವೆ. ಜುಲೈ 25ರಂದು"ಮಹಾವತಾರ್ ನರಸಿಂಹ" ಸಿನಿಮಾ ಬಿಡುಗಡೆ ಆಗಲಿದೆ.

## ಆಗಸಕ್ಕೆ ನಿಸಾರ್ ಸೆಟಿಲೈಟ್ ಹಾರಿಸಿದ ಭಾರತದ ರಾಕೆಟ್

### ಇದು ಎರಡು ರಾಡಾರ್ ಫ್ರೀಕ್ವೆನ್ಸಿ ಬಳಸುವ ವಿಶ್ವದ ಮೊದಲ ಉಪಗ್ರಹ

**ಬೆಂಗಳೂರು:** ಇಸ್ರೋ ಮತ್ತು ನಾಸಾ ಸಹಯೋಗದಲ್ಲಿ ತಯಾರಿಸಲಾದ ನಿಸಾರ್ ಉಪಗ್ರಹವನ್ನು ಇಂದು ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ. ಆಂಧ್ರದ ಶ್ರೀಹರಿಕೋಟಾದಲ್ಲಿರುವ ಸತೀಶ್‌ಧವನ್ ಸ್ಪೇಸ್ ಸೆಂಟರ್‌ನಲ್ಲಿ ಭಾರತೀಯ ಕಾಲಮಾನ ಸಂಜೆ 5:40ಕ್ಕೆ ಈ ಉಪಗ್ರಹವನ್ನು ಆಗಸಕ್ಕೆ ಕಳುಹಿಸಲಾಗಿದೆ. ಜಿಎಲ್ವಿ ಎಫ್–16 ರಾಕೆಟ್ ಮೂಲಕ ಇದರ ಉಡ್ಡಯನ ಮಾಡಲಾಗಿದೆ.

ನಿಸಾರ್‌ಉಪಗ್ರಹಉಡಾವಣೆಯು ಭಾರತಕ್ಕೆ ಮಾತ್ರವಲ್ಲ ವಿಶ್ವಕ್ಕೂ ಒಂದು ಮೈಲಿಗಲ್ಲು. ಜಾಗತಿಕ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರಕ್ಕೆ ಇದು ವಿಶೇಷ ಕ್ಷಣಗಳಲ್ಲಿ ಒಂದೆನಿಸಿದೆ. ನಾಸಾ ಮತ್ತು ಇಸ್ರೋ ಜಂಟಿಯಾಗಿ ಅಭಿವೃದ್ಧಪಡಿಸಿರುವ ಸಿಂಥೆಟಿಕ್ ಅಪರ್ಚರ್ ರಾಡಾರ್ ಇದು. ಹೀಗಾಗಿ, ಇದಕ್ಕೆ NISAR (NASA ISRO Synthetic Aperture Radar) ಎಂದುಹೆಸರಿಡಲಾಗಿದೆ.

ನಿಸಾರ್ ಸೆಟಿಲೈಟ್‌ಅನ್ನು 1.5 ಬಿಲಿಯನ್ ಡಾಲರ್ ವೆಚ್ಚದಲ್ಲಿ ತಯಾರಿಸಲಾಗಿದೆ. ರಾಡಾರ್ ಇಮೇಜಿಂಗ್ ಸೆಟಿಲೈಟ್ ಇದು. ಹವಾಮಾನ ಬದಲಾವಣೆ ಮತ್ತು ನೈಸರ್ಗಿಕ ವಿಕೋಪ ಸಂದರ್ಭಗಳನ್ನು ಗಮನಿಸಲು ಈ ಉಪಗ್ರಹ ಉಪಯುಕ್ತವಾಗಲಿದೆ. ಇದರ ಜೀವಿತಾವಧಿ ಐದು ವರ್ಷ ಇರುವ ನಿರೀಕ್ಷೆ ಇದೆ.

## ಶರಣರ ವಿಚಾರಧಾರೆಗಳ ಮೂಲಕ ಮಾನವ ಮಹಾಮಾನವನಾಗಲು ಸಾಧ್ಯ



**ಚನ್ನಗಿರಿ :** ಶ್ರಾವಣ ಮಾಸದಲ್ಲಿ ಸತ್ಸಂಗದಲ್ಲಿ ಬಾಗಿಯಾಗುವುದರಿಂದ ಮನಸ್ಸಿನ ಕೊಳೆಯನ್ನು ಹೋಗಲಾಡಿಸಿ ಶರಣರ ವಿಚಾರಧಾರೆಗಳ ಮೂಲಕ ಮಾನವ ಮಹಾಮಾನವನಾಗಲು ಸಾಧ್ಯ ಎಂದು ಪಾಂಡೋಮಟ್ಟಿ ವಿರಕ್ತ ಮಠದ ಡಾ.ಗುರುಬಸವ ಸ್ವಾಮಿಗಳು ಹೇಳಿದರು.

ಬುಧವಾರ ತಾಲೂಕಿನ ಮೇದುಗೊಂಡನಹಳ್ಳಿ ಗ್ರಾಮದ ಅಂಜನೇಯ ಸ್ವಾಮಿ ದೇಗುಲದ ಆವರಣದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 3 ನೇ ವರ್ಷದ ಶ್ರಾವಣ ಬಂತು ಅನುಭಾವ ತಂತು ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಕಾಯಕ ದಾಸೋಹ ಅರಿವು ಆಚಾರಗಳ ಮೂಲಕ ಶರಣರು ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದರು. ಶರಣರು ಶಾಂತಿಪ್ರಿಯರಾಗಿ ಅಂತರಂಗ ಮತ್ತು ಬಹಿರಂಗವನ್ನು ಶುದ್ದಿಗೊಳಿಸಿ ನಡೆ ನುಡಿ ಒಂದಾಗಿ ತಾತ್ವಿಕ ತಳಹದಿಯ ಮೇಲೆ ವಚನಗಳ ಮೂಲಕ ಸಮಾಜವನ್ನು ನಿರ್ಮಾಣ ಮಾಡಿದ್ದರು. ಬಸವತತ್ವನ್ನು ಬಾರತದ ಸತ್ವ ಎಂದು ಬಸವಣ್ಣನವರ ವಿಚಾರಧಾರೆಗಳನ್ನು ಅನುಭಾವದ ನುಡಿಗಳ ಮೂಲಕ ಉಸಿರಾಗಿಸಿಕೊಂಡವರಾಗಿದ್ದರು ಎಂದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಗೀತಾ ಬಸವರಾಜ್ ವಚನಸಾಹಿತ್ಯ ಮತ್ತು ಶರಣೆಯರು ಎಂಬ ವಿಷಯದ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ತುಮ್‌ಕೋಸ್ ಅಧ್ಯಕ್ಷ ಎಚ್. ಎಸ್.ಶಿವಕುಮಾರ್, ನಿರ್ದೇಶಕ ಟಿ.ವಿ. ರಾಜು ಪಟೇಲ್, ಕೆ.ಪಿ.ಸಿ.ಸಿ. ಸದಸ್ಯ ವಡ್ನಾಳ್ ಜಗದೀಶ್, ಎಂ.ಯು.ಚನ್ನಬಸಪ್ಪ, ಕಾಕನೂರು ನಾಗರಾಜ್ ಇತರರು ಹಾಜರಿದ್ದರು.

## ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಹಾಸನ :** ಕೃಷಿ ಉತ್ಪಾದನೆ ಮತ್ತುಉತ್ಪಾದಕತೆ ಹೆಚ್ಚಿಸಲುಕೃಷಿಯಲ್ಲಿ ಶ್ರಮಿಸುವರೈತರು, ರೈತ ಮಹಿಳೆಯರನ್ನು ಗುರುತಿಸಿ ಕೃಷಿ ಪ್ರಶಸ್ತಿ ನೀಡಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸುವ ಸಲುವಾಗಿ ಅರ್ಹರೈತರು, ರೈತ ಮಹಿಳೆಯರಿಂದ ಕೃಷಿ ಪ್ರಶಸ್ತಿಗೆ ತಾಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ವಿವಿಧ ಬೆಳೆಗಳಲ್ಲಿ ಬೆಳೆ ಸ್ಪರ್ಧೆಗೆಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹಾಸನ ಜಿಲ್ಲೆಯಲ್ಲಿ ಪ್ರಸ್ತುತ ಮುಂಗಾರಿನಲ್ಲಿತಾಲೂಕು, ಜಿಲ್ಲಾ ಮಟ್ಟದ ಸ್ಪರ್ಧೆಗೆರಾಗಿ (ಮಳೆಯಾಶ್ರಿತ), ಭತ್ತ (ನೀರಾವರಿ), ಬೆಳೆಗಳನ್ನು ಸ್ಪರ್ಧೆಗೆಆಯ್ಕೆ ಮಾಡಲಾಗಿದೆ.

ಸ್ವತಃ ಬೇಸಾಯದಲ್ಲಿತೊಡಗಿ ಕ್ರಿಯಾಶೀಲ ಕೃಷಿಕರಾಗಿರುವ, ಕನಿಷ್ಠ ಒಂದುಎಕರೆ ವಿಸ್ತೀರ್ಣ ಹೊಂದಿರುವರೈತರು, ರೈತ ಮಹಿಳೆಯರು ಕೃಷಿ ಪ್ರಶಸ್ತಿಗೆ ಭಾಗವಹಿಸಲು ಪಹಣಿ, ಜಾತಿ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ), ಫೋಟೋ ದಾಖಲಾತಿಗಳೊಂದಿಗೆ , ಕೃಷಿ ಇಲಾಖೆಯಕೆ–ಕಿಸಾನ್‌ತಂತ್ರಾಂಶದಲ್ಲಿ ನೀಡಿರುವ ಕೃಷಿ ಪ್ರಶಸ್ತಿಯ ಅರ್ಜಿ ನಮೂನೆಯಲ್ಲಿತಮ್ಮಎಫ್.ಐ.ಡಿ. ಅನ್ನು ಬಳಸಿಕೊಂಡು Citizen Login ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಅಥವಾ ಹತ್ತಿರದರೈತ ಸಂಪರ್ಕಕೇಂದ್ರ, ಸೇವಾ ಕೇಂದ್ರದ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದ 'ಅರ್ಜಿ ನೊಂದಣಿಗೆಯಾವುದೇ ಶುಲ್ಕವಿರುವುದಿಲ್ಲ. ಕೃಷಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಲುಆಗಸ್ಟ್31 ಅಂತಿಮ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಕಚೇರಿ/ ಹೋಬಳಿ ರೈತ ಸಂಪರ್ಕಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ದೇಗುಲ ಕಟ್ಟುವ ಒಗ್ಗಟ್ಟಿನಂತೆ ಸುಸಜ್ಜಿತ ಶಾಲೆಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ಅಗತ್ಯ



**ದಾವಣಗೆರೆ:** ದೇವಸ್ಥಾನ ಕಟ್ಟಲು ತೋರುವ ಒಗ್ಗಟ್ಟು ಸುಸಜ್ಜಿತ ಶಾಲೆ ನಿರ್ಮಾಣ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡಿದರೆ ರಾಜ್ಯದಲ್ಲಿ ಮಾದರಿ ಶಾಲೆಯನ್ನಾಗಿಸಲು ಸಾಧ್ಯ ಎಂದು ಇನ್ ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕರೂ ಆದ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಅಭಿಮತ ವ್ಯಕ್ತಪಡಿಸಿದರು.

ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಗಡಿಮಾಕುಂಟೆ ಗ್ರಾಮದಲ್ಲಿ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆದ ಶ್ರೀ ಬಸವೇಶ್ವರಸ್ವಾಮಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯ ಪ್ರತಿಯೊಂದು ಗ್ರಾಮಗಳಲ್ಲಿಯೂ ದೇವಸ್ಥಾನ ಕಟ್ಟಲು ವಿಶೇಷ ಆಸಕ್ತಿ, ಒಗ್ಗಟ್ಟು, ಶಕ್ತಿ, ಶ್ರಮ ವಹಿಸುತ್ತಾರೆ. ಜಾತಿ ಬೇಧ ಮರೆತು ಎಲ್ಲರೂ ಒಂದಾಗಿ ದೇವಸ್ಥಾನ ಕಟ್ಟಬೇಕು ಎಂಬ ಅಪೇಕ್ಷೆ ಒಳ್ಳೆಯದು. ದೇವಸ್ಥಾನ ಕಟ್ಟಿದ ಮೇಲೆ ಮುಂದಿನ ದಿನಗಳಲ್ಲಿಯೂ ಗ್ರಾಮದ ಜನರಲ್ಲಿ ಅದೇ ಉತ್ಸಾಹ, ಪ್ರೀತಿ, ಒಗ್ಗಟ್ಟು, ಶಕ್ತಿ ಇರಬೇಕು. ಅದೇ ರೀತಿಯಲ್ಲಿ ದೇಗುಲನ ನಿರ್ಮಾಣಕ್ಕೆ ತೋರುವ ಒಗ್ಗಟ್ಟು, ಪರಿಶ್ರಮ, ಆಸಕ್ತಿ ಸುಸಜ್ಜಿತ ಶಾಲೆ ಹಾಗೂ ಸರ್ಕಾರಿ ಶಾಲೆಗಳ ಗುಣಮಟ್ಟದತ್ತ ಯೋಚಿಸಬೇಕಾದ ಅಗತ್ಯತೆ ಇದೆ ಎಂದು ಪ್ರತಿಪಾದಿಸಿದರು.

ಸರ್ಕಾರಿ ಶಾಲೆಗಳಲ್ಲಿ ಓದಿ ಬರುವ ವಿದ್ಯಾರ್ಥಿಗಳಿಗೆ ಐಎಎಸ್, ಐಪಿಎಸ್ ಕಷ್ಟವಾಗುತ್ತಿದೆ. ಇದಕ್ಕೆ ಕಾರಣ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ಸಿಗದಿರುವುದು ಹಾಗೂ ಅಸಮಾನತೆ ಇರುವುದೇ ಕಾರಣವಾಗಿದೆ. ಹಾಗಾಗಿ, ದೇವಸ್ಥಾನ ಕಟ್ಟುವಷ್ಟೇ ಆಸಕ್ತಿ ಉತ್ಸಾಹ ಶಾಲೆಗಳ ಅಭಿವೃದ್ಧಿಗೂ ಬೇಕು. ನಮ್ಮ ಸಂಸ್ಥೆಯಲ್ಲಿ ಓದಿದ ಬಡ ಮತ್ತು ಶ್ರೀಮಂತ ಮಕ್ಕಳು ಐಎಎಸ್, ಐಪಿಎಸ್ ಅಧಿಕಾರಿಗಳಾಗಿದ್ದಾರೆ. ಸರ್ಕಾರಿ ಶಾಲೆಗಳ ಮಕ್ಕಳಿಗೆ ನಗರ ಪ್ರದೇಶದ ಮಕ್ಕಳಂತೆ ಶಿಕ್ಷಣ ಸಿಕ್ಕರೆ ಸಾಧನೆ ಕಷ್ಟವಾಗದು. ದೇವಸ್ಥಾನ ನಿರ್ಮಾಣದಂತೆ ಶಾಲೆಗಳ ನಿರ್ಮಾಣವೂ ಆಗಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಯೋಚಿಸಬೇಕಿದೆ. ಆದ್ರೆ, ಗಟ್ಟಿ ಮನಸ್ಸು ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಧರ್ಮ ಮತ್ತು ಸಂಸ್ಕೃತಿ ಉಳಿಯಬೇಕು. ಜೊತೆಗೆ ಶಿಕ್ಷಣಕ್ಕೂ ಹೆಚ್ಚಿನ ಮಹತ್ವ ನೀಡಬೇಕಿದೆ. ಶಿಕ್ಷಣದ ಮೂಲಕ ಧರ್ಮ ಮತ್ತು ಸಂಸ್ಕೃತಿ ಅರಿವು ಮಕ್ಕಳಲ್ಲಿ ಮೂಡಿಸಬೇಕಾದ ಅಗತ್ಯತೆ ಇದೆ. ಧರ್ಮದಂತೆ ನಡೆದರೆ ಸಂಸ್ಕೃತಿ ಬೆಳೆಸಿಕೊಂಡರೆ ಸಹಬಾಳ್ವೆ ಸಾಧ್ಯವಾಗುತ್ತದೆ. ಈ ಗ್ರಾಮದಲ್ಲಿನ ಮಕ್ಕಳು ಐಎಎಸ್, ಐಪಿಎಸ್ ಆಗುವಂತೆ ಭಗವಂತ ಶಕ್ತಿ ನೀಡಲಿ ಎಂದು ಹಾರೈಸಿದರು.

ಕೊಟ್ಟೂರು ಚಾನೂಕೊಟಿ ಮಠದ ಷ.ಬ್ರ. ಶ್ರೀ ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಜಗಳೂರು ಶಾಸಕ ಬಿ. ದೇವೇಂದ್ರಪ್ಪ ರವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಕೇಂದ್ರದ ಮಾಜಿ ಸಚಿವ ಹಾಗೂ ಮಾಜಿ ಸಂಸದ ಡಾ. ಜಿ. ಎಂ. ಸಿದ್ದೇಶ್ವರ, ಮಾಜಿ ಶಾಸಕರಾದ ಎಸ್. ವಿ. ರಾಮಚಂದ್ರಪ್ಪ, ಹೆಚ್. ಪಿ. ರಾಜೇಶ್, ಕೆ. ತಿಪ್ಪೇಸ್ವಾಮಿ. ಹೊಸಪೇಟೆ ಅಜ್ಜಯ್ಯ ನಾಡಗೇರ, ಹೆಚ್. ನಾಗರಾಜ, ಬಿಸ್ತುವಳ್ಳಿ ಬಾಬಣ್ಣ, ಗ್ರಾ. ಸದಸ್ಯರಾದ ಬೋರಮ್ಮ, ಜೆ. ಎಂ. ತಿಪ್ಪೇಸ್ವಾಮಿ, ಕೆ. ಪಿ. ಪಾಲಯ್ಯ, ಎಸ್.ಕೆ. ಮಂಜುನಾಥ, ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಪಲ್ಲಗಟ್ಟೆ ಮಹೇಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಸೊಕ್ಕೆ ನಾಗರಾಜ್ ಹಲವರು ಮುಖಂಡರು ಉಪಸ್ಥಿತರಿದ್ದರು.

### ವೈಮನಸ್ಸು ದೂರವಾಗಿಸುವ ತಾಣ: ಜಿಬಿವಿ

**ದೇವಸ್ಥಾನ ಸಾಂಸ್ಕೃತಿಕ ಹಾಗೂ ಶಕ್ತಿ ಕೇಂದ್ರ. ಊರಲ್ಲಿರುವ ವೈಮನಸ್ಸು, ಬಿರುಕು ದೂರ ಮಾಡಿ ಒಂದು ಮಾಡುವ ಶಕ್ತಿ ಈ ಪವಿತ್ರ ತಾಣಕ್ಕಿದೆ. ನಮ್ಮೆಲ್ಲರ ಭಿನ್ನಾಭಿಪ್ರಾಯ ತೊಲಗಿಸಿ ಒಂದಾಗಿಸುವ ಶ್ರದ್ಧಾ ಭಕ್ತಿಯ ಸ್ಥಳ. ನಾನು ಕಳೆದ ಲೋಕಸಭೆ ಚುನಾವಣೆ ವೇಳೆ ಈ ಗ್ರಾಮಕ್ಕೆ ಬಂದಿದ್ದೆ. ಎಷ್ಟೇ ಕಾರ್ಯಕ್ರಮಗಳಿದ್ದರೂ ಜನರ ಪ್ರೀತಿಗೆ ಮಣಿದು ಬಂದಿರುವೆ. ರಾಜ್ಯದ ಸುತ್ತ ಪ್ರಯಾಣ ಮಾಡುತ್ತಿದ್ದೇನೆ. ನಿಮ್ಮೆಲ್ಲರ ಆರೈಕೆ, ಆಶೀರ್ವಾದ ನಮ್ಮಂಥವರ ಮೇಲೆ ಇರಲಿ ಎಂದು ಮನವಿ ಮಾಡಿದರು.**

## ಮಾನವ ಕಳ್ಳಸಾಗಾಣಿಕೆ ತಡೆಗಟ್ಟಲು ಕಾಳಜಿವಹಿಸಿ



**ಹಾಸನ :** ಮಾನವ ಕಳ್ಳಸಾಗಾಣಿಕೆಯಾಗದಂತೆ ತಡೆಗಟ್ಟುವುದುಪ್ರತಿಯೊಬ್ಬರಜವಾಬ್ದಾರಿಯು ಾಗಿದೆ, ಈ ನಿಟ್ಟಿನಲ್ಲಿ ಹೆಚ್ಚಿನ ಕಾಳಜಿವಹಿಸಿ, ಜಿಲ್ಲೆಯಲ್ಲಿ ಮಾನವ ಕಳ್ಳ ಸಾಗಾಣಿಕೆಯಾಗದಂತೆ ಎಚ್ಚರವಹಿಸಲು ಪ್ರಧಾನಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿಅವರು ತಿಳಿಸಿದ್ದಾರೆ.ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಸಮಾಜಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದ ಹಾಸನಾಂಬ ಕಲಾಕ್ಷೇತ್ರದಲ್ಲಿಂದು ಹಮ್ಮಿಕೊಂಡಿದ್ದ ಮಾನವ ಕಳ್ಳಸಾಗಾಣಿಕೆ ತಡೆ ದಿನಾಚರಣೆ ಹಾಗೂ ಜಾಗೃತಿ, ಕಾನೂನು ಹರಿವುಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದಅವರುಸಂವಿಧಾನದಲ್ಲಿ ಪ್ರತಿಯೊಬ್ಬರಿಗೂತಮ್ಮಇಷ್ಟದಂತೆ ಬದುಕುವ ಹಕ್ಕು ಇದೆ, ಈ ಹಿನ್ನೆಲೆಯಲ್ಲಿ ಉತ್ತಮ ಅವಕಾಶ ಕಲ್ಪಿಸಿಕೊಡಬೇಕು ಎಂದರು.ಪ್ರತಿಯೊಂದು ಮಗುವು ವಿದ್ಯೆಯಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿಯಾಗಿದೆ.18 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕೆಲಸಗಳಿಗೆ ಬಳಕೆಮಾಡಿ ಕೊಳ್ಳುವಂತಿಲ್ಲ, ಹಲವು ಆಯಾಮಗಳನ್ನು ವಿಮರ್ಶೆ ಮಾಡಿದಾಗ ಭೀಕ್ಷಾಟನೆ, ಅನೈತಿಕ ಚಟುವಟಿಕೆಗಳಿಗೆ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಗಮನಕ್ಕೆ ಬಂದಿರುತ್ತದೆ ಎಂದ 'ಅವರು ಪ್ರತಿಯೊಬ್ಬರು ತಮ್ಮ ಸುತ್ತ ಮುತ್ತ ಗಮನಿಸಿ ಇಂತಹ ಚಟುವಟಿಕೆಗಳನ್ನು ತಡೆಯಲ ಎಲ್ಲರೂಕೈಜೋಡಿಸಬೇಕು ಎಂದರು.ಜಿಲ್ಲಾಧಿಕಾರಿ ಲತಾಕುಮಾರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಮಾನವ ಕಳ್ಳಸಾಗಾಣಿಕೆ ಗುರುತರವಾದ ಸಾಮಾಜಿಕ ಪಿಡುಗು ಇದನ್ನು ಗಂಭೀರವಾಗಿ ಪರಿಗಣಿಸಿ, ತಡೆಗೆ ಮೊದಲ ಆದ್ಯತೆ ನೀಡಬೇಕುಎಂದರು.

ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕಅಧಿಕಾರಿಬಿ. ಆರ್ ಪೂರ್ಣಿಮಾಅವರು ಪ್ರತಿಜ್ಞಾವಿಧಿ ಬೋಧಿಸಿದರು.ಹಿರಿಯ ವಕೀಲರಾದ ಬಿ. ಚಂದ್ರಶೇಖರ್‌ಅವರುಕಾರ್ಯಕ್ರವ ಕುರಿತುಉಪನ್ಯಾಸ ನೀಡಿದರು.ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿಜಿ.ಕೆ, ಹೆಚ್ಚುವರಿಪೊಲೀಸ್ ವರಿಷ್ಠಾಧಿಕಾರಿತಮ್ಮಯ್ಯ, ಜಿಲ್ಲಾ ವಕೀಲರ ಸಂಘದಅಧ್ಯಕ್ಷರಾದಮೊಗಣ್ಣಗೌಡ, ಜಿಲ್ಲಾ ಆರೋಗ್ಯಮತ್ತುಕುಟುಂಬ ಕಲ್ಯಾಣಾಧಿಕಾರಿಡಾ॥ , ಜಿಲ್ಲಾಕಾರ್ಮಿಕಅಧಿಕಾರಿಯಮುನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಾದಧರಣಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಜನ ಸ್ಪಂದನ ಕಾರ್ಯಕ್ರಮ

**ಹಾಸನ :** ಹಾಸನ ತಾಲ್ಲೂಕುಎಲ್ಲಾರೈತಾಪಿ ವರ್ಗದವರಿಗೆ ಸಾರ್ವಜನಿಕರಿಗೆ ಹಾಗೂ ಗ್ರಾಮೀಣಜನತೆಗೆ ಸಾಮಾಜಿಕ ಶೈಕ್ಷಣಿಕ ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗೆ ವಿವಿಧ ಇಲಾಖೆಗಳಲ್ಲಿ ದೊರೆಯಬೇಕಾದ ಸೌಲಭ್ಯಗಳು ನಿಗಧಿತ ಅವಧಿಯೊಳಗೆ ದೊರೆಯದೆ

ಇದ್ದಾಗತಮ್ಮ ಅಹವಾಲನ್ನು ದಾಖಲಿಸಲು ಸರ್ಕಾರವು ಏಕೀಕೃತ ಸಾರ್ವಜನಿಕದೂರು ನಿವಾರಣಾತಂತ್ರಾಂದಲ್ಲಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ್ದು ಸಾರ್ವಜನಿಕರುತಮ್ಮ ಅಹವಾಲನ್ನು ಸಲ್ಲಿಸಲು ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಒಂದೆಡೆ ಇರುವುದರಿಂದ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ನೇರವಾಗಿತಮ್ಮ ಅಹವಾಲನ್ನು ದಾಖಲಿಸಲು ತಾಲ್ಲೂಕು ಮಟ್ಟದಲ್ಲಿಆ.02 ರಂದು ಬೆಳಿಗ್ಗೆ 10 ಗಂಟೆಗೆ ತಾಲ್ಲೂಕು ಪಂಚಾಯಿತಿಕಾರ್ಯಾಲಯ ಹಾಸನ ಇಲ್ಲಿಜನಸ್ಪಂದನ ಕಾರ್ಯಕ್ರಮವನ್ನು ಆಯೋಜಿಸಿದ್ದು ಸದರಿ ದಿನದಂದು ಸಾರ್ವಜನಿಕರು ಖುದ್ದು ಹಾಜರಾಗಿತಮ್ಮ ಅಹವಾಲನ್ನು ಸಲ್ಲಿಸಲುಹಾಸನ ತಾಲ್ಲೂಕು ತಹಸೀಲ್ದಾರ್ ತಿಳಿಸಿದ್ದಾರೆ.

## ಹುಲಿ ದಾಳಿಗೆ ಮಹಿಳೆ ಬಲಿ

ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ್ ರೇಂಜ್ ಬಳಿ ಹುಲಿ ದಾಳಿಗೆ ಮಹಿಳೆಯೊಬ್ಬರು ಬಲಿಯಾಗಿದ್ದಾರೆ. ಕಳೆದ ಒಂಬತ್ತು ದಿನಗಳಲ್ಲಿ ಇದು ಎರಡನೇ ಘಟನೆಯಾಗಿದೆ. ಮೃತ ಮಹಿಳೆಯನ್ನು ದೇಶಿಪುರ ಕಾಲೋನಿಯ ಪುಟ್ಟಮ್ಮ ಎಂದು ಗುರುತಿಸಲಾಗಿದೆ. ದನ ಮೇಯಿಸುತ್ತಿದ್ದಾಗ ದಾಳಿ ಮಾಡಿದ್ದ ಹುಲಿ ನಂತರ ಸ್ಥಳದಿಂದ 100 ಮೀಟರ್ ದೂರ ಎಳೆದೊಯ್ದಿತ್ತು. ಹುಲಿ ದಾಳಿಯಿಂದ ಮಹಿಳೆ ಮೃತಪಟ್ಟಿದ್ದು ಹುಲಿಯನ್ನು ಸೆರೆಹಿಡಿಯಲು ಕಾರ್ಯಾಚರಣೆ ನಡೆಸಲಾಗುವುದು ಎಂದು ಬಂಡಿಪುರ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರನ್ ಹೇಳಿದರು.

## ನಂದಕಿಶೋರ್ ವಿರುದ್ಧ ವಂಚನೆ ಆರೋಪ

**ಬೆಂಗಳೂರು :** ಕನ್ನಡದ ನಿರ್ದೇಶಕ ನಂದ ಕಿಶೋರ್ ವಿರುದ್ಧ 22 ಲಕ್ಷ ರೂ ವಂಚನೆ ಮಾಡಿದ ಆರೋಪ ಕೇಳಿಬಂದಿದೆ, ಈ ಸಂಬಂಧ ನಟ ಶಬರೀಶ್ ಕರ್ನಾಟಕ ಫಿಲಂ ಚೇಂಬರ್ಗೆ ದೂರು ನೀಡುವುದಾಗಿ ಹೇಳಿದ್ದಾರೆ. ರನ್ನ, ಮಾಣಿಕ್ಯ, ಪೊಗರು, ಮುಕುಂದ ಮುರಾರಿ, ಅಧ್ಯಕ್ಷ ಸೇರಿದಂತೆ ಹಲವು ಚಿತ್ರಗಳನ್ನು ನಿರ್ದೇಶಸಿರುವ ನಂದ ಕಿಶೋರ್ 22 ಲಕ್ಷ ರೂಗಳನ್ನು ಪಡೆದುಕೊಂಡಿದ್ದು ಈಗ ಹಣ ಕೊಡದೆ ಸತಾಯಿಸುತ್ತಿದ್ದಾರೆ. ಹಣ ವಾಪಸ್ ಕೊಡುವಂತೆ ಕೇಳಿದರೆ ನಟ ಸುದೀಪ್ ಹೆಸರು ಬಳಸಿ ನನಗೆ ಬೆದರಿಕೆ ಸಹ ಹಾಕಿದ್ದಾರೆ ಎಂದು ಆರೋಪಿಸಿದರು.

## ಆಗಸ್ಟ್ 1ರಂದು ವ್ಯಸನಮುಕ್ತ ದಿನಾಚರಣೆ

**ಚಿಕ್ಕಮಗಳೂರು: ಜು. 31:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜ್ಞಾನ ಜ್ಯೋತಿ ವಿದ್ಯಾ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಆಗಸ್ಟ್ 1 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಟಿ.ಎಂ.ಎಸ್. ರೋಟರಿ ಹಾಲ್‌ನಲ್ಲಿ ಶ್ರೀ ಮ.ನಿ.ಪ್ರ. ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನದ ಅಂಗವಾಗಿ ವ್ಯಸನಮುಕ್ತ ದಿನಾಚರಣೆ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಉಪಸ್ಥಿತರಿರಲಿದ್ದು, ಇಂಧನ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಜೆ.ಜಾರ್ಜ್ ಕಾರ್ಯಕ್ರಮ ಉದ್ಘಾಟಿಸಲಿರುವರು, ಕರ್ನಾಟಕ ವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶೃಂಗೇರಿ ಕ್ಷೇತ್ರದ ಶಾಸಕ ಟಿ.ಡಿ.ರಾಜೇಗೌಡ, ಕರ್ನಾಟಕ ಅನಿವಾಸಿ ಭಾರತೀಯ ಕೋಶದ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶೀನಿವಾಸ್ ಭಾಗವಹಿಸಲಿದ್ದು, ಶಾಸಕ ಹೆಚ್.ಡಿ. ತಮ್ಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ರಾಜ್ಯಸಭೆ ಸಂಸದ ಜೈರಾಮ್ ರಮೇಶ್, ಹಾಸನ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೇಯಸ್ ಎಂ.ಪಟೇಲ್, ವಿಧಾನ ಪರಿಷತ್ ಶಾಸಕ ಎಸ್.ಎಲ್.ಭೋಜೆಗೌಡ, ಶಾಸಕರಾದ ಜಿ.ಹೆಚ್.ಶ್ರೀನಿವಾಸ್, ಕೆ.ಎಸ್.ಆನಂದ್, ನಯನ ಮೋಟಮ್ಮ, ವಿಧಾನ ಪರಿಷತ್ ಸದಸ್ಯರುಗಳಾದ ಸಿ.ಟಿ.ರವಿ, ಡಾ.ಧನಂಜಯ್ ಸರ್ಜಿ, ಭದ್ರಾ ಕಾಡಾ ಅಧ್ಯಕ್ಷ ಡಾ.ಕೆ.ಪಿ.ಅಂಶುಮಂತ್ ಉಪಸ್ಥಿತರಿರುವರು.

# ದುಡಿಮೆಯಲ್ಲಿ ಕಠಿಣ ಪರಿಶ್ರಮವಿದ್ದರೆ ಯಶಸ್ಸು ಸಾಧ್ಯ: ಪ್ರಭಾ ಮಲ್ಲಿಕಾರ್ಜುನ್



**ದಾವಣಗೆರೆ:** ಅಂತರಂಗ ಮತ್ತು ಬಹಿರಂಗದಲ್ಲಿ ಗಂಗೆಯಂತೆ ಪರಿಶುದ್ಧತೆ ಕಾಪಾಡಿಕೊಂಡರೆ ಬದುಕು ಹಸನಾಗುತ್ತದೆ, ಹಾಗೆಯೇ ಕಾಯಕ ನಿಷ್ಠೆ ಪಾಲಿಸಿದರೆ ಜೀವನ ಸಮೃದ್ಧವಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಕೀಳರಿಮೆ ಬಿಟ್ಟು ಮಹಿಳೆಯರು ಸ್ವಾವಲಂಬನೆಗೆ ಮಹತ್ವ ನೀಡಿ ಸ್ತ್ರೀ ಶಕ್ತಿ ಮತ್ತು ಸ್ವಸಹಾಯ ಸಂಘಗಳ ಮೂಲಕ ಬಾಳಿನ ಬಲವರ್ಧನೆಗೆ ಶ್ರಮಿಸಬೇಕು ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕರೆ ನೀಡಿದರು.

ದಾವಣಗೆರೆ ಜಿಲ್ಲಾ ಗಂಗಾಮತಸ್ತರ(ಬೆಸ್ತರ) ಸಂಘ ಮತ್ತು ಶ್ರೀ ಗಂಗಾ ಪರಮೇಶ್ವರಿ ಜಯಂತೋತ್ಸವ ಸಮಿತಿ, ಹಳೇಪೇಟೆ, ದಾವಣಗೆರೆ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂದಿರದಲ್ಲಿ ಆಯೋಜಿಸಿದ್ದ ಗಂಗಾ ಪರಮೇಶ್ವರಿ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾಯಕ ಎಂದರೆ ಮನಸ್ಸಿಟ್ಟು ದುಡಿಯುವುದು. ದಾಸೋಹವೆಂದರೆ ದುಡಿದ ಅಲ್ಪಭಾಗವನ್ನು ನಾವು ಉಪಯೋಗಿಸಿಕೊಂಡು ಸಮಾಜದ ಇತರರಿಗೆ ಹಂಚುವುದಾಗಿದೆ. ಈ ರೀತಿ ಗಂಗಾಮತಸ್ಥ ಸಮಾಜ ಇದೆ.

ದುಡಿಮೆಯಲ್ಲಿ ಕಠಿಣ ಪರಿಶ್ರಮ ಮತ್ತು ಪ್ರಾಮಾಣಿಕತೆ ಇದ್ದರೆ ಯಶಸ್ಸು ಗಳಿಸಲು ಸಾಧ್ಯ ಇದನ್ನು ಮನಗಂಡು ಸಮಾಜ ಮುನ್ನಡೆಯಬೇಕು ಎಂದರು.

ಜನಪರ ಹಾಗೂ ಸಮಾಜಪರ ಚಿಂತನೆ ಮಾಡುವ ಗಂಗಾಮತಸ್ಥ ಸಮಾಜದವರು ಯುವ ಶಕ್ತಿಯನ್ನು ಪ್ರೋತ್ಸಾಹಿಸಿ ಮುಖಂಡತ್ವ ಬೆಳೆಸಲು ಸಹಕಾರ ನೀಡುವ ಅವಶ್ಯಕತೆ ಇದೆ.

ರಾಜಕೀಯ ಸಾಮಾಜಿಕ ಆರ್ಥಿಕವಾಗಿ ಪ್ರಬಲರಾಗಬೇಕು ಆಗ ಮಾತ್ರ ಮುನ್ನೆಲೆಗೆ ಬರಲು ಸಾಧ್ಯ ಎಂದರು. ವೃತ್ತಿ ಆಧಾರಿತ ಸಮಾಜಗಳು ಎದುರಿಸುವ ನೋವು, ಸಂಕಟಗಳನ್ನು ಎದುರಿಸಲು ಸಂಘಟನೆ ಅಗತ್ಯ. ಎಲ್ಲರೂ ಸಂಘಟನೆಯಿಂದ ಸಹಬಾಳ್ವೆ ನಡೆಸಬೇಕು. ಸುಖ ಶಾಂತಿಯುಳ್ಳ ಜೀವನಕ್ಕೆ ಆದರ್ಶ ಮೌಲ್ಯಗಳ ಪಾಲನೆ ಅತ್ಯಗತ್ಯ.

ಮಾನವೀಯ ಮೌಲ್ಯಗಳು ಕ್ಷೀಣಿಸುತ್ತಿರುವ ಇಂತಹ ಸಂದರ್ಭದಲ್ಲಿ ಧಾರ್ಮಿಕ ಜಾಗೃತಿಯ ಅಗತ್ಯವಿದೆ. ಸಂತೃಪ್ತ ಮತ್ತು ಸಮೃದ್ಧ ಬುದುಕಿಗೆ ನಿಜವಾದ ಧರ್ಮಾಚರಣೆ ಮುಖ್ಯ. ಈ ನಿಟ್ಟಿನಲ್ಲಿ ಶ್ರೀ ಗಂಗಾಪರಮೇಶ್ವರಿ ಜಯಂತ್ಯೋತ್ಸವ ಆಯೋಜಿಸಿರುವುದು ಒಂದು ಒಳ್ಳೆಯ ಕಾರ್ಯವಾಗಿದೆ. ದೇವರು ನಮ್ಮ ನಂಬಿಕೆ. ಪೂಜೆ ನಮ್ಮ ಆಚರಣೆ. ಆಚರಣೆಗಳ ಮೂಲಕ ನಂಬಿಕೆಗಳನ್ನು ಉಳಿಸುವುದು ಇಂದಿನ ಗಂಗಾಪರಮೇಶ್ವರಿ ಜಯಂತ್ಯೋತ್ಸವದ ಮಹತ್ವವಾಗಿದೆ ಎಂದರು.

ಆರಂಭದಲ್ಲಿ ಅಂಬಿಗರ ಚೌಡಯ್ಯನವರ– "ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ, ಉಡಲಾದರೆ ಇಡುವ ಚಿಂತೆ ವಚನವನ್ನು ಸಂಸದರು ವಾಚಿಸಿದರು.

ಈ ವೇಳೆ ದಾವಣಗೆರೆ ಜಿಲ್ಲಾ ಗಂಗಾಮತಸ್ತರ(ಬೆಸ್ತರ) ಸಂಘದ ಅಧ್ಯಕ್ಷರಾದ ಬಿ.ಕೆ.ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು, ಕಾರ್ಯದರ್ಶಿ ಉಮೇಶ್ ಸ್ವಾಗತಿಸಿದರು, ಜಯಂತಿ ಕಾರ್ಯಕ್ರಮದ ಅಧ್ಯಕ್ಷ ಲಿಂಗರಾಜು ಹಾವನೂರು ಪ್ರಾಸ್ತಾವಿಕವಾಗಿ ಮಾತನಾಡಿದರು, ಗಂಗಾಮತ ನೌಕರ ಸಂಘದ ಅಧ್ಯಕ್ಷ ಮಹಾಂತೇಶ್ ನಿಟ್ಟೂರು ನಿರೂಪಿಸಿದರು.

# ಮನಸ್ಸು ಮತ್ತು ದೇಹ ಸದೃಢವಾಗಿರಲು ಯೋಗ ಮುಖ್ಯ: ವೀರೇಂದ್ರ ಪಪ್ಪಿ



**ಚಿತ್ರದುರ್ಗ :** ಮನಸ್ಸು ಮತ್ತು ದೇಹ ಸದೃಢವಾಗಿ ಇರಬೇಕಾದರೆ ಯೋಗ ಅತ್ಯಂತ ಮುಖ್ಯ, ಹಾಗಾಗಿ ಯೋಗವನ್ನು ಜೀವನದ ಉದ್ದಕ್ಕೂ ರೂಡಿಸಿಕೊಳ್ಳಿ ಎಂದು ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ತಿಳಿಸಿದರು.

ನಗರದ ಮದಕರಿ ಸರ್ಕಲ್ ಬಳಿ ಇರುವ ಸಾರ್ವಜನಿಕ ಪಾರ್ಕ್‌ನಲ್ಲಿ ಶುಕ್ರವಾರ ಶ್ರಮಜೀವಿ ಕಟ್ಟಡ ಮತ್ತು ಕೂಲಿ ಕಾರ್ಮಿಕರ ಸೇವಾ ಪಡೆ ಸಂಘಟನೆ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು, ಪರಿಸರ ಮಾನವನ್ನ ಜೀವನಕ್ಕೆ ಅತೀ ಮುಖ್ಯ, ನಮ್ಮ ಸುತ್ತಮುತ್ತಲಿನ ಉತ್ತಮ ಪರಿಸರವನ್ನು ರಕ್ಷಿಸಬೇಕಿದೆಂದು ಹೇಳಿದರು.

ಮನುಷ್ಯನಿಗೆ ಊಟ, ನಿದ್ರೆ, ಯೋಗ ಇವುಗಳು ಎಷ್ಟು ಮುಖ್ಯವೋ ದೇಹದ ಸಮತೋಲನ ಕಾಪಾಡುವುದು ಅಷ್ಟೇ ಮುಖ್ಯ ಹಾಗಾಗಿ ಪ್ರತಿಯೊಬ್ಬರೂ ಕ್ರೀಡಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಿ ದೇಹವನ್ನು ಹೊಂದಿಸಿಕೊಳ್ಳಬೇಕು ಎಂದರು.

ಲೇಖಕ ಆನಂದ್ ಕುಮಾರ್ ಮಾತಾಡಿ ಗಾಳಿ, ಬೆಳಕು, ನೀರು ಮಾನವನ ಕುಲಕ್ಕೆ ಅತೀ ಮುಖ್ಯ ಇವುಗಳ ಶುದ್ಧೀಕರಣ ನಮ್ಮ ಕೈಯಲ್ಲಿ ಇದೆ ಹಾಗಾಗಿ ಪರಿಸರವನ್ನು ನಿರ್ಮಿಸಬೇಕಿದೆ ಮನೆ ಸುತ್ತ ಮುತ್ತಲಿನ ಮತ್ತು ಹಾಗೂ ಹೊಲಗಳ ಬದುವಿನಲ್ಲಿ ಮರಗಳನ್ನು ನೆಡಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುರುಘಾ ಮಠ ಬಸವಕುಮಾರ್ ಶ್ರೀಗಳು, ಶ್ರಮಜೀವಿ ಕಟ್ಟಡ ಮತ್ತು ಕೂಲಿ ಕಾರ್ಮಿಕರ ಸೇವಾ ಪಡೆ ಸಂಘಟನೆ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ಪಾರ್ಥ, ಟಿಪ್ಪು ಸುಲ್ತಾನ್ ಸಂಘಟನೆಯ ರಾಜ್ಯಾಧ್ಯಕ್ಷ ಖಾಸಿಂ ಅಲಿ, ಜಯಣ್ಣ, ನವೀನ್, ಕುಮಾರ್, ರಂಗಸ್ವಾಮಿ ಹಾಗೂ ಇತರರು ಇದ್ದರು.

# ಹೊರನಾಡು ಕ್ಷೇತ್ರದ ಸಮಾಜಮುಖಿ ಕಾರ್ಯಗಳು ಶ್ಲಾಘನೀಯ : ನಯನ



**ಮೂಡಿಗೆರೆ:** ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಶ್ರೀ ಕ್ಷೇತ್ರ ಹೊರನಾಡಿನ ಅನ್ನಪೂರ್ಣೇಶ್ವರಿ ದೇವಾಲಯ ಖಾಸಗಿ ದೇವಾಲಯವಾಗಿದ್ದರೂ ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಮೂಡಿಗೆರೆ ಕ್ಷೇತ್ರದ ಶಾಸಕಿ ನಯನ ಮೋಟಮ್ಮ ತಿಳಿಸಿದರು.

ಅವರು ಕಳಸ ತಾಲ್ಲೂಕಿನ ಶ್ರೀಕ್ಷೇತ್ರ ಹೊರನಾಡು ಆಧಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ದೇವಾಲಯದ ಲಲಿತಕಲಾ ಮಂಟಪದಲ್ಲಿ ಶ್ರೀ ಕ್ಷೇತ್ರದ ಗ್ರಾಮೀಣಾಭಿವೃದ್ಧಿ ಯೋಜನೆಗಳಡಿಯಲ್ಲಿ ಪರಿಕರಕ ಮತ್ತು ಹಣ್ಣಿನ ಗಿಡಗಳ ವಿತರಣಾ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಕ್ಷೇತ್ರ ಹೊರನಾಡಿನ ಧರ್ಮಕರ್ತರು 1992 ರಿಂದಲೂ ಜಾರಿಗೆ ತಂದಿರುವ ವಿವಿಧ ಯೋಜನೆಗಳು ದಿನದಿಂದ ದಿನಕ್ಕೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದರು.

ಇಂಥಹ ಧಾರ್ಮಿಕ ಕಾರ್ಯವನ್ನು ಇತರೆ ಪುಣ್ಯಕ್ಷೇತ್ರಗಳು ಅಳವಡಿಸಿಕೊಂಡಲ್ಲಿ ಸರ್ಕಾರದ ಹೊರೆ ಇಳಿಸಿದಂತಾಗುತ್ತದೆ, ಶ್ರೀ ಕ್ಷೇತ್ರವು ಹಲವಾರು ವರ್ಷಗಳಿಂದ ಜನಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು.

ಧರ್ಮಕರ್ತ ಡಾ. ಜಿ.ಭೀಮೇಶ್ವರ ಜೋಷಿ ಮಾತನಾಡಿ, ಕರ್ನಾಟಕದಲ್ಲಿ ಪ್ರಪ್ರಥಮ ಶಾಲಾ ಮಕ್ಕಳಿಗೆ ಬಿಸಿಊಟ ಯೋಜನೆ 1958 ರಿಂದಲೇ ಶ್ರೀಕ್ಷೇತ್ರ ಪ್ರಾರಂಭಿಸಿದ್ದು ಮಾತ ಅನ್ನಪೂರ್ಣೇಶ್ವರಿ ಆಶೀರ್ವಾದ ಎಂದರೆ ತಪ್ಪಾಗಲಾರದು ಅಂದಿನಿಂದ ಇಂದಿನವರೆಗೂ ಮತ್ತು ಮುಂದೆಯೂ ಈ ಯೋಜನೆ ಮುಂದುವರೆಸಿಕೊಂಡು ಹೋಗುವುದಾಗಿ ಹಾಗೂ ಬಿಸಿ ಊಟಕ್ಕೆ ವಿದ್ಯಾರ್ಥಿಗಳ ಅನುಕೂಲವಾಗುವ ದೃಷ್ಟಿಯಿಂದ ತಟ್ಟೆ, ಲೋಟಗಳನ್ನು ವಿತರಿಸುತ್ತಿದೆ ಎಂದರು.

ತಮ್ಮ ಕ್ಷೇತ್ರದಲ್ಲಿ 1992 ರಿಂದ 2025 ರವರೆಗೆ ಧಾರ್ಮಿಕ ಯೋಜನೆ, ಧನ್ವಂತರಿ ಯೋಜನೆ, ಶೈಕ್ಷಣಿಕ ಯೋಜನೆ, ಸಾಮಾಜಿಕ ಯೋಜನೆ, ಸಾಂಸ್ಕೃತಿಕ ಯೋಜನೆ, ಸಾಮೂಹಿಕ ಉಪನಯನ, ಸಪ್ತಪದಿ ಯೋಜನೆ, ಗೃಹಲಕ್ಷ್ಮೀ ಯೋಜನೆ, ಆನಂದ ಜ್ಯೋತಿ ಯೋಜನೆ, ಅನ್ನದಾಸೋಹ ಯೋಜನೆಗಳಡಿಯಲ್ಲಿ ಕ್ಷೇತ್ರ ವತಿಯಿಂದ 20 ಕೋಟಿರೂಗಳನ್ನು ವ್ಯಯಿಸಲಾಗಿದ್ದು, ಇನ್ನು ಮುಂದಿನ ದಿನಗಳಲ್ಲೂ ಸಹ ಯೋಜನೆಗಳನ್ನು ಹೆಚ್ಚಿನ ರೀತಿಯಲ್ಲಿ ಮುಂದುವರೆಸಿಕೊಂಡು ಬರುವುದಾಗಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರೋಟರಿ ಸಂಸ್ಥೆ ಜಿಲ್ಲಾ ಗವರ್ನರ್ ಮಾತನಾಡಿ, 2025–26 ನೇ ಸಾಲಿನಲ್ಲಿ ಶ್ರೀ ಕ್ಷೇತ್ರದ ಧರ್ಮಕರ್ತರು ಮತ್ತವರ ಸಹೋದರರ ಸೇವೆ ಅಮೋಘವಾಗಿದ್ದು. ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಸಮಾಜಕ್ಕೆ ಅನನ್ಯ ಸೇವೆಯನ್ನು ಸಲ್ಲಿಸುತ್ತಿದೆ ಎಂದರು.

ಹೊರನಾಡು ಗ್ರಾಮ ಪಂಚಾಯತಿ ಅಧ್ಯಕ್ಷ ಮಧುಪ್ರಸಾದ್ ಜೈನ್ ಮಾತನಾಡಿ ಹೊರನಾಡು ಅಕ್ಕಪಕ್ಕದಲ್ಲಿ ಕುಗ್ರಾಮವಾಗಿದ್ದು. ಆ ಗ್ರಾಮಗಳಿಗೆ ಬೆಳಕನ್ನು ನೀಡುವ ಮೂಲಕ ಜನರ ಕಷ್ಟ–ಸುಖಗಳಿಗೆ ಶ್ರೀಕ್ಷೇತ್ರ ಹಲವು ಅಭಿವೃದ್ಧಿಗಳನ್ನು ಮಾಡವುದರ ಮೂಲಕ ಅಲ್ಲಿಯ ಜನರಿಗೆ ಜೀವನಾಧಾರವಾಗಿದೆ ಎಂದರೆ ತಪ್ಪಾಗಲಾರದು ಎಂದರು.

ವೇದಿಕೆಯಲ್ಲಿ ರಾಮನಾರಾಯಣ ಜೋಷಿ, ರಾಜಗೋಪಾಲ್ ಜೋಷಿ, ಗಿರಿಜಾಶಂಕರ್ ಜೋಷಿ ಉಪಸ್ಥಿತರಿದ್ದರು.

# ರಸಗೊಬ್ಬರ ದಾಸ್ತಾನು ಮಾಡದ ರೈತ ವಿರೋಧಿ ಸರ್ಕಾರ : ಕಲ್ಮರುಡಪ್ಪ



**ಚಿಕ್ಕಮಗಳೂರು:** ರಾಜ್ಯಸರ್ಕಾರ ರೈತರ ಬೇಡಿಕೆಗನುಗುಣವಾಗಿ ರಸಗೊಬ್ಬರ ದಾಸ್ತಾನು ಮಾಡುವಲ್ಲಿ ವಿಫಲವಾಗಿದ್ದು, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸದಲ್ಲಿ ತೊಡಗಿ ರೈತ ವಿರೋಧಿಯಾಗಿ ವರ್ತಿಸುತ್ತಿದೆ ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹೆಚ್.ಸಿ. ಕಲ್ಮರುಡಪ್ಪ ಆರೋಪಿಸಿದರು.

ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಸರ್ಕಾರ ವಲಯವಾರು ಅವಶ್ಯಕತೆ ಪ್ರಮಾಣವನ್ನು ಅಂದಾಜಿಸಿ ಮುಂಗಾರಿಗೂ ಮೊದಲೇ ಪತ್ರ ಮುಖೇನ ಕೇಂದ್ರಕ್ಕೆ ತಿಳಿಸಬೇಕಿತ್ತು. ಆದರೆ ಮುಖ್ಯಮಂತ್ರಿಗಳು ಕಳೆದ ತಿಂಗಳು ಪತ್ರ ಬರೆದು ಯೂರಿಯಾ ರಸಗೊಬ್ಬರವು 6.30 ಲಕ್ಷ ಮೆಟ್ರಿಕ್ ಟನ್ ಅವಶ್ಯಕತೆ ಇದೆ ಎಂದು ತಿಳಿಸಿದ್ದಾರೆ ಎಂದು ಹೇಳಿದರು.

ಆದರೆ ಕೇಂದ್ರ ಸರ್ಕಾರ 8.73 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರವನ್ನು ಹೆಚ್ಚಿಗೆ ನೀಡಿದ್ದು, ಉಳಿದ 2.43 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರವನ್ನು ಕಾಳಸಂತೆಕೋರರಿಗೆ ಮಾರಾಟ ಮಾಡುವ ಹುನ್ನಾರದಿಂದ ರಸಗೊಬ್ಬರ ಅಭಾವವನ್ನು ಸೃಷ್ಟಿಮಾಡಿ, ಕಣ್ಣು ಕಿವಿ ಇಲ್ಲದ ಸರ್ಕಾರವಾಗಿದೆ ಎಂದು ದೂರಿದರು.

ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನುಷ್ಠಾನಕ್ಕೆ ತರಲಾಗಿದ್ದ ರೈತರ ಮಕ್ಕಳ ವಿಧ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಲು 'ರೈತ ವಿದ್ಯಾನಿಧಿ', ರಾಜ್ಯದ 52 ಲಕ್ಷ ರೈತರಿಗೆ ಕಿಸಾನ್ ಸಮ್ಮಾನ್ ನಿಧಿಯಿಂದ ಪ್ರತೀ ರೈತರಿಗೆ 4 ಸಾವಿರ ರೂ ನಿಲ್ಲಿಸಲಾಗಿದೆ ಎಂದು ಲೇವಡಿ ಮಾಡಿದರು.

ರೈತರ ಕೃಷಿ ಪಂಪ್‌ಸೆಟ್‌ಗೆ ಟ್ರಾನ್ಸ್‌ಫಾರ್ಮರ್ ಅಳವಡಿಸಲು 25 ಸಾವಿರ ರೂ ನಿಗಧಿಪಡಿಸಲಾಗಿದ್ದು, ಇಂದಿನ ಕಾಂಗ್ರೆಸ್ ಸರ್ಕಾರ 3 ಲಕ್ಷ ರೂ ನೀಡಬೇಕು ಇದರ ಜೊತೆಗೆ ಒಂದು ಕಂಬಕ್ಕೆ 25 ಸಾವಿರ ರೂನಂತೆ ಹೆಚ್ಚುವರಿ ಹಣ ನೀಡಬೇಕಾಗಿದೆ ಎಂದ ಅವರು, ಮನೆಯ ವಿದ್ಯುತ್ ಬಿಲ್‌ನಲ್ಲಿ ಪ್ರತೀ ಯೂನಿಟ್‌ಗೆ 33 ಪೈಸೆಯಂತೆ ಇಪಿಪಿಸಿಎ ದರ ಹೊಸದಾಗಿ ಸೇರಿಸಲಾಗಿದೆ. ಮೊದಲಿದ್ದ ಸ್ಲಾಬ್ ಪದ್ಧತಿಯನ್ನು ರದ್ದುಮಾಡಿ ಪ್ರತೀ ಯೂನಿಟ್‌ಗೆ 5.78 ರೂ **(4ನೇ ಪುಟಕ್ಕೆ)**

### ಐತಿಹಾಸಿಕ ಕೋಟೆ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಹೆಚ್ಚಿದ ಸೌಲಭ್ಯ

# 2 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ

**ಚಿತ್ರದುರ್ಗ:** ಐತಿಹಾಸಿಕ ಕೋಟೆ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ರೂ.2 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಬುಧವಾರ ಲೋಕಾರ್ಪಣೆಗೊಳಿಸಿದರು.

ಕೋಟೆ ಮುಂಭಾಗದ ಮಯೂರ ಹೋಟೆಲ್ ಪಕ್ಕದಲ್ಲಿ 2018–19ನೇ ಸಾಲಿನ ಬಂಡವಾಳ ವೆಚ್ಚ ಯೋಜನೆಯಡಿ ಪ್ರವಾಸಿ ಮಾಹಿತಿ ಕೇಂದ್ರ, ಪಾರ್ಕಿಂಗ್ ಸೌಲಭ್ಯ, ಲಗೇಜ್ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಪ್ರವಾಸಿಗರಿಗೆ ವಿಶ್ರಾಂತಿ ಕೊಠಡಿ, ಮಹಿಳಾ ಮತ್ತು ಪುರುಷ ಸ್ನಾನಗೃಹ ಹಾಗೂ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

ಈ ವೇಳೆ ಮಾತನಾಡಿದ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ, ಪ್ರವಾಸೋದ್ಯಮ ಇಲಾಖೆಯಿಂದ ಕಾಮಗಾರಿಗಳು ಪೂರ್ಣಗೊಂಡು ಬಹಳ ದಿನಗಳು ಆಗಿದ್ದವು. ಕೆಲ ದಿನಗಳ ಹಿಂದೆ ಇಲ್ಲಿ ವೀಕ್ಷಣೆಗೆ ಆಗಮಿಸಿದ ವೇಳೆ, ಕಟ್ಟಡಗಳು ಪೂರ್ಣಗೊಂಡಿದ್ದು ಕಂಡು ಬಂದಿತು. ಶೀಘ್ರವೇ ಉದ್ಘಾಟನೆ ನೆರವೇರಿಸಿ ಬರುವ ಪ್ರವಾಸಗರಿಗೆ ಅನುಕೂಲ ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೆ, ಅದರಂತೆ ಇಂದು ಪ್ರವಾಸಿ ಮಾಹಿತಿ ಕೇಂದ್ರ, ಪಾರ್ಕಿಂಗ್ ಸೌಲಭ್ಯ, ಲಗೇಜ್ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಪ್ರವಾಸಿಗರಿಗೆ ವಿಶ್ರಾಂತಿ ಕೊಠಡಿ, ಶೌಚಾಲಯ ಹಾಗೂ ಸ್ನಾನ ಗೃಹಗಳನ್ನು ಲೋಕಾರ್ಪಣೆಗೊಳಿಸಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲಾಗಿದೆ. ಈ ಎಲ್ಲಾ ಸೌಲಭ್ಯಗಳು ಒಂದೇ ಆವರಣದ ಒಳಗಡೆ ಇದ್ದು, ರಕ್ಷಣೆಗಾಗಿ ಸುತ್ತಲೂ ಕಾಂಪೌಂಡ್ ನಿರ್ಮಿಸಲಾಗಿದೆ. ಐತಿಹಾಸಿಕ ಕೋಟೆ ವೀಕ್ಷಣೆಗೆ ಸಂಜೆಯವರೆಗೆ ಮಾತ್ರ ಅವಕಾಶವಿದ್ದು ಪ್ರವಾಸಿಗರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.



ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆರ್.ಶಿವಣ್ಣ, ಪೌರಾಯುಕ್ತೆ ಎಂ.ರೇಣುಕಾ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕಿ ಡಾ.ನಾಗವೇಣಿ, ಕೆಆರ್‌ಐಡಿಎಲ್ ಕಾರ್ಯಪಾಲಕ ಅಭಿಯಂತರ ಟಿ.ಎನ್.ವಿನಾಯಕ ಸೇರಿದಂತೆ ಮತ್ತಿರರು ಉಪಸ್ಥಿತರಿದ್ದರು.

# ಜ್ಯೋತಿನಗರ ಬಡಾವಣೆಗೆ ಮೂಲ ಸೌಕರ್ಯಕ್ಕೆ ಬದ್ಧ : ನಗರಸಭೆಅಧ್ಯಕ್ಷೆ ಶೀಲಾ ದಿನೇಶ್

**ಚಿಕ್ಕಮಗಳೂರು:** ನಗರದ ಜ್ಯೋತಿ ನಗರ ಬಡಾವಣೆಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದುಎಂದು ನಗರಸಭೆಅಧ್ಯಕ್ಷೆ ಶೀಲಾ ದಿನೇಶ್ ತಿಳಿಸಿದರು.

ನಗರದ ಜ್ಯೋತಿ ನಗರ ಬಡಾವಣೆಗೆ ಭೇಟಿನೀಡಿ ಇಲ್ಲಿನ ರಸ್ತೆ, ಚರಂಡಿ, ಉದ್ಯಾನವನ, ಖಾಲಿ ನಿವೇಶನಗಳ ಅವ್ಯವಸ್ಥೆಯನ್ನು ಪರಿಶೀಲಿಸಿ ನಂತರ ಬಡಾವಣೆಯಲ್ಲಿನ ಗಣಪತಿ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.

ಜ್ಯೋತಿ ನಗರ ಬಡಾವಣೆಯ ರಸ್ತೆಗಳು ಹೊಂಡ ಗುಂಡಿಗಳಿಂದ ಕೂಡಿದೆ. ಚರಂಡಿ ಹಾಗೂ ಉದ್ಯಾನವನಗಳು ಅವ್ಯವಸ್ಥೆಯಿಂದಕೂಡಿದ್ದು, ಖುದ್ದು ಪರಿಶೀಲಿಸಿದ್ದೇನೆ. ರಸ್ತೆ, ಚರಂಡಿ ಹಾಗೂ ಉದ್ಯಾನವನಗಳ ಅಭಿವೃದ್ಧಿಗೆ ಶ್ರಮಿಸುವುದಾಗಿ ಬಡಾವಣೆ ನಿವಾಸಿಗಳಿಗೆ ಭರವಸೆ ನೀಡಿದರು.

ನಗರಸಭೆ ಪೌರಾಯುಕ್ತ ಬಿ.ಸಿ.ಬಸವರಾಜ್ ಮಾತನಾಡಿ, ಬಡಾವಣೆಯ ರಸ್ತೆ ಹಾಗೂ ಚರಂಡಿಯನ್ನು ನಗರಸಭೆಯಿಂದ ಅಭಿವೃದ್ಧಿಪಡಿಸಲಾಗುವುದು. ರಸ್ತೆ ತಿರುವಿನಲ್ಲಿ ವಿದ್ಯುತ್ ಕಂಬವಿದ್ದು ವಾಹನ ಸವಾರರಿಗೆ ತೊಂದರೆಯಾಗುತ್ತಿದೆ ಎಂದು ಇಲ್ಲಿನ ನಿವಾಸಿಗಳು ಗಮನಕ್ಕೆ ತಂದಿದ್ದು ವಿದ್ಯುತ್ ಕಂಬ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು.



ಬಡಾವಣೆಯಲ್ಲಿ ಉದ್ಯಾನವನಗಳ ಜಾಗ ಒತ್ತುವರಿಯಾಗಿದೆ ಎಂದು ತಿಳಿದುಬಂದಿದ್ದು, ಉದ್ಯಾನವನಗಳ ಒತ್ತುವರಿಯನ್ನು ತೆರವುಗೊಳಿಸಲಾಗುವುದು ಹಾಗೂ ವಿಶಾಲ್ ಮಾರ್ಟ್ ಪಕ್ಕದಲ್ಲಿನ ರಸ್ತೆ ಒತ್ತುವರಿಯಾಗಿದೆ. ಕಿರಿದಾದ ರಸ್ತೆಯಿಂದ ವಾಹನ ದಟ್ಟಣೆ ಉಂಟಾಗುತ್ತಿದ್ದು, ಪ್ರತಿನಿತ್ಯ ಅಪಘಾತಗಳು ಉಂಟಾಗುತ್ತಿವೆ. ಈ ಹಿನ್ನಲೆಯಲ್ಲಿ ರಸ್ತೆ ಒತ್ತುವರಿಯನ್ನು ತೆರವುಗೊಳಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಬಡಾವಣೆಯ ನಿವಾಸಿ ರೇಖಾ ಹುಲಿಯಪ್ಪಗೌಡ ಮಾತನಾಡಿ, ಬಡಾವಣೆಯ ಸಾರಥಿ ಕಾಫಿಕ್ಯೂರಿಂಗ್ ಎದುರಿನ ರಸ್ತೆ ಹೊಂಡ ಗುಂಡಿಗಳಿಂದ ಕೂಡಿದ್ದು, ಸಂಚರಿಸುವುದು ಕಷ್ಟವಾಗಿದೆ. ಲಕ್ಷ್ಮೀಶ(ಪಾಪಣ್ಣ) ಎಂಬುವರ ಮನೆಯ ಮುಂಭಾಗದಲ್ಲಿ ಗಣಪತಿ ದೇವಸ್ಥಾನ ತಿರುಗುವ ರಸ್ತೆಯಲ್ಲಿ ವಿದ್ಯುತ್ ಕಂಬವಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಬಡಾವಣೆಯಲ್ಲಿ ಉದ್ಯಾನವನಕ್ಕೆ ಮೀಸಲಿಟ್ಟ ಜಾಗವನ್ನು ಗುರುತಿಸಿ ಒತ್ತುವರಿಯಾಗದಂತೆ ಸಂರಕ್ಷಿಸುವ ಜತೆಗೆ ಬಡಾವಣೆಯ ಅಭಿವೃದ್ಧಿ ಹಾಗೂ ಮೂಲಭೂತ ಸೌಲಭ್ಯವನ್ನು ಕಲ್ಪಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಗುರುಮಲ್ಲಪ್ಪ, ಸತೀಶ್ ಸೇರಿದಂತೆ ಬಡಾವಣೆಯ ನಿವಾಸಿಗಳು ಇದ್ದರು.

Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**